ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜನವರಿ 4 ಶನಿವಾರ 2025

ಸಂಪುಟ: 45 | ಸಂಚಿಕೆ: 258 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಬಿಜೆಪಿ ರಾಜ್ಯಾಧ್ಯಕ್ಷರ ಬದಲಾವಣೆ ಸುಳಿವು ನೀಡಿದ ಪ್ರಹ್ಲಾದ್ ಜೋಶಿ

● ವಿಜಯೇಂದ್ರ ಚುನಾವಣೆ ಮೂಲಕ ಆಯ್ಕೆಯಾದ ಅಧ್ಯಕ್ಷರಲ್ಲ ● ರಾಜ್ಯಾಧ್ಯಕ್ಷರ ಆಯ್ಕೆ ಪ್ರಕ್ರಿಯೆ ಈಗಾಗಲೇ ಆರಂಭವಾಗಿದೆ ● ಕೇಂದ್ರ ಸಚಿವ ಶಿವರಾಜ್‌ಸಿಂಗ್ ಚೌಹಾಣ್ ರಾಜ್ಯದಲ್ಲಿ ಚುನಾವಣಾಧಿಕಾರಿಯಾಗಿದ್ದಾರೆ




ಪ್ರಹ್ಲಾದ್ ಜೋಶಿ

ಮಂಗಳೂರು: ಬಿಜೆಪಿ ರಾಜ್ಯಾಧ್ಯಕ್ಷರನ್ನು ಬದಲಾಯಿಸಬೇಕು ಎಂದು ಬಸನಗೌಡ ಪಾಟೀಲ್ ಯತ್ನಾಳ್ ತಂಡ ಆಗ್ರಹಿಸುತ್ತಿರುವ ಬೆನ್ನಲ್ಲೇ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ರಾಜ್ಯದಲ್ಲಿ ಪಕ್ಷದ ಅಧ್ಯಕ್ಷರ ಬದಲಾವಣೆ ಸುಳಿವು ನೀಡಿದ್ದಾರೆ.

ಮಂಗಳೂರಿನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಚುನಾವಣೆ ಮೂಲಕ ಮುಂದಿನ ಬಿಜೆಪಿ ರಾಜ್ಯಾಧ್ಯಕ್ಷರ ಆಯ್ಕೆ ನಡೆಯಲಿದೆ. ಶಿವರಾಜ್‌ಸಿಂಗ್ ಚೌಹಾಣ್ ರಾಜ್ಯದಲ್ಲಿ ಚುನಾವಣಾಧಿಕಾರಿಯಾಗಿದ್ದಾರೆ ಎಂದು ತಿಳಿಸಿದ್ದಾರೆ. ಈಗಿನ ರಾಜ್ಯಾಧ್ಯಕ್ಷರು ಚುನಾವಣೆ ಮೂಲಕ ಆಯ್ಕೆಯಾದವರಲ್ಲ. ಪಕ್ಷದ ಹೈಕಮಾಂಡ್ ಎಲ್ಲರ ಸಮ್ಮತಿ ಮೇರೆಗೆ ಅವರನ್ನು ನೇಮಕ ಮಾಡಿದೆ ಎಂದರು.

ನಾನು ಕರ್ನಾಟಕ ರಾಜ್ಯಾಧ್ಯಕ್ಷರ ಬದಲಾವಣೆ ಆಗುತ್ತದೆ ಎಂದು ಹೇಳಿಲ್ಲ. ಇಡೀ ದೇಶಾದ್ಯಂತ ಮಂಡಲ, ಬೂತ್, ಜಿಲ್ಲಾಧ್ಯಕ್ಷರು, ರಾಜ್ಯಾಧ್ಯಕ್ಷರು, ರಾಷ್ಟ್ರಾಧ್ಯಕ್ಷರ ಬದಲಾವಣೆ ಪ್ರಕ್ರಿಯೆ ನಡೆಯುತ್ತಿದೆ. ಕರ್ನಾಟಕ ಮಾತ್ರವಲ್ಲದೇ ಎಲ್ಲಾ ಕಡೆಯಲ್ಲೂ ಅದರ ಪ್ರಕ್ರಿಯೆ ನಡೆಯುತ್ತಿದೆ. ಅದರಲ್ಲಿ ಹಾಲಿ ಇದ್ದವರೇ ಮತ್ತೊಮ್ಮೆ ಆಯ್ಕೆ ಆಗಲೂಬಹುದು. ನಾಲ್ಕೈದು ತಿಂಗಳ ■ 6ನೇ ಪುಟಕ್ಕೆ



ಬಿ.ವೈ.ವಿಜಯೇಂದ್ರ

ಚೀನಾದಲ್ಲಿ ಕೋವಿಡ್ ಮಾದರಿಯ ವೈರಸ್ ಆತಂಕ; ತುರ್ತು ಪರಿಸ್ಥಿತಿ ಘೋಷಣೆ



ಬೀಜಿಂಗ್, ಜ.3–ಕೋವಿಡ್ ವೈರಾಣು ಜಗತ್ತನ್ನು ಕಾಡಿದ 5 ವರ್ಷಗಳ ನಂತರ ಈಗ ಚೀನಾದಲ್ಲಿ ಮತ್ತೊಂದು ನಿಗೂಢ ವೈರಾಣು ಎದುರಾಗಿದ್ದು ಆತಂಕ ಹೆಚ್ಚಿಸಿದೆ.

ಹ್ಯೂಮನ್ ಮೆಟಾಪ್ನ್ಯೂಮೊವೈರಸ್ (human metapneumovirus - HMPV) ಈ ಬಾರಿ ಚೀನಾದಲ್ಲಿ ಕಾಣಿಸಿಕೊಂಡಿರುವ ಹೊಸ ವೈರಾಣು. ನೆರೆಯ ರಾಷ್ಟ್ರ ಮತ್ತೊಮ್ಮೆ ಹೊಸ ವೈರಾಣುವಿನಿಂದ ಪಾರಾಗಲು ಸ್ಕ್ರೀನಿಂಗ್, ಪತ್ತೆ ಮತ್ತು ಪ್ರತ್ಯೇಕತೆಯ ಪ್ರೋಟೋಕಾಲ್‌ಗಳ ಮೊರೆ ಹೋಗಿದೆ. ಚೀನಾದಲ್ಲಿ HMPVಯ ವೈರಾಣು ಸೋಂಕು ಪ್ರಕರಣಗಳು ಹೆಚ್ಚುತ್ತಿದ್ದು ವಿಶೇಷವಾಗಿ ಉತ್ತರ ಪ್ರಾಂತ್ಯಗಳಲ್ಲಿ 14 ವರ್ಷದೊಳಗಿನವರನ್ನು ಈ ವೈರಾಣು ಹೆಚ್ಚು ಬಾಧಿಸುತ್ತಿದೆ ಎಂದು ಅಧಿಕಾರಿಗಳು ಹೇಳಿರುವುದನ್ನು ಉಲ್ಲೇಖಿಸಿ ರಾಯಿಟರ್ಸ್ ವರದಿ ಮಾಡಿದೆ. ಕೋವಿಡ್ ಮಾದರಿಯ ಸ್ಥಿತಿ ಎದುರಾಗದಂತೆ ತಡೆಗಟ್ಟಲು ಚೀನಾ ಸರ್ಕಾರ ಅಜ್ಞಾತ ವೈರಸ್‌ನ್ನು ನಿಭಾಯಿಸಲು ಮೇಲ್ವಿಚಾರಣಾ ವ್ಯವಸ್ಥೆಯನ್ನು ಪ್ರಾಯೋಗಿಕವಾಗಿ ನಡೆಸುತ್ತಿದೆ. ರಾಯಿಟರ್ಸ್ ಪ್ರಕಾರ, ■ 6ನೇ ಪುಟಕ್ಕೆ

ಫೆ.13ಕ್ಕೆ ಮಲೆಮಹದೇಶ್ವರ ಬೆಟ್ಟದಲ್ಲಿ ಸಂಪುಟ ಸಭೆ

ಚಾಮರಾಜನಗರ, ಜ.3–ಮಲೆ ಮಹದೇಶ್ವರ ಬೆಟ್ಟದಲ್ಲಿ ಇದೇ ಫೆ.13ಕ್ಕೆ ರಾಜ್ಯ ಸಚಿವ ಸಂಪುಟ ಸಭೆ ನಡೆಸಲು ಸರ್ಕಾರ ನಿರ್ಧರಿಸಿದೆ. ಬೆಳಗಾವಿ, ಕಲಬುರಗಿ ನಂತರ ಇದೀಗ ಚಾಮರಾಜನಗರ ಜಿಲ್ಲೆಯಲ್ಲಿ ಕ್ಯಾಬಿನೆಟ್ ಮೀಟಿಂಗ್ ನಿಕ್ಕಿಯಾಗಿದೆ. ಗಿರಿಜನರಿಗೆ ವಸತಿ ಸೇರಿದಂತೆ ವಿಶೇಷ ಪ್ಯಾಕೇಜ್ ಘೋಷಣೆ ಸಾಧ್ಯತೆ ಇದೆ. ಜಿಲ್ಲಾಡಳಿತದಿಂದ ಈಗಾಗಲೇ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಕೆಯಾಗಿದೆ. ಕ್ಯಾಬಿನೆಟ್ ಮೀಟಿಂಗ್‌ಗೆ ಜಿಲ್ಲಾಡಳಿತ ದಿಂದ ಸಿದ್ಧತೆ ಆರಂಭವಾಗಿದೆ. ಹನೂರು ಶಾಸಕ ಮಂಜುನಾಥ್ ಅವರು ಸ್ಥಳ ಪರಿ ಶೀಲನೆ ಮಾಡಿದ್ದಾರೆ ಎಂದು ಚಾಮರಾಜನಗರ ಡಿಸಿ ಶಿಲ್ಪಾನಾಗ್ ತಿಳಿಸಿದ್ದಾರೆ.

ಪೂರ್ಣಾವಧಿಗೆ ನೀವೇ ಮುಖ್ಯಮಂತ್ರಿಗಳಾಗಿರಿ...

● ಡಿ.ಕೆ.ಶಿವಕುಮಾರ್‌ಗೆ ಅಧಿಕಾರ ಬಿಟ್ಟುಕೊಡಬೇಡಿ; ಆಪ್ತ ಸಚಿವರಿಂದ ಮುಖ್ಯಮಂತ್ರಿ ಸಿದ್ದರಾಮಯ್ಯರಿಗೆ ಸಂದೇಶ ● ಸಚಿವ ಸತೀಶ್ ಜಾರಕಿಹೊಳಿ ಮನೆಯ ಔತಣಕೂಟದಲ್ಲಿ 'ರಾಜಕೀಯ ಚರ್ಚಾಕೂಟ'



ಬೆಂಗಳೂರು, ಜ.3(ಕೆಎಂಶಿ)– ಪೂರ್ಣಾವಧಿ ಅಧಿಕಾರ ಮುಗಿಸಿ, ಯಾರ ಒತ್ತಡಕ್ಕೂ ಮಣಿಯದೆ ಒಳ್ಳೆ ಆಡಳಿತ ನೀಡಿ, ನಿಮ್ಮ ಜೊತೆ ನಾವಿದ್ದೇವೆ ಎಂದು ಸಚಿವರುಗಳು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪೂರ್ಣ ಬೆಂಬಲ ವ್ಯಕ್ತಪಡಿಸಿದ್ದಾರೆ.

ಪ್ರದೇಶ ಕಾಂಗ್ರೆಸ್ ಅಧ್ಯಕ್ಷರೂ ಆದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಅಧಿಕಾರ ಬಿಟ್ಟುಕೊಡಬೇಡಿ, ಅವರನ್ನು ನಾವು ನಾಯಕರಾಗಿ ಒಪ್ಪಿಕೊಳ್ಳಲು ಸಿದ್ಧರಿಲ್ಲ ಎಂದು ಸ್ಪಷ್ಟವಾಗಿ ತಿಳಿಸಿದ್ದಾರೆ.

ಗುರುವಾರ ಸಂಪುಟ ಸಭೆ ನಂತರ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ತಮ್ಮ ನಿವಾಸದಲ್ಲಿ, ಮಂತ್ರಿಗಳು ಹಾಗೂ ಹಿರಿಯ ಶಾಸಕರಿಗೆ ಏರ್ಪಡಿಸಿದ್ದ ಔತಣಕೂಟದಲ್ಲಿ ಸಿದ್ದರಾಮಯ್ಯ ಅವರಿಗೆ ಈ ಸಂದೇಶ ನೀಡಿದ್ದಾರೆ.



ಸತೀಶ್ ಜಾರಕಿಹೊಳಿ

ಔತಣಕೂಟಕ್ಕೂ ಮೊದಲು ಅನೌಪಚಾರಿಕವಾಗಿ ಮಾತನಾಡುವಾಗ ಜಾರಕಿಹೊಳಿ ಅವರೇ ವಿಷಯ ಪ್ರಸ್ತಾಪಿಸಿ, ಶಿವಕುಮಾರ್ ನಾಯಕತ್ವ ಒಪ್ಪಲು ನಾವು ಸಿದ್ಧರಿಲ್ಲ. 2028ರವರೆಗೂ ನೀವೇ ಅಧಿಕಾರದಲ್ಲಿ ಮುಂದುವರೆಯಬೇಕು. ಆ ನಂತರ ನಾನು, ನಾಯಕತ್ವ ವಹಿಸಿಕೊಳ್ಳಲು ಸಿದ್ಧ. ಒಂದು ವೇಳೆ ವರಿಷ್ಠರು ನನಗೆ ಅವಕಾಶ ಮಾಡಿಕೊಡದಿದ್ದರೆ, ಶಿವಕುಮಾರ್ ನಾಯಕತ್ವಕ್ಕೆ ಅಂದೂ ನನ್ನ ವಿರೋಧ ಇದ್ದೇ ಇರುತ್ತದೆ ಎಂದಿದ್ದಾರೆ. ಸತೀಶ್ ನೀಡಿದ ಹೇಳಿಕೆಗೆ ಮುಖ್ಯಮಂತ್ರಿ ಅವರೇ ಸ್ವಲ್ಪ ವಿಚಲಿತರಾದಂತೆ ಕಂಡರಾದರೂ ಉಳಿದ ಕೆಲವು ಸಚಿವರುಗಳು ಇದಕ್ಕೆ ಧನಿಗೂಡಿಸಿದರು. ■ 6ನೇ ಪುಟಕ್ಕೆ

ಮುಖ್ಯಮಂತ್ರಿಗಳ ಬದಲಾವಣೆಗಾಗಿ ಕಾಂಗ್ರೆಸ್ಸಿನ ಒಕ್ಕಲಿಗ ಶಾಸಕರು ಸಭೆ ಸೇರಿದ್ದಾರೆ ಎನ್ನುವುದು ಸುಳ್ಳು: ಸಿಎಂ

ಮುಖ್ಯಮಂತ್ರಿಗಳ ಬದಲಾವಣೆಗಾಗಿ ಕಾಂಗ್ರೆಸ್ಸಿನ ಕೆಲವು ಒಕ್ಕಲಿಗ ಶಾಸಕರು ಪ್ರತ್ಯೇಕ ಸಭೆ ನಡೆಸಿದ್ದಾರೆ ಎನ್ನುವುದು ಸುಳ್ಳು ಎಂದು ಸಿಎಂ ಸಿದ್ದರಾಮಯ್ಯ ಸ್ಪಷ್ಟಪಡಿಸಿದರು. ಮಾಧ್ಯಮದವರೊಂದಿಗೆ ಇಂದು ಮಾತನಾಡಿದ ಅವರು ಊಟಕ್ಕೆ ಸೇರಿದರೆ ಸಭೆ ನಡೆಸಿದ್ದಾರೆ ಎಂದು ಮಾಧ್ಯಮದವರು ಭಾವಿಸಿದ್ದಾರೆ ಎಂದರು.

ನಾಳೆಯಿಂದ ಮೈಸೂರಿನ ಜೆಎಸ್ಎಸ್ ಅರ್ಬನ್ ಹಾತ್‌ನಲ್ಲಿ 'ಸಿಲ್ಕ್ ಫ್ಯಾಬ್'

ಮೈಸೂರು, ಜ.3(ಜಿಎ)–ಜೆಎಸ್ಎಸ್ ಅರ್ಬನ್ ಹಾತ್‌ನಲ್ಲಿ ಜ.5ರಿಂದ 18 ರವರೆಗೆ ಕೇಂದ್ರ ಕೈಮಗ್ಗ ಅಭಿವೃದ್ಧಿ ನಿಗಮ, ಕೈಮಗ್ಗ, ಜವಳಿ ಸಚಿವಾಲಯದ ಸಂಯುಕ್ತಾಶ್ರಯದಲ್ಲಿ ರೇಷ್ಮೆ ಸೀರೆಗಳು ಮತ್ತು ಕೈಮಗ್ಗ ವಸ್ತುಗಳ ಪ್ರದರ್ಶನ ಮತ್ತು ಮಾರಾಟ ಮೇಳ 'ಸಿಲ್ಕ್ ಫ್ಯಾಬ್' ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಉಪ ನಿರ್ದೇಶಕ ಬಿ.ಎಸ್. ಸೋಮಶೇಖರ್ ಈ ವಿಷಯ ತಿಳಿಸಿ, ಕೈಮಗ್ಗ ನೇಕಾರರು, ನೇಕಾರರ ಸಹಕಾರ ಸಂಘಗಳಿಗೆ ಹೆಚ್ಚಿನ ಮಾರುಕಟ್ಟೆ ಒದಗಿಸುವ ಉದ್ದೇಶದಿಂದ ಈ ಮೇಳ ಆಯೋಜಿಸಲಾಗಿದ್ದು, ಮೇಳದಲ್ಲಿ ದೇಶದ ವಿವಿಧ ರಾಜ್ಯಗಳಿಂದ ಸುಮಾರು 60ಕ್ಕೂ ಹೆಚ್ಚು ಕೈಮಗ್ಗ ನೇಕಾರರು ಮತ್ತು ಕುಶಲಕರ್ಮಿಗಳು ಪಾಲ್ಗೊಂಡು ಪ್ರದರ್ಶನ ಮತ್ತು ಮಾರಾಟ ಮಾಡಲಿದ್ದಾರೆ. ಈ ವೇಳೆ ದೇಶದ 17ಕ್ಕೂ ಹೆಚ್ಚು ರಾಜ್ಯಗಳ ರೇಷ್ಮೆ ಸೀರೆ ಮತ್ತು ಕೈಮಗ್ಗ ಉತ್ಪನ್ನಗಳು ರಿಯಾಯಿತಿ ದರದಲ್ಲಿ ಸಿಗಲಿವೆ ಎಂದು ತಿಳಿಸಿದರು.

ರಾಜ್ಯದ ರೇಷ್ಮೆ, ಕಾಟನ್ ಸೀರೆಗಳು, ನೆಲ ಹೊದಿಕೆಗಳು, ಬೆಡ್‌ಶೀಟ್‌ಗಳು, ಪರಿಶುದ್ಧ ಕಾಂಜೀವರಂ ಸೀರೆಗಳು, ಬಿಹಾರ್ ಮತ್ತು ಜಾರ್ಖಂಡ್ ರಾಜ್ಯಗಳ ಸೀರೆಗಳು, ಪಶ್ಚಿಮ ಬಂಗಾಳದ ಕಾಂತಾ ಸೀರೆ, ಬಲಚುರಿ ಸೀರೆ, ಬುಟಿಕ್ ಸೀರೆಗಳು ದೊರೆಯಲಿದ್ದು, ನಿತ್ಯ ಬೆಳಗ್ಗೆ 10ರಿಂದ ರಾತ್ರಿ 8.30 ರವರೆಗೆ ಮೇಳ ಇರಲಿದೆ. ಜ.6ರಂದು ಸಂಜೆ 4 ಗಂಟೆಗೆ ಅಧಿಕೃತವಾಗಿ ಗಣ್ಯರು ಚಾಲನೆ ನೀಡಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಅರ್ಬನ್ ಹಾತ್ ಯೋಜನಾಧಿಕಾರಿ ಎಂ.ಶಿವನಂಜಸ್ವಾಮಿ, ಸಂಯೋಜನಾಧಿಕಾರಿ ರಾಕೇಶ್ ರೈ ಉಪಸ್ಥಿತರಿದ್ದರು.

ಅಕ್ಷರ ಸಂಸ್ಕೃತಿಗೂ ಮುನ್ನ 'ದಿನದರ್ಶಿಕೆ' ಪರಿಕಲ್ಪನೆ ಪ್ರಚಲಿತದಲ್ಲಿತ್ತು



ಕರ್ನಾಟಕ ವೀರಕೇಸರಿ ಪಡೆ ವತಿಯಿಂದ 2025ರ ದಿನದರ್ಶಿಕೆಯನ್ನು ಪತ್ರಕರ್ತರೂ ಆದ ಸಾಹಿತಿ ಬನ್ನೂರು ಕೆ.ರಾಜು ಬಿಡುಗಡೆ ಮಾಡಿದರು.


ಸಾಹಿತಿ ಬನ್ನೂರು ರಾಜು ಅಭಿಮತ

ಮೈಸೂರು, ಜ. 3–ದಿನದರ್ಶಿಕೆ ಇಲ್ಲವೆ ಕ್ಯಾಲೆಂಡರ್ ಎಂಬುದು ನಮ್ಮಲ್ಲಿ ಅಕ್ಷರ ಸಂಸ್ಕೃತಿಗೂ ಮೊದಲೇ ಇದ್ದು ಅದು ಕಾಲಕ್ಕೆ ತಕ್ಕಂತೆ ಆಯಾಯ ಕಾಲಘಟ್ಟಗಳಲ್ಲಿ ತಂತ್ರಜ್ಞಾನದೊಡನೆ ಬೆಳೆದು ಪ್ರಸ್ತುತ ಆಧುನಿಕ ಜಗತ್ತಿನಲ್ಲಿ ಬಹು ವರ್ಣಮಯವಾಗಿ ವಿವಿಧ ರೂಪಗಳಲ್ಲಿ ಜನಾಕರ್ಷಣೀಯವಾಗಿದೆ ಎಂದು ಪತ್ರಕರ್ತರೂ ಆದ ಸಾಹಿತಿ ಬನ್ನೂರು ಕೆ.ರಾಜು ಹೇಳಿದರು.

ಮೈಸೂರು ಕೆ.ಆರ್.ಮೊಹಲ್ಲಾದ ಅಗ್ರಹಾರದಲ್ಲಿರುವ ನೂರೊಂದು ಗಣಪತಿ ದೇವಸ್ಥಾನದಲ್ಲಿ ಕರ್ನಾಟಕ ವೀರಕೇಸರಿ ಪಡೆ ವತಿಯಿಂದ 2025ರ ದಿನದರ್ಶಿಕೆ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಓರ್ವ ವ್ಯಕ್ತಿ ಮಾಡಲು ಕಷ್ಟ ಎನಿಸಿದ್ದನ್ನು ಒಂದು ಸಂಘ ಅಥವಾ ಒಂದು ಸಂಘಟನೆ ಸುಲಭವಾಗಿ ಮಾಡಬಲ್ಲದು. ಹಾಗಾಗಿ ಸಂಘ ಶಕ್ತಿ ಅದರಲ್ಲೂ ವಿಶೇಷವಾಗಿ ಹಿರಿಯರ ಮಾರ್ಗದರ್ಶನದ ಯುವ ಶಕ್ತಿ ಬಹು ದೊಡ್ಡದು ಎಂದರು.

ಇಂದಿನ ವೇಗದ ಜಗತ್ತಿನಲ್ಲಿ ಅಷ್ಟೇ ವೇಗವಾಗಿ ಕಾಲದ ಬಗ್ಗೆ ಅರಿವು ಮೂಡಿಸಲು, ಕಾಲ ಕಾಲಕ್ಕೆ ಕಾಲಪ್ರಜ್ಞೆಯನ್ನು ತಿಳಿಸಲು ಸದಾ ನಮ್ಮ ಜೊತೆ ಇರುವಂತಹ ವಿಶೇಷ ಗೆಳೆಯ ಅರ್ಥಾತ್ ಗೆಳತಿ ದಿನದರ್ಶಿಕೆ. ಇದು ಪುಟ್ಟ ಪುಟ್ಟ ಪಾಕೆಟ್ ಕ್ಯಾಲೆಂಡರ್‌ಗಳಿಂದ ಹಿಡಿದು ಅಂದ–ಚೆಂದದ ಆಕರ್ಷಣೀಯ ಬಹುವರ್ಣಗಳ ಬೃಹತ್ ಕ್ಯಾಲೆಂಡರ್‌ಗಳ ತನಕವೂ ಎಲ್ಲೆಡೆ ಲಭ್ಯ. ಕ್ಯಾಲೆಂಡರ್‌ಗಳಿಲ್ಲದ ಸ್ಥಳಗಳೇ ಇಲ್ಲವೆಂಬಷ್ಟರ ಮಟ್ಟಿಗೆ ಕ್ಯಾಲೆಂಡರ್‌ಗಳು ನಮ್ಮನ್ನು ಆವರಿಸಿಕೊಂಡಿವೆ. ಹಾಗೆಯೇ ಕಾಲ ನಿರ್ಣಯದ ಇಂತಹ ಜನೋಪಯೋಗಿ ದಿನದರ್ಶಿಕೆಗಳಿಲ್ಲದೆ ಜೀವಿಸುವುದೇ ಕಷ್ಟ ಎನಿಸಿದ್ದು, ಇವು ಪ್ರತಿಯೊಬ್ಬರಿಗೂ ಇಂದು ಅನಿವಾರ್ಯವಾಗಿವೆ. ಕ್ಯಾಲೆಂಡರ್‌ಗಳಿಲ್ಲದ ನಗರ, ಊರು, ಕೇರಿ, ಮನೆ, ಮಠ, ಶಾಲೆ, ಕಾಲೇಜು, ಕಚೇರಿಗಳು ಹೀಗೆ ಯಾವುದೂ ಇಲ್ಲವೆನ್ನಬಹುದು. ಇಂಥ ಬಹೂಪಯೋಗಿ ಕ್ಯಾಲೆಂಡರ್ ಎಲ್ಲರಲ್ಲೂ, ಎಲ್ಲದರಲ್ಲೂ ಇದ್ದು ಸರ್ವಾಂತರ್ಯಾಮಿಯಾಗಿದೆ ಎಂದು ಹೇಳಿದರು. ನೂರೊಂದು ಗಣಪತಿ ದೇವಸ್ಥಾನದ ಪ್ರಧಾನ ಅರ್ಚಕ ಸುನಿಲ್ ಕುಮಾರ್ ಕನ್ನಡ ಹೋರಾಟಗಾರರಾದ ಎಸ್. ಬಾಲಕೃಷ್ಣ, ಬಿ.ಎ.ಶಿವಶಂಕರ, ತೇಜಸ್ ಲೋಕೇಶ್ ಗೌಡ, ಕರ್ನಾಟಕ ವೀರ ಕೇಸರಿ ಪಡೆಯ ಅಧ್ಯಕ್ಷ ಮಧುವನ ಚಂದ್ರು, ಗೌರವಾಧ್ಯಕ್ಷ ರಾಮ ನಾಯಕ ಜೆ.ಹೊಸಕೋಟೆ, ಉಪಾಧ್ಯಕ್ಷ ಎಂ. ಕುಮಾರ್ ಮಹಿಳಾ ಘಟಕದ ಅಧ್ಯಕ್ಷೆ ರಾಜೇಶ್ವರಿ, ಮೈಸೂರು ಜಿಲ್ಲಾಧ್ಯಕ್ಷ ಮಹಾದೇವು, ಸಂಘಟನಾ ಕಾರ್ಯದರ್ಶಿ ಬಿ. ಮರಿಸ್ವಾಮಿ, ತಾಲೂಕು ಅಧ್ಯಕ್ಷ ಸಿದ್ದರಾಜು, ಗೌರವ ಸಲಹೆಗಾರ ಬಸವರಾಜಪ್ಪ ಮತ್ತಿತರರು ಉಪಸ್ಥಿತರಿದ್ದರು.

ಕ್ಯಾಲೆಂಡರ್ ಬಿಡುಗಡೆ



ಸಿಂಹದಮರಿ ಸೇವಾ ಟ್ರಸ್ಟ್ ವತಿಯಿಂದ ಹೊರತರಲಾಗಿರುವ 2025ನೇ ಸಾಲಿನ ನೂತನ ಕ್ಯಾಲೆಂಡರ್ ಅನ್ನು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಬಿಡುಗಡೆ ಮಾಡಿದರು. ಸಂಘದ ಅಧ್ಯಕ್ಷ ನಂಜುಂಡಸ್ವಾಮಿ, ಸದಸ್ಯರಾದ ರೂಪೇಶ್, ದರ್ಶನ್ ಯದುರಾಜ್, ನವೀನ್, ಪ್ರಾಣೇಶ್, ರವಿ, ದಿನೇಶ್ ಮಾಲಿ, ಮುರಳೀಧರ್, ಪ್ರವೀಣ್, ವಿನೋದ್ ಕುಮಾರ್, ನಂಜುಂಡಸ್ವಾಮಿ, ಪ್ರಶಾಂತ್, ಸುರೇಶ್, ಯೋಗೇಶ್, ಶಿವು, ಮಾಧುಗೌಡ ಈ ವೇಳೆ ಉಪಸ್ಥಿತರಿದ್ದರು.



ಶ್ರೀ ಚಾಮುಂಡೇಶ್ವರಿ ವಿವಿಧೋದ್ದೇಶ ಸಹಕಾರ ಸಂಘದ 2025ನೇ ಸಾಲಿನ ಕ್ಯಾಲೆಂಡರ್ ಅನ್ನು ಶಾಸಕ ಟಿ.ಎಸ್. ಶ್ರೀವತ್ಸ ಬಿಡುಗಡೆ ಮಾಡಿದರು. ಸಂಘದ ಅಧ್ಯಕ್ಷ ರಾಜಕುಮಾರ್, ಉಪಾಧ್ಯಕ್ಷ ಕುಮಾರ್, ನಿರ್ದೇಶಕರಾದ ಜಯರಾಮ್, ಹರೀಶ್, ಮಾದೇವ್, ಬಿಜೆಪಿ ಮುಖಂಡರಾದ ಎಸ್.ಆರ್.ಗೋಪಾಲ್‌ರಾವ್, ಗೋಪಾಲ್ ರಾಜ, ಜಗದೀಶ್, ಸತೀಶ್ ಮತ್ತಿತರರು ಉಪಸ್ಥಿತರಿದ್ದರು.

ಎಸ್.ಡಿ.ರಾಣಿ ನಿಧನ



ಮೈಸೂರು, ಜ.3– ಮೈಸೂರಿನ ಬನ್ನಿಮಂಟಪ, ಇಡಬ್ಲ್ಯೂಎಸ್ ಮೂರನೇ ಹಂತದ ದಿವಂಗತ ಕುಮಾರ್ ಅವರ ಪತ್ನಿ ಎಸ್.ಡಿ. ರಾಣಿ(75) ಅವರು ಶುಕ್ರವಾರ ನಿಧನರಾದರು. ಇವರು ಮಕ್ಕಳಾದ ಸತೀಶ್, ಪಲ್ಲವಿ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಶನಿವಾರ ಮಧ್ಯಾಹ್ನ 3 ಗಂಟೆಗೆ ಜೋಡಿ ತೆಂಗಿನ ಮರ ರಸ್ತೆಯ ರುದ್ರಭೂಮಿಯಲ್ಲಿ ಅಂತ್ಯಸಂಸ್ಕಾರ ನೆರವೇರಲಿದೆ ಎಂದು ಮೃತರ ಕುಟುಂಬದವರು ತಿಳಿಸಿದ್ದಾರೆ.

ಎಂ.ಬಿ.ನಿಜಗುಣ



ಮೈಸೂರು, ಜ.3– ಮೈಸೂರಿನ ಲಕ್ಷ್ಮೀಪುರಂ ನಿವಾಸಿಯಾಗಿದ್ದ ಎಂ.ಬಿ.ನಿಜಗುಣ(79) ಅವರು ಶುಕ್ರವಾರ ನಿಧನರಾದರು.

ಇವರು ಮೈಸೂರು ಗುರುಸ್ವೀಟ್ ಮಾರ್ಟ್ ಮಾಲೀಕರಾಗಿದ್ದ ಎಂ.ಬಸವಣ್ಣ ಮತ್ತು ಕೆಂಪನಂಜಮ್ಮನವರ ಪುತ್ರಿ ಹಾಗೂ ನಗರ್ಲೆ ಎಸ್.ಮಹಾಲಿಂಗಣ್ಣನವರ ಧರ್ಮಪತ್ನಿ. ಮೃತರು ಪುತ್ರಿ ಹಾಗೂ ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಇಂದು ರಾತ್ರಿ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಜ.18, 19ರಂದು ಬ್ರಾಹ್ಮಣ ಮಹಾ ಸಮ್ಮೇಳನ: ಪ್ರಚಾರ ವಾಹನಕ್ಕೆ ಅಶೋಕ ಹಾರನಹಳ್ಳಿ ಚಾಲನೆ



ಬ್ರಾಹ್ಮಣ ಮಹಾ ಸಮ್ಮೇಳನದ ಪ್ರಚಾರದ ವಾಹನಕ್ಕೆ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯ ಘಟಕದ ಅಧ್ಯಕ್ಷ ಅಶೋಕ ಹಾರನಹಳ್ಳಿ ಚಾಲನೆ ನೀಡಿದರು.

ಮೈಸೂರು, ಜ.3–50ರ ಸುವರ್ಣ ಸಂಭ್ರಮದ ಅಂಗವಾಗಿ ಬ್ರಾಹ್ಮಣ ಮಹಾ ಸಮ್ಮೇಳನವನ್ನು ಜನವರಿ 18 ಹಾಗೂ 19ರಂದು ಬೆಂಗಳೂರಿನ ಅರಮನೆ ಮೈದಾನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯ ಘಟಕದ ಅಧ್ಯಕ್ಷ ಅಶೋಕ ಹಾರನಹಳ್ಳಿ ತಿಳಿಸಿದರು

ಮೈಸೂರಿನ ಅಗ್ರಹಾರದ ಅಭಿನವ ಶಂಕರಾಲಯ. ಶಂಕರ ಮಠದ ಆವರಣದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ವತಿಯಿಂದ ಬ್ರಾಹ್ಮಣ ಮಹಾ ಸಮ್ಮೇಳನದ ಪ್ರಚಾರದ ವಾಹನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ರಾಜ್ಯ ಹಾಗೂ ದೇಶದಲ್ಲಿ ಬ್ರಾಹ್ಮಣರು ತಮ್ಮ ಹಕ್ಕುಗಳನ್ನು ಪಡೆಯಲು ಮುಂದಾಗಬೇಕು. ಇತರ ಸಮಾಜಗಳಂತೆ ನಾವು ಸರ್ಕಾರದ ಸೌಲಭ್ಯ ಪಡೆಯಬೇಕು. ಮೊದಲು ನಮ್ಮ ಒಳಪಂಗಡ, ಅಚಾರ–ವಿಚಾರಗಳನ್ನು ಮನೆಯೊಳಗೆ ಮಾತ್ರ ಸೀಮಿತವಾಗಿಟ್ಟುಕೊಂಡು ನಾವೆಲ್ಲರೂ ಒಂದೇ ಎನ್ನುವುದರ ಮೂಲಕ ಸಂಘಟಿತರಾಗಿ, ಬ್ರಾಹ್ಮಣರು ಒಗ್ಗಟ್ಟಿನಲ್ಲಿ ಬಲವಿದೆ ಎನ್ನುವುದನ್ನು ತೋರಿಸಬೇಕಾದ ಅವಶ್ಯಕತೆ ಇದೆ ಎಂದು ಸಲಹೆ ನೀಡಿದರು.

ಕಾರ್ಯಕ್ರಮದ ವಿವರ: ಜನವರಿ 18ರಂದು ಬೆಳಿಗ್ಗೆ 7 ಗಂಟೆಗೆ ಸಮ್ಮೇಳನದ ಧ್ವಜಾರೋಹಣ, 8 ಗಂಟೆಗೆ ಲಕ್ಷ ಗಾಯತ್ರಿ ಹೋಮ ಮತ್ತು ಸಮ್ಮೇಳನದ ಉದ್ಘಾಟನೆ. ಜಗದ್ಗುರು ಶಂಕರಾಚಾರ್ಯ ವಿದುಶೇಖರಭಾರತಿ ಸ್ವಾಮೀಜಿ ಸಾನ್ನಿಧ್ಯದಲ್ಲಿ ಶಂಕರಾಚಾರ್ಯ ಭಾರತೀತೀರ್ಥ ಸ್ವಾಮೀಜಿ ಸನ್ಯಾಸ ಸ್ವೀಕಾರದ ಸುವರ್ಣ ಮಹೋತ್ಸವ ನಿಮಿತ್ತ ಮಹಾಸನ್ನಿದಾಂಗಳವರ ಸೇವೆಯಲ್ಲಿ ತೊಡಗಿದ ಸೇವಾಕರ್ತರಿಗೆ ಗೌರವ ಸಮರ್ಪಣೆ ನಡೆಯಲಿದೆ.

ಈ ಎಲ್ಲ ಕಾರ್ಯಕ್ರಮದಲ್ಲಿ ಮಠಾಧೀಶರು, ಸ್ವಾಮೀಜಿಗಳು, ಸಚಿವರು, ಶಾಸಕರು ಹಾಗೂ ವಿಪ್ರ ನೇತಾರರು ಪಾಲ್ಗೊಳ್ಳುವರು ಎಂದು ಮಾಹಿತಿ ನೀಡಿದರು.

ಜ.19ರಂದು ವೇದ ಪಾರಾಯಣ, ಧರ್ಮ ಸಭೆ ಜರುಗುವುದು. ವಿಚಾರ ಗೋಷ್ಠಿ, ಸಮಾರೋಪ ಕಾರ್ಯಕ್ರಮ ಜರುಗಲಿವೆ ಎಂದರು. ಇದೇ ಸಂದರ್ಭದಲ್ಲಿ ಮಾತನಾಡಿದ ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ. ಪ್ರಕಾಶ್ ಮೈಸೂರಿನಿಂದ ಉಚಿತ ಬಸ್ ವ್ಯವಸ್ಥೆ ಮಾಡಲಾಗಿದ್ದು, ಎರಡು ದಿನದ ಈ ಸಮ್ಮೇಳನಕ್ಕೆ ನಗರ ಮತ್ತು ತಾಲೂಕು ಹಾಗೂ ಹೋಬಳಿ ಕೇಂದ್ರಗಳಿಂದ ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ಮನವಿ ಮಾಡಿದರು. ಕರ್ನಾಟಕ ಸರ್ಕಾರದ ಬ್ರಾಹ್ಮಣ ಅಭಿವೃದ್ಧಿ ಮಂಡಳಿಯ ರಾಜ್ಯಾಧ್ಯಕ್ಷ ಅಸಗೋಡು ಜಯಸಿಂಹ, ಧಾರ್ಮಿಕ ಮುಖಂಡರಾದ ವೇದ ಬ್ರಹ್ಮ ಶ್ರೀ ಭಾನುಪ್ರಕಾಶ್ ಶರ್ಮ, ಮೈಸೂರು ಶಂಕರ ಮಠದ ಆಡಳಿತಾಧಿಕಾರಿ ರಾಮಚಂದ್ರರಾವ್, ಗ್ರಾಮಾಂತರ ಅಧ್ಯಕ್ಷ ಗೋಪಾಲ್ ರಾವ್, ಹೊಯ್ಸಳ ಕರ್ನಾಟಕ ಸಂಘದ ಅಧ್ಯಕ್ಷ ಕೆ.ಆರ್.ಸತ್ಯನಾರಾಯಣ್, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯ ಉಪಾಧ್ಯಕ್ಷರಾದ ಪುಷ್ಪಾ ಅಯ್ಯಂಗಾರ್, ರಾಮಚಂದ್ರ ಭಟ್, ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆಯ ಪ್ರಧಾನ ಕಾರ್ಯದರ್ಶಿ ವಿಕ್ರಂ ಅಯ್ಯಂಗಾರ್, ಅಜಯ್ ಶಾಸ್ತ್ರಿ, ನಗರ ಪಾಲಿಕೆ ಮಾಜಿ ಸದಸ್ಯರಾದ ಎಂ.ಡಿ. ಪಾರ್ಥಸಾರಥಿ, ಸೌಭಾಗ್ಯ ಮೂರ್ತಿ, ಕೆ.ಆರ್.ಯೋಗ ನರಸಿಂಹ (ಮುರಳಿ), ಎಂ.ಆರ್. ಬಾಲಕೃಷ್ಣ, ಹರೀಶ್, ಕೆ.ಎಂ. ನಿಶಾಂತ್, ಶೇಷಾದ್ರಿ ಭಟ್, ಡಾ.ಲಕ್ಷ್ಮಿ, ಕಡಕೊಳ ಜಗದೀಶ್, ಮೈ ಕುಮಾರ್, ಸುಚಿಂದ್ರ, ಚಕ್ರಪಾಣಿ, ನಾಗಶ್ರೀ, ರಂಗನಾಥ ಇನ್ನಿತರರು ಹಾಜರಿದ್ದರು.

ಶೋಷಿತ ಸಮುದಾಯಗಳಿಗೆ ಒಳ ಮೀಸಲಾತಿ ನೀಡದಿದ್ದರೆ ರಾಜ್ಯಪಾಲರಿಗೆ ದೂರು

ಕರ್ನಾಟಕ ನ್ಯಾಯ ಪರ ವಕೀಲರ ವೇದಿಕೆ ಎಚ್ಚರಿಕೆ



ಅರುಣ್‌ಕುಮಾರ್

ಮೈಸೂರು, ಜ.3 (ಜಿಎ)–ರಾಜ್ಯ ಸರ್ಕಾರವು ತೀರ್ಮಾನಿಸಿದ್ದಂತೆ ಶೋಷಿತ ಸಮುದಾಯಗಳಿಗೆ ಒಳ ಮೀಸಲಾತಿ ಜಾರಿ ಮಾಡದಿದ್ದರೆ ಸರ್ಕಾರದ ವಿರುದ್ಧ ರಾಜ್ಯಪಾಲರಿಗೆ ದೂರು ಸಲ್ಲಿಸಲಾಗುವುದು ಎಂದು ಕರ್ನಾಟಕ ನ್ಯಾಯಪರ ವಕೀಲರ ವೇದಿಕೆ ಎಚ್ಚರಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ವೇದಿಕೆ ಅಧ್ಯಕ್ಷ ಎಸ್.ಅರುಣ್‌ಕುಮಾರ್ ಮಾತನಾಡಿ, 2024ರ ಆ.1ರಂದು ಸುಪ್ರೀಂಕೋರ್ಟ್‌ನ ಏಳು ನ್ಯಾಯ ಮೂರ್ತಿಗಳ ಸಂವಿಧಾನ ಪೀಠವು ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಶಿಕ್ಷಣ, ಉದ್ಯೋಗ ದಲ್ಲಿ ಮೀಸಲಾತಿ ಹಂಚಿಕೆ ಮಾಡಲು ಆಯಾ ರಾಜ್ಯಕ್ಕೆ ಅವಕಾಶ ಕಲ್ಪಿಸಿ ಐತಿಹಾಸಿಕ ತೀರ್ಪನ್ನು ನೀಡಿದ್ದು, ತೀರ್ಪಿನ ಅನ್ವಯ ರಾಜ್ಯ ಸರ್ಕಾರ ಮೂರು ತಿಂಗಳ ಒಳಗೆ ದತ್ತಾಂಶವನ್ನು ಕಲೆ ಹಾಕುತ್ತೇವೆ ಎಂದು ಅ.10ರಂದು ಸಚಿವ ಸಂಪುಟ ಸಭೆಯಲ್ಲಿ ವಾಸ್ತವಿಕ ದತ್ತಾಂಶವನ್ನು ಪಡೆದುಕೊಳ್ಳಲು ಏಕಸದಸ್ಯ ಆಯೋಗವನ್ನು ಮಾಡಿ ನಂತರ ಅದಕ್ಕೆ ನ್ಯಾಯಮೂರ್ತಿ ಹೆಚ್.ಎನ್.ನಾಗಮೋಹನ್ ದಾಸ್ ಅವರನ್ನು ಆಯೋಗಕ್ಕೆ ನೇಮಿಸಿದೆ ಎಂದರು. ಕಾಂಗ್ರೆಸ್ ಸರ್ಕಾರವು ಮೂರು ತಿಂಗಳ ಒಳಗೆ ದತ್ತಾಂಶವನ್ನು ಕಲೆ ಹಾಕಲಾಗುವುದು ಎಂದು ಹೇಳಿ ಈಗಾಗಲೇ 2 ತಿಂಗಳು ಪೂರ್ಣಗೊಂಡಿವೆ. ಆದರೆ, ಒಂದು ತಿಂಗಳು ಬಾಕಿ ಇರುವಾಗ 2025ರ ಜ.1ರಂದು 'ಸಾರ್ವಜನಿಕರು ಆಯೋಗದ ಮುಂದೆ ಯಾವುದೇ ರೀತಿಯ ಸಲಹೆ, ಆಕ್ಷೇಪಣೆ, ಅಹವಾಲು, ಹೇಳಿಕೆ, ದಾಖಲೆ ಇದ್ದಲ್ಲಿ ತಲುಪಿಸಿ' ಎಂದು ಪತ್ರಿಕಾ ಪ್ರಕಟಣೆ ನೀಡಿರುವುದು ಸಾಕಷ್ಟು ಅನುಮಾನಕ್ಕೆ ಎಡೆ ಮಾಡಿ ಕೊಟ್ಟಿದೆ ಎಂದು ತಿಳಿಸಿದರು.

ಈಗಾಗಲೇ ನ್ಯಾಯಾಮೂರ್ತಿ ಎ.ಜೆ. ಸದಾಶಿವ ನೇತೃತ್ವದಲ್ಲಿ ಆಯೋಗವನ್ನು 2004ರಲ್ಲಿ ರಚಿಸಿ, 7 ವರ್ಷಗಳ ನಡೆದ ಸಮೀಕ್ಷೆಯ ಮೂಲಕ 20 ಲಕ್ಷದ 54 ಸಾವಿರ ಪರಿಶಿಷ್ಟ ಜಾತಿಗಳ ಕುಟುಂಬಗಳ ವರದಿಯನ್ನು 2012ರಲ್ಲಿ ಸಲ್ಲಿಸಿದೆ. ಈ ವರದಿಯಲ್ಲಿರುವ ವಾಸ್ತವಿಕ ದತ್ತಾಂಶವನ್ನು ನಾಗಮೋಹನ್‌ದಾಸ್ ಆಯೋಗದ ಮುಂದೆ ನೀಡಲು ರಾಜ್ಯ ಸರ್ಕಾರ ಏಕೆ ಸರ್ಕಾರ ತಡ ಮಾಡುತ್ತಿದೆ ಎಂದು ಪ್ರಶ್ನಿಸಿದರು. ಆಯೋಗವು ವರದಿ ಸಲ್ಲಿಸುವ ಮುನ್ನ ಯಾವುದೇ ವೃಂದ ಕಾಲಿಕ ಸರ್ಕಾರಿ ನೇಮಕ, ಬ್ಯಾಕ್ ಲಾಗ್ ತುಂಬುವುದಿಲ್ಲವೆಂದು ತಿಳಿಸಲಾಗಿತ್ತು. ಆದರೆ, ಭರ್ತಿ ಮಾಡುತ್ತಿದ್ದಾರೆ. ಈ ರೀತಿಯ ಧೋರಣೆ ಕೂಡಲೇ ಕೈಬಿಡದಿದ್ದರೆ ಉಗ್ರ ಹೋರಾಟ ನಡೆಸಬೇಕಾ ಗುತ್ತದೆ ಎಚ್ಚರಿಸಿದರು.


ಸುದ್ದಿಗೋಷ್ಠಿಯಲ್ಲಿ ವಕೀಲರಾದ ಎಂ. ದಾಸಯ್ಯ, ಎಂ.ಶಿವಕುಮಾರ್, ಬೂದಿತಿಟ್ಟು ರಾಜೇಂದ್ರ, ಚಂದ್ರಸೇನ ಸಾಗರ್, ಮಾಳಪ್ಪ ಕುರ್ಕಿ ಉಪಸ್ಥಿತರಿದ್ದರು.

ಇಂದಿನಿಂದ ಶ್ರೀ ಸಿದ್ದೇಶ್ವರ ಸ್ಮಾರಕ ಉಪನ್ಯಾಸ

ಮೈಸೂರು, ಜ.3– ಮುದ್ದುರಾಮ ಪ್ರತಿಷ್ಠಾನದ ವತಿಯಿಂದ ನಾಳೆ(ಜ.4) ಹಾಗೂ ಜ.5ರಂದು ಸಂಜೆ 6ಕ್ಕೆ ನಗರದ ಸರಸ್ವತಿಪುರಂನಲ್ಲಿರುವ ಜೆಎಸ್ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಶ್ರೀ ಸಿದ್ದೇಶ್ವರ ಸ್ಮಾರಕ ಎರಡು ದಿನಗಳ ಉಪನ್ಯಾಸ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಕೃಷಿಕರಾದ ಲಕ್ಷ್ಮೀಶ ತೋಳ್ಪಾಡಿ ಅವರು ಎರಡು ದಿನ ಪ್ರಕೃತಿ ಮತ್ತು ಅಧ್ಯಾತ್ಮ ವಿಷಯ ಕುರಿತು ಮಾತನಾಡಲಿದ್ದು, ಮೊದಲನೇ ದಿನ ದೀನಬಂಧು ಟ್ರಸ್ಟ್‌ನ ಕಾರ್ಯದರ್ಶಿ ಜಿ.ಎಸ್.ಜಯದೇವ ಹಾಗೂ ಎರಡನೇ ದಿನ ನಿವೃತ್ತ ಮುಖ್ಯ ಎಂಜಿನಿಯರ್ ಶಂಕರ ದೇವನೂರು ಅವರು ಪ್ರತಿಸ್ಪಂದನೆ ನೀಡುವರು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

04.01.2025 ಶನಿವಾರ, ಮಳೆ ನಕ್ಷತ್ರ: ಪೂಷಾ, 29.12.2024 ರಿಂದ 16.01.2025 ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಪುಷ್ಯ ಮಾಸ ಶುಕ್ಲ ಪಕ್ಷ, ತಿಥಿ: ಪಂಚಮಿ, ನಕ್ಷತ್ರ: ಶತಭಿಷ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 CFTRI ಶೋಧ ಅನುಶೋಧ – ಪ್ರಾಯೋಜಿತ ಬಾನುಲಿ ಸರಣಿ, ಪ್ರಾಯೋಜಕರು : CSIR, CFTRI, Mysuru, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಶಾಂತಲಾ ವಟ್ಟಂ, ವ್ಯಾಖ್ಯಾನ–ಡಾ. ಮ. ರಾಮಕೃಷ್ಣ, 6.50 ರೈತರಿಗೆ ಸಲಹೆ, 7.15 ಜೀವನ ಜೋಪಾನ–ಹೆಚ್‌ಐವಿ–ಅಂದು ಇಂದು, ಪ್ರಾಯೋಜಕರು – ಕರ್ನಾಟಕ ರಾಜ್ಯ ಏಡ್ಸ್ ನಿಯಂತ್ರಣ ಮಂಡಳಿ, 8.30 ಹಾದಿಯಲ್ಲಿ ಕಂಡ ಮುಖ–ಬಾನುಲಿ ಸರಣಿ, ಪ್ರಸ್ತುತಿ : ಅಬ್ದುಲ್ ರಶೀದ್, 9.00 ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ 'ನಮ್ಮೂರ್ ಹೆಸರು', ಪ್ರಸ್ತುತಿ : ಡಾ. ಮೈಸೂರು ಉಮೇಶ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ಆಯುಷ್ ವಾಣಿ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: ಆಯುಷ್ ಇಲಾಖೆ, ಕರ್ನಾಟಕ ಸರ್ಕಾರ, 12.40 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಹಿಂದಿ ಚಿತ್ರಗೀತೆಗಳು, 3.00 ಹಳ್ಳಿ ಹಾಡು, 3.30 ಮಕ್ಕಳ ಮಂಟಪ–ಕೈಲಾಸಪುರಂ ಸರ್ಕಾರಿ ಪ್ರೌಢಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 4.00 ನಾಟಕ, 4.30 ನೆನಪಿನಂಗಳ (ಧ್ವನಿ ಭಂಡಾರದಿಂದ), 6.50 ಕೃಷಿರಂಗ: ಕಿಸಾನ್‌ವಾಣಿ – ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ ಸಮಗ್ರ ಕೃಷಿಯ ಪ್ರಾಮುಖ್ಯತೆ ಈ ಕುರಿತು ಸಂವಾದ. ಭಾಗವಹಿಸುತ್ತಾರೆ–ಮದ್ದೂರು ತಾಲ್ಲೂಕು ಹೆಮ್ಮನಹಳ್ಳಿಯ ಕೃಷಿಕ ದಂಪತಿ ರಾಮಕೃಷ್ಣೇಗೌಡ ಮತ್ತು ಪಿ. ಆರ್. ಕಾಮಾಕ್ಷಿ, ಪ್ರಸ್ತುತಿ: ಎನ್. ಕೇಶವಮೂರ್ತಿ, 8.00 ಸವಿನೆನಪು–ಹಳೆಯ ಕನ್ನಡ ಚಿತ್ರಗೀತೆಗಳು, 9.30 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ಹರ್ವಿಂದರ್ ಸಿಂಗ್ – ಹಾಡುಗಾರಿಕೆ

■ **ಪಾಳ್ಯಂ ಶ್ರೀ ಶಾಸ್ತಾ ಪೀಠಂ, ಅಭ್ಯುದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನಂ :** ಧನುರ್ಮಾಸದ ವಿಶೇಷ ಪೂಜಾ ಲಕ್ಷಾರ್ಚನಾ ಮತ್ತು ಕುಂಭಾಭಿಷೇಕ ಪೂಜಾ ಮಹೋತ್ಸವ, ಬೆಳಗ್ಗೆಯಿಂದ ಮಹತೋಬಾರ ಶ್ರೀ ಧರ್ಮ ಶಾಸ್ತಾ ಸ್ವಾಮಿಯವರಿಗೆ, ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾ ನಿವೇದನೆ, ಮಂಗಳಾರತಿ, ತೀರ್ಥ–ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನದ ಆವರಣ, ರಾಘವೇಂದ್ರನಗರ.

■ **ಕ್ರೀಡಾ ಭಾರತಿ :** ಗಣ್ಯರಿಗಾಗಿ ಲಗೋರಿ ಆಟ, ಭಾಗವಹಿಸುವವರು : ಶಾಸಕ ಟಿ.ಎಸ್. ಶ್ರೀವತ್ಸ, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸ್ಥಳ: ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನ, ಬೆಳಗ್ಗೆ 8.30ಕ್ಕೆ.

■ **ಕಲ್ಪವೃಕ್ಷ ಸಾಂಸ್ಕೃತಿಕ ಪರಿಷತ್ :** ರಾಜ್ಯ ಮಟ್ಟದ ಕ್ರಿಕೆಟ್ ಪಂದ್ಯಾವಳಿ, ಸಾನ್ನಿಧ್ಯ : ವಂಗೀಪುರ ನಂಬಿ ಮಠದ ಬಿ.ವಿ. ಇಳೈ ಆಳ್ವಾರ್ ಸ್ವಾಮೀಜಿ, ಉದ್ಘಾಟನೆ : ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಮುಖ್ಯ ಅತಿಥಿಗಳು : ಚುಟುಕು ಯೋಗಾಚಾರ್ಯ ಡಾ. ಎಂ.ಜಿ.ಆರ್. ಅರಸ್, ಮಾಜಿ ಶಾಸಕ ಎಂ.ಕೆ. ಸೋಮಶೇಖರ್,ಶಾಸಕ ಗಣೇಶ್ ಪ್ರಸಾದ್, ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್. ಸುಬ್ರಹ್ಮಣ್ಯ, ಕರ್ನಾಟಕ ರಾಜ್ಯ ಶಿವಾರ್ಚಕ ಸಂಘದ ಖಜಾಂಚಿ ಗಿರೀಶ್ ಚಾಮುಂಡಯ್ಯ ಮತ್ತು ಚೆಸ್ಕಾಂ ಸಹಾಯಕ ಅಭಿಯಂತರ ಸಿ.ಎಸ್. ಪ್ರವೀಣ್, ಸ್ಥಳ: ಪುಟ್ಟರಾಜ ಗವಾಯಿ ಮೈದಾನ, ಜೆ.ಪಿ.ನಗರ, ಬೆಳಗ್ಗೆ 9ಕ್ಕೆ.

■ **ಜೆಎಸ್ಎಸ್ ಆಯುರ್ವೇದ ಆಸ್ಪತ್ರೆ :** ಆರೋಗ್ಯಾಯುಷ್ಯ ಆರೋಗ್ಯವರ್ಧಕ ಶಿಬಿರ, ಮೂತ್ರಪಿಂಡ (ಕಿಡ್ನಿ) ಕಾಯಿಲೆಗೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9ರಿಂದ.

■ **ರಾಮ್‌ಸನ್ಸ್ ಪ್ರತಿಷ್ಠಾನ:** ಬೊಂಬೆ ಮನೆ ದಸರೆ ಬೊಂಬೆ ಪ್ರದರ್ಶನ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ರಿಂದ.

■ **ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ :** ಕೆ. ಹನುಮಂತು ಅವರಿಗೆ ನುಡಿ ನಮನ ಕಾರ್ಯಕ್ರಮ, ಸ್ಥಳ: ರೋಟರಿ ಭವನ, ಜೆಎಲ್‌ಬಿ ರಸ್ತೆ, ಬೆಳಗ್ಗೆ 10ಕ್ಕೆ.

■ **ವಿದ್ಯಾವರ್ಧಕ ಕಾನೂನು ಕಾಲೇಜು:** ಪ್ರೊ.ಪಿ.ಎಂ.ಚಿಕ್ಕಬೋರಯ್ಯ ಸ್ಮರಣಾರ್ಥ ರಾಷ್ಟ್ರೀಯ ವಿಚಾರ ಸಂಕಿರಣ, ಉದ್ಘಾಟನೆ:ಹೈಕೋರ್ಟ್ ನ್ಯಾಯಾಧೀಶ ರಾಮಚಂದ್ರ ಡಿ.ಹುದ್ದರ್, ಪ್ರಾಸ್ತಾವಿಕ ನುಡಿ:ಪ್ರೊ. ಎನ್.ಎಸ್. ಶ್ರೀನಿವಾಸುಲು, ಅಧ್ಯಕ್ಷತೆ: ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಉಪಸ್ಥಿತರು: ಪಿ.ವಿಶ್ವನಾಥ್, ಶ್ರೀಶೈಲ ರಾಮಣ್ಣವರ್, ಎಸ್.ಶಿವಲಿಂಗಯ್ಯ, ಸ್ಥಳ: ಪಿ.ಎಂ. ಚಿಕ್ಕಬೋರಯ್ಯ ಹಾಲ್, ಬೆಳಗ್ಗೆ 10ಕ್ಕೆ.

■ **ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್ :** ಕುವೆಂಪು ಅವರ 121ನೇ ಜಯಂತಿ ಮತ್ತು ವಿಶ್ವಮಾನವ ದಿನಾಚರಣೆ, ಅಧ್ಯಕ್ಷತೆ : ಟ್ರಸ್ಟ್ ಅಧ್ಯಕ್ಷ ಡಾ. ಜೆ.ಶಶಿಧರ ಪ್ರಸಾದ್, ಉಪಸ್ಥಿತರು : ಶ್ರೀ ಕುವೆಂಪು ವಿದ್ಯಾ ಪರಿಷತ್ ಅಧ್ಯಕ್ಷ ಡಾ.ಡಿ.ಕೆ. ರಾಜೇಂದ್ರ, ಟಿ.ಸತೀಶ್ ಜವರೇಗೌಡ, ಸ್ಥಳ: ಶ್ರೀ ಕುವೆಂಪು ರಂಗ ಮಂದಿರ, ಜಯಲಕ್ಷ್ಮಿಪುರಂ, ಬೆಳಗ್ಗೆ 10.30ಕ್ಕೆ.

■ **ಕರ್ನಾಟಕ ರಾಜ್ಯ ಮುಕ್ತ ವಿವಿ:** ಕುವೆಂಪು ಅವರ 121ನೇ ಜನ್ಮ ದಿನಾಚರಣೆ ಪ್ರಯುಕ್ತ ಗಮಕ ವ್ಯಾಖ್ಯಾನ ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯದ–ಕವಿಕ್ರತು ದರ್ಶನಂ ಭಾಗ, ಉದ್ಘಾಟನೆ: ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಅಧ್ಯಕ್ಷತೆ: ಕರಾಮುವಿವಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ, ಪ್ರಾಸ್ತಾವಿಕ ನುಡಿ: ಡಾ.ಎನ್.ಆರ್.ಚಂದ್ರೇಗೌಡ, ಸ್ಥಳ: ಕಾವೇರಿ ಸಭಾಂಗಣ, ಕರಾಮುವಿವಿ, ಬೆಳಗ್ಗೆ 10.30ಕ್ಕೆ.

■ **ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ :** 5ನೇ ಮೈಸೂರು ಜಿಲ್ಲಾ ಮಟ್ಟದ ಮಹಿಳಾ ಸಮ್ಮೇಳನ, ಉದ್ಘಾಟನೆ : ನಿವೃತ್ತ ಪ್ರಾಂಶುಪಾಲರಾದ ಚ. ಸರ್ವಮಂಗಳ, ಸ್ಥಳ: ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 11.30ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ಗಾಂಧಿ ಅಧ್ಯಯನ ಕೇಂದ್ರ :** ಮಹಾತ್ಮ ಗಾಂಧೀಜಿ ಅಧ್ಯಕ್ಷತೆಯ ಬೆಳಗಾವಿ ಕಾಂಗ್ರೆಸ್ ಅಧಿವೇಶನದ ಶತಮಾನೋತ್ಸವ ದಿನಾಚರಣೆ, ಉದ್ಘಾಟನೆ: ಸಾಮಾಜಿಕ ಕಾರ್ಯಕರ್ತ ಸಂತೋಷ್ ಕೌಲಗಿ, ಅಧ್ಯಕ್ಷತೆ: ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಉಪಸ್ಥಿತರು: ಶ್ರೀಮತಿ ವಿ.ಆರ್. ಶೈಲಜಾ, ಸ್ಥಳ: ಗಾಂಧಿ ಭವನ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 11.30ಕ್ಕೆ

■ **ಎಂ.ಎ.ಎಸ್.ವಿ.ಎಸ್. ಗುರುಕುಲ ಪಿಯು ಕಾಲೇಜು:** ಕಾಲೇಜು ವಾರ್ಷಿಕೋತ್ಸವ, ಅಧ್ಯಕ್ಷತೆ: ಅನಾಥ ಸೇವಾಶ್ರಮ ವಿಶ್ವಸ್ಥ ಸಮಿತಿ ಉಪಾಧ್ಯಕ್ಷ ರಾಘವೇಂದ್ರ ಬಿ.ಪಾಟೀಲ, ಉದ್ಘಾಟನೆ: ಸಮಿತಿ ಕಾರ್ಯದರ್ಶಿ ಎಸ್.ಕೆ.ಬಸವರಾಜನ್, ಮುಖ್ಯ ಅತಿಥಿಗಳು: ಖಜಾಂಚಿ ಡಾ. ಜಿ.ಎನ್. ಮಲ್ಲಿಕಾರ್ಜುನಪ್ಪ, ಸ್ಥಳ:ಕಾಲೇಜು ಆವರಣ, ಮಧ್ಯಾಹ್ನ 2.30ಕ್ಕೆ.

■ **ಶ್ರೀ ಗಣಪತಿ ಸೇವಾ ಮಂಡಳಿ ಟ್ರಸ್ಟ್ :** ಶ್ರೀ ಮದ್ಭಾಗವತ ಸಪ್ತಾಹ, ವಿದುಷಿ ಡಾ.ಜ್ಯೋತಿ ಶಂಕರ್ ಅವರಿಂದ ಮಧುರೆಯಿಂದ ದ್ವಾರಕೆಗೆ ಕುರಿತು ಪ್ರವಚನ, ರಾಮಕೃಷ್ಣನಗರದ ಶಾರದಾ ಸಂಗೀತ ಶಾಲೆಯವರಿಂದ ಹಾಡುಗಾರಿಕೆ, ಸ್ಥಳ: ರಜತ ಸಭಾ ಮಂಟಪ, ಗಣಪತಿ ದೇವಸ್ಥಾನ, ಐ–ಬ್ಲಾಕ್, ರಾಮಕೃಷ್ಣನಗರ, ಸಂಜೆ 6ಕ್ಕೆ

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಮಹಾಮೇಧಾನಂದ ಅವರಿಂದ ಸರ್ವೀಸ್ ಅಂಡ್ ಸಾಲ್ವೇಷನ್ – ಲೆಟರ್ ಆಫ್ ಸ್ವಾಮಿ ವಿವೇಕಾನಂದ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

■ **ಹೆಬ್ಬಾರ್ ಶ್ರೀ ವೈಷ್ಣವ ಸಭಾ (ಬೆಂಗಳೂರು), ಹೆಬ್ಬಾರ್ ಶ್ರೀ ವೈಷ್ಣವ ಉಪಸಭಾ :** ಬೆಂಗಳೂರು ಮಹಾರಾಣಿ ಕಾಲೇಜು ನಿವೃತ್ತ ಸಂಸ್ಕೃತ ಪ್ರಾಧ್ಯಾಪಕ ಕೆ.ಎಸ್. ಶ್ರೀಧರನ್ ಅವರಿಂದ ತಿರುಪ್ಪಾವೈ ಕಾಲಕ್ಷೇಪ, ಸ್ಥಳ: ಸನಾತನ ಸಭಾ, ಜಯನಗರ, ಸಂಜೆ 6.15 ರಿಂದ.

■ **ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನ :** ತಿರುಪ್ಪಾವೈ ಪ್ರವಚನ ಕಾರ್ಯಕ್ರಮ, ಮೈಸೂರು ಮಹಾರಾಣಿ ಕಲಾ ಕಾಲೇಜು ನಿವೃತ್ತ ಸಂಸ್ಕೃತ ಪ್ರಾಧ್ಯಾಪಕಿ, ವಿದುಷಿ ಡಾ. ಕೆ.ಎಲ್. ಪ್ರಸನ್ನಾಕ್ಷಿ ವಿದ್ವನ್ಮಣಿ, ದರ್ಶನ ವಾರಿಧಿ ಡಾ. ಕೆ.ಎಲ್. ಪ್ರಸನ್ನಾಕ್ಷಿ ಅವರಿಂದ, ಸ್ಥಳ: ದೇವಸ್ಥಾನದ ಆವರಣ, ತ್ಯಾಗರಾಜ ರಸ್ತೆ, ಸಂಜೆ 6.30ಕ್ಕೆ

■ **ಶ್ರೀ ವಾಣಿ ವಿಲಾಸ ಅರಸು ಬಾಲಿಕಾ ಶಾಲೆ :** ಶಾಲಾ ವಾರ್ಷಿಕ ಕ್ರೀಡೋತ್ಸವ, ಅಧ್ಯಕ್ಷತೆ : ಶ್ರೀ ಜಯಚಾಮರಾಜ ಅರಸು ಶಿಕ್ಷಣ ಸಂಸ್ಥೆ ಗೌರವ ಕಾರ್ಯದರ್ಶಿ ಮಹೇಶ್ ಎನ್. ಅರಸ್, ಮುಖ್ಯ ಅತಿಥಿಗಳು: ನಿವೃತ್ತ ಉಪನಿರೀಕ್ಷಕ ಎಂ.ಎಸ್. ಕಮಾಂಡೋ ಸುಬ್ಬಣ್ಣ, ಶ್ರೀ ಜಯಚಾಮರಾಜ ಅರಸು ಎಜುಕೇಷನ್ ಟ್ರಸ್ಟ್‌ನ ಬಾಲಚಂದ್ರ ಅರಸ್, ಪ್ರಧಾನ ಭಾಷಣಕಾರರು : ಕವಿ ಡಾ. ಜಯಪ್ಪ ಹೊನ್ನಾಳಿ, ಉಪಸ್ಥಿತರು: ಶ್ರೀ ವಾಣಿ ವಿಲಾಸ ಅರಸು ಶಿಕ್ಷಣ ಸಂಸ್ಥೆ ಅಧ್ಯಕ್ಷ ಸಿದ್ದಪ್ಪ, ಸ್ಥಳ: ಶಾಲೆ ಆವರಣ, ಬೆಳಗ್ಗೆ 10ಕ್ಕೆ.

■ **ನಾಗರಿಕ ವೇದಿಕೆ, ಪೂರ್ಣ ಪ್ರಜ್ಞಾ ವಿದ್ಯಾ ಕೇಂದ್ರ :** ಶಾಲಾ ವಾರ್ಷಿಕೋತ್ಸವ, ಉಪಸ್ಥಿತರು : ಸಿದ್ದು ಮೂಲಿಮನಿ, ಕೆ.ಆರ್. ಶ್ರೀರಂಗಯ್ಯ, ಎಂ.ಆರ್. ಧನುಷ, ಬಿ.ಪಿ. ಪುಟ್ಟಸ್ವಾಮಿ, ಸ್ಥಳ: ಆದಿಶಕ್ತಿ ಬಂದಂತಮ್ಮ ಕಾಳಮ್ಮ ಸಮುದಾಯ ಭವನ, ಸಂಜೆ 5ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ ವಿಭಾಗ :** ಜೈನಧರ್ಮದ ತಾತ್ವಿಕ ಅನುಸಂಧಾನ ಕುರಿತು ವಿಚಾರ ಸಂಕಿರಣದ ಸಮಾರೋಪ ಸಮಾರಂಭ, ಶ್ರವಣಬೆಳಗೊಳದ ರಾಷ್ಟ್ರೀಯ ಪ್ರಾಕೃತ ಅಧ್ಯಯನ ಮತ್ತು ಸಂಶೋಧನಾ ಸಂಸ್ಥೆ ನಿರ್ದೇಶಕ ಪ್ರೊ. ಸುರೇಶ್ ಕುಮಾರ್, ಅಧ್ಯಕ್ಷತೆ ಮತ್ತು ಪ್ರಮಾಣ ಪತ್ರ ವಿತರಣೆ : ಹಣಕಾಸು ಅಧಿಕಾರಿ ಶ್ರೀಮತಿ ಕೆ.ಎಸ್. ರೇಖಾ, ಉಪಸ್ಥಿತರು : ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ ವಿಭಾಗದ ಅಧ್ಯಕ್ಷ ಪ್ರೊ. ಎಸ್.ಡಿ. ಶಶಿಕಲಾ, ಸ್ಥಳ: ಜೈನಶಾಸ್ತ್ರ ವಿಭಾಗದ ಸೆಮಿನಾರ್ ಹಾಲ್, ಸಂಜೆ 5.15ಕ್ಕೆ.

■ **ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ :** ಬ್ರಿಗೇಡಿಯರ್ ಶಿವಾನಂದ ಅವರಿಂದ ಡಿಫೆನ್ಸ್ ಎಲೆಕ್ಟ್ರಾನಿಕ್ಸ್ ಮ್ಯಾನ್ಯೂಫ್ಯಾಕ್ಚರಿಂಗ್ ಕುರಿತು ವಿಚಾರ ಸಂಕಿರಣ, ಅಧ್ಯಕ್ಷತೆ : ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಅಧ್ಯಕ್ಷ ಡಾ. ಆರ್. ದೀಪು, ಸ್ಥಳ: ಎಸ್.ಪಿ. ಭಟ್ ಹಾಲ್, ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್,ಸಂಜೆ 6ಕ್ಕೆ

■ **ವಿ.ವಿ. ಕ್ರಿಯೇಷನ್ಸ್ :**ನವ ಸಂಭ್ರಮ, ಜನಪದ ಸಂಗೀತ ಹಾಗೂ ನೃತ್ಯ ಸಂಗಮ, ವೀರ ಯೋಧರಿಗೆ ಗೌರವ ಸಮರ್ಪಣೆ, ಮುಖ್ಯ ಅತಿಥಿಗಳು :ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕ ಟಿ.ಎಸ್. ಶ್ರೀವತ್ಸ, ಮಾಜಿ ಮೇಯರ್ ಶಿವಕುಮಾರ್, ಕಲಾವಿದ ಶಂಕರ್ ಅಶ್ವತ್ಥ್, ಸ್ಥಳ: ಎಂ.ಬಿ.ಸಿ.ಟಿ. ಆಡಿಟೋರಿಯಂ, ವಿಶ್ವೇಶ್ವರನಗರ, ಸಂಜೆ 6.30ಕ್ಕೆ.

ಮೈಸೂರಿಂದ ವಿಮಾನ ಸೇವೆ ಆರಂಭಕ್ಕೆ 'ಏರ್ ಕೇರಳ' ಸಂಸ್ಥೆ ಉತ್ಸುಕತೆ

- ಮೇ ತಿಂಗಳಲ್ಲಿ 3; ವರ್ಷಾಂತ್ಯಕ್ಕೆ ಮತ್ತೆ ಮೂರು ವಿಮಾನ ಸೇವೆ ಕಲ್ಪಿಸುವ ಚಿಂತನೆ
- ಮೈಸೂರು ವಿಮಾನ ನಿಲ್ದಾಣದಲ್ಲಿ ಸಾಧಕ-ಬಾಧಕಗಳ ಬಗ್ಗೆ ಪ್ರಾಥಮಿಕ ಚರ್ಚೆ
- ಪ್ರವಾಸೋದ್ಯಮ, ಕೈಗಾರಿಕಾ ಅಭಿವೃದ್ಧಿ ಆಧರಿಸಿ ವಿಮಾನ ಸೇವೆ ಆರಂಭಿಸುವ ಅನಿವಾರ್ಯತೆ



ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಶುಕ್ರವಾರ ನಡೆದ ಸಭೆಯಲ್ಲಿ ಶಾಸಕ ಜಿ.ಟಿ.ದೇವೇಗೌಡ, ಸಂಸದ ಯದುವೀರ್ ಹಾಗೂ ಏರ್ ಕೇರಳ ಸಂಸ್ಥೆ ಪದಾಧಿಕಾರಿಗಳು ಪಾಲ್ಗೊಂಡಿದ್ದರು.

ರನ್ ವೇಗೆ ಭೂಸ್ವಾಧೀನ

"ರನ್ ವೇ ವಿಸ್ತರಣೆ ಯೋಜನೆಯ ಮೊದಲ ಹಂತದ ಕಾಮಗಾರಿ ಪ್ರಕ್ರಿಯೆ ನಡೆದಿದೆ. 45 ಎಕರೆ ಭೂಸ್ವಾಧೀನಕ್ಕೆ ಕ್ಲಿಯರೆನ್ಸ್ ನೀಡಿದ್ದು, ಈ ನಿಟ್ಟಿನಲ್ಲಿ ತ್ವರಿತ ಕ್ರಮಕ್ಕೆ ಸರ್ಕಾರವನ್ನು ಒತ್ತಾಯಿಸಲಾಗಿದೆ. ರನ್‌ವೇ ಮಾರ್ಗದಲ್ಲಿ 3 ಬಾಕ್ಸ್ ಟನಲ್‌ಗಳ ಬಗ್ಗೆ ನೀರಾವರಿ ಇಲಾಖೆ ಕ್ರಮವಹಿಸಲಿದೆ. ವಿದ್ಯುತ್ ಲೇನ್ ಸ್ಥಳಾಂತರದ ಬಗ್ಗೆಯೂ ಚರ್ಚೆ ನಡೆದಿದೆ. ಆದಷ್ಟು ಬೇಗ ಎಲ್ಲಾ ಪ್ರಕ್ರಿಯೆಗಳೂ ಮುಗಿದರೆ ಎಎಐಗೆ ಹಸ್ತಾಂತರ ಮಾಡಲಾಗುವುದು.

– ಸಂಸದ ಯದುವೀರ್

ಏವಿಯೇಷನ್ ಅಕಾಡೆಮಿ; ಪ್ರಾಥಮಿಕ ಚರ್ಚೆ

ಮೈಸೂರಿನ ವಾಯುಯಾನ ಆರ್ಥಿಕ ಅಭಿವೃದ್ಧಿಗೆ ಒತ್ತು ನೀಡುವ ಉದ್ದೇಶದಿಂದ ಇಲ್ಲಿ ವಿಮಾನಯಾನ ಅಕಾಡೆಮಿ ಆರಂಭಿಸುವ ಸಂಬಂಧ ಪ್ರಾಥಮಿಕ ಚರ್ಚೆ ನಡೆದಿದೆ. ವಿಮಾನಯಾನ ಸೇವೆ ಆರಂಭಿಸುವುದು ಸುಲಭ ಆದರೆ ಅತ್ಯುತ್ತಮ ಪೈಲಟ್‌ಗಳ ಲಭ್ಯತೆ ಕಷ್ಟ ಎನ್ನುವ ಪರಿಸ್ಥಿತಿ ಇದೆ. ಉತ್ತಮ ವಿಮಾನಯಾನ ಸೇವೆಗೆ ಗುಣಮಟ್ಟದ ತರಬೇತಿ ಪಡೆದಿರುವ ಪೈಲಟ್‌ಗಳು ಅಗತ್ಯ. ಈ ನಿಟ್ಟಿನಲ್ಲಿ ವಾಯುಯಾನ ವೃತ್ತಿಪರರಿಗೆ ವಿಶ್ವದರ್ಜೆಯ ತರಬೇತಿ ನೀಡುವ ಕೇಂದ್ರ ಮೈಸೂರಿನಲ್ಲಿ ಆಗಬೇಕೆಂಬ ಆಶಯವಿದ್ದು, ಆ ನಿಟ್ಟಿನಲ್ಲಿ ಪ್ರಯತ್ನ ಮುಂದುವರೆಯಲಿದೆ ಎಂದು ಸಂಸದ ಯದುವೀರ್ ತಿಳಿಸಿದರು.

ಮೈಸೂರು, ಜ.3(ಎಸ್‌ಬಿಡಿ)– ಮೈಸೂರು ವಿಮಾನ ನಿಲ್ದಾಣದಿಂದ ವಾಯುಯಾನ ಸೇವೆ ನಿರ್ವಹಣೆಗೆ 'ಏರ್ ಕೇರಳ' ಸಂಸ್ಥೆ ಮುಂದೆ ಬಂದಿದ್ದು, ಈ ಸಂಬಂಧ ಶುಕ್ರವಾರ ಪ್ರಾಥಮಿಕ ಚರ್ಚೆ ನಡೆದಿದೆ.

ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕ ಜಿ.ಟಿ.ದೇವೇಗೌಡ, ಏರ್ ಕೇರಳ ಸಂಸ್ಥೆ ಪದಾಧಿಕಾರಿಗಳು ಹಾಗೂ ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರ(ಎಎಐ)ದ ಸ್ಥಳೀಯ ಅಧಿಕಾರಿಗಳು ಸಭೆ ನಡೆಸಿ, ಚರ್ಚಿಸಿದರು. ಈ ವೇಳೆ ಮೈಸೂರಿನಿಂದ ಕೇರಳ ಹಾಗೂ ಇತರ ಸ್ಥಳಗಳಿಗೆ ಮುಂದಿನ ಮೇ ತಿಂಗಳಲ್ಲಿ ಮೂರು ಹಾಗೂ ವರ್ಷಾಂತ್ಯದೊಳಗೆ ಒಟ್ಟು ಆರು ವಿಮಾನಯಾನ ಸೇವೆ ಆರಂಭಿಸುವ ವಿಶ್ವಾಸವನ್ನು ಏರ್ ಕೇರಳ ಸಂಸ್ಥೆಯ ಪದಾಧಿಕಾರಿಗಳು ವ್ಯಕ್ತಪಡಿಸಿದ್ದಾರೆ.

ಯದುವೀರ್ ಸಂತಸ: ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಯದುವೀರ್, ವಾಯುಯಾನ ಸಂಪರ್ಕಕ್ಕೆ ಬೇಡಿಕೆ ಹೆಚ್ಚಿರುವ ಸಂದರ್ಭದಲ್ಲಿ ಕೇರಳ ಮೂಲದ ನವ ಉದ್ಯಮ ಸಂಸ್ಥೆ ಮೈಸೂರಿನಿಂದ ಸೇವೆ ನೀಡಲು ಮುಂದೆ ಬಂದಿರುವುದು ಸಂತೋಷದ ವಿಷಯ. ಮೇ ತಿಂಗಳಲ್ಲಿ ಮೂರು ವಿಮಾನಗಳನ್ನು ಖರೀದಿಸಿದ ನಂತರ ಮೈಸೂರಿನಿಂದ ಕೇರಳ ಹಾಗೂ ಇನ್ನಿತರ ನಗರಗಳಿಗೆ ವಿಮಾನಯಾನ ಸಂಪರ್ಕ ಕಲ್ಪಿಸುವ ಆಶಯ ಹೊಂದಿದ್ದಾರೆ. ಸದ್ಯ ಮೈಸೂರಿನಿಂದ ಚೆನ್ನೈ ಹಾಗೂ ಹೈದರಾಬಾದ್‌ಗೆ ಹಾರಾಟ ನಡೆಸುವ ವಿಮಾನಗಳು ಭರ್ತಿಯಾಗುತ್ತಿವೆ. ಗೋವಾ, ಕೊಚ್ಚಿನ್, ಮುಂಬೈ ಹಾಗೂ ಬೆಳಗಾವಿಗೂ ಭಾರೀ ಬೇಡಿಕೆ ಇದೆ. ಏರ್ ಕೇರಳ ಸಂಸ್ಥೆಯವರು ಪರಿಶೀಲನೆ ನಡೆಸಿ, ಈ ಎಲ್ಲಾ ಮಾಹಿತಿಯನ್ನು ಸಂಗ್ರಹಿಸಿದ್ದಾರೆ. ಇಲ್ಲಿನ ಸೌಲಭ್ಯಗಳ ಬಗ್ಗೆಯೂ ತಿಳಿದುಕೊಂಡಿದ್ದಾರೆ. ಪುನರ್‌ಪರಿಶೀಲನೆ ನಂತರ ಅಂತಿಮ ನಿರ್ಧಾರ ತಿಳಿಸುತ್ತಾರೆ. ಆದರೆ ಮೈಸೂರಿನಿಂದ ವಿಮಾನಯಾನ ಸೇವೆ ಆರಂಭಿಸುವುದನ್ನು ಸ್ಪಷ್ಟಪಡಿಸಿದ್ದಾರೆ ಎಂದು ತಿಳಿಸಿದರು.

ಅನುಕೂಲ, ಅಭಿವೃದ್ಧಿ: ಮೈಸೂರು ಪ್ರವಾಸೋದ್ಯಮ ಕೇಂದ್ರ ಅಲ್ಲದೆ ಹೊರಗಿನ ಪ್ರವಾಸಿ ತಾಣಗಳಿಗೂ ಮೈಸೂರು ಮೂಲಕವೇ ತೆರಳಬೇಕಿರುವುದರಿಂದ ಮೈಸೂರು ವಿಮಾನ ನಿಲ್ದಾಣದ ಅಭಿವೃದ್ಧಿ ಬಹಳ ಮುಖ್ಯವಾಗಿದೆ. ಅರಮನೆ, ಮೃಗಾಲಯ, ಚಾಮುಂಡಿಬೆಟ್ಟ, ಬಿಳಿಗಿರಿ ರಂಗನಬೆಟ್ಟ, ಮೇಲುಕೋಟೆ, ನಂಜನಗೂಡು, ಶ್ರೀರಂಗಪಟ್ಟಣ ಸೇರಿದಂತೆ ಹಲವು ಧಾರ್ಮಿಕ ಕೇಂದ್ರಗಳು, ಬಂಡೀಪುರ, ನಾಗರಹೊಳೆ ಅಭಯಾರಣ್ಯಗಳಿಗೆ ಸಾಕಷ್ಟು ಪ್ರವಾಸಿಗರು ಬರುತ್ತಾರೆ. ಮೈಸೂರು, ಚಾಮರಾಜನಗರದಲ್ಲಿ ಸಾಕಷ್ಟು ಕೈಗಾರಿಕೆಗಳ ಸ್ಥಾಪನೆಯಾಗುತ್ತಿರುವುದರಿಂದ ಉದ್ಯಮಿಗಳಿಗೂ ಅನುಕೂಲವಾಗಲಿದೆ. ಈ ನಿಟ್ಟಿನಲ್ಲಿ ವಿಮಾನಯಾನ ಸೇವೆ ವಿಸ್ತರಣೆ ಅತ್ಯವಶ್ಯವಾಗಿದ್ದು, ಎಲ್ಲಾ ವಿಮಾನಯಾನ ಸೇವೆ ಸಂಸ್ಥೆಗಳೊಂದಿಗೆ ಚರ್ಚೆ ನಡೆಸಲಾಗಿದೆ. ಸದ್ಯ ಏರ್ ಕೇರಳ ಸಂಸ್ಥೆ ಸೇವೆ ನೀಡಲು ಮುಂದೆ ಬಂದಿರುವುದರಿಂದ ಇತರ ಸಂಸ್ಥೆಗಳಿಗೂ ಪ್ರೇರಣೆಯಾಗಬಹುದು. ನಮ್ಮ ಪ್ರಯತ್ನಕ್ಕೆ ಎಎಐ ನಿರ್ದೇಶಕರು ಹಾಗೂ ಅಧಿಕಾರಿಗಳು, ಮೈಸೂರು ಟ್ರಾವಲರ್ಸ್ ಅಸೋಸಿಯೇಷನ್ ಸಹಕಾರವೂ ಪ್ರಧಾನವಾಗಿದೆ ಎಂದು ಹೇಳಿದರು.

ದಕ್ಷಿಣ ಭಾರತ ಸೇವೆಗೆ ಆದ್ಯತೆ: ಏರ್ ಕೇರಳ ಅಧ್ಯಕ್ಷ ಅಫಿ ಅಹಮ್ಮದ್ ಮಾತನಾಡಿ, ಮೇ-ಜೂನ್ ತಿಂಗಳಲ್ಲಿ 3 ಹಾಗೂ ನಂತರದಲ್ಲಿ 3 ವಿಮಾನಗಳನ್ನು ಖರೀದಿಸಲಾಗುತ್ತದೆ. ಕೇರಳದ ಯಾವ ಸ್ಥಳದಿಂದ ಸೇವೆ ಆರಂಭಿಸಬೇಕು ಎಂಬುದು ಇನ್ನೂ ನಿಗದಿಯಾಗಿಲ್ಲ. ಎಎಐ ಮೈಸೂರು ಅಧಿಕಾರಿಗಳು ನಮ್ಮ ನೂತನ ಸೇವೆ ಆರಂಭಿಸಿ, ಯಶಸ್ವಿಯಾಗಿ ಸೇವೆ ನೀಡಲು ಎಲ್ಲಾ ರೀತಿಯ ಸಹಕಾರ ನೀಡುವುದಾಗಿ ಭರವಸೆ ನೀಡಿದ್ದಾರೆ. ಅದರಂತೆ ನಾವು ಸೇವೆ ಆರಂಭಿಸಲು ಸಿದ್ಧತೆ ಮಾಡಿಕೊಳ್ಳುತ್ತೇವೆ. ವಾರದಲ್ಲಿ 10ಕ್ಕಿಂತ ಹೆಚ್ಚು ವಿಮಾನ ಹಾರಾಟವಾಗುವ ಕಾರಣ ಮೈಸೂರು ಸೇರಿದಂತೆ ದಕ್ಷಿಣ ಭಾರತದ ವಿಮಾನ ನಿಲ್ದಾಣಗಳಲ್ಲಿ ಉಡಾನ್ ಯೋಜನೆ ಜಾರಿಯಲ್ಲಿಲ್ಲ. ಆರಂಭಿಕವಾಗಿ ಕರ್ನಾಟಕ, ಕೇರಳ, ತಮಿಳುನಾಡು, ಆಂಧ್ರ ತೆಲಂಗಾಣ, ಮಹಾರಾಷ್ಟ್ರ ಸೇರಿದಂತೆ ದಕ್ಷಿಣ ಮತ್ತು ಮಧ್ಯಭಾರತಕ್ಕೆ ವಿಮಾನಯಾನ ಸೇವೆ ನೀಡುವ ಚಿಂತನೆ ಇದೆ. ಮುಂದಿನ ದಿನಗಳಲ್ಲಿ ಅಂತಾರಾಷ್ಟ್ರೀಯ ಸೇವೆಗೂ ಮಾನ್ಯತೆ ಪಡೆಯುವ ಗುರಿ ಇದೆ ಎಂದು ತಿಳಿಸಿದರು.

ಉಡಾನ್ ಯೋಜನೆಗೆ ಹೊರತಾಗಿ ಪ್ರವಾಸೋದ್ಯಮ ಹಾಗೂ ಕೈಗಾರಿಕೋದ್ಯಮದ ಆಧಾರದಲ್ಲಿ ವಿಮಾನಯಾನ ಸೇವೆ ನೀಡಬೇಕೆಂಬುದು ನಮ್ಮ ಸಂಸ್ಥೆಯ ಆಶಯ. ಈ ನಿಟ್ಟಿನಲ್ಲಿ ಎಲ್ಲರ ಸಹಕಾರ ಅತ್ಯಗತ್ಯವಾಗಿದೆ. ಪ್ರವಾಸೋದ್ಯಮಕ್ಕೆ ಉತ್ತಮ ಪ್ರಚಾರ ಮುಖ್ಯವಾಗುತ್ತದೆ ಎಂದು ಇದೇ ವೇಳೆ ಅಭಿಪ್ರಾಯಿಸಿದರು.

ಸಭೆಯಲ್ಲಿ ಏರ್ ಕೇರಳ ಉಪಾಧ್ಯಕ್ಷ ಅಯೂಬ್ ಕಲ್ಲಡ, ಗ್ರೌಂಡ್ ಆಪರೇಷನ್ಸ್ ಮುಖ್ಯಸ್ಥ ಶಾಮನ್ ಪಟ್ಟವಾತುಕಲ್, ಮೈಸೂರು ವಿಮಾನ ನಿಲ್ದಾಣ ನಿರ್ದೇಶಕ ಜಿ.ಆರ್.ಅನೂಪ್, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ಸೇಫ್ ವ್ಹೀಲ್ ಸಂಸ್ಥೆಯ ಬಿ.ಎಸ್.ಪ್ರಶಾಂತ್, ಸ್ಕಾಲ್ ಅಧ್ಯಕ್ಷ ಜಯಕುಮಾರ್, ಮ್ಯಾಥ್ಯೂ, ಮುತ್ತುಕುಮಾರ್ ಸೇರಿದಂತೆ ವಿವಿಧ ಸಂಘ-ಸಂಸ್ಥೆಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

ವಿಮಾನಯಾನ ಸೇವೆ ವಿಸ್ತರಣೆ ಮೈಸೂರು ಅಭಿವೃದ್ಧಿಗೆ ಸಹಕಾರಿ

ವಿಮಾನ ನಿಲ್ದಾಣ ಸಲಹಾ ಸಮಿತಿ ಸಭೆಯಲ್ಲಿ ಶಾಸಕ ಜಿ.ಟಿ.ದೇವೇಗೌಡ ಅಭಿಮತ



ವಿಮಾನ ನಿಲ್ದಾಣ ಸಲಹಾ ಸಮಿತಿ ಸಭೆಯಲ್ಲಿ ಶಾಸಕ ಜಿ.ಟಿ.ದೇವೇಗೌಡ ಮಾತನಾಡಿದರು. ಸಂಸದ ಯದುವೀರ್, ಜಿಲ್ಲಾಧಿಕಾರಿ ಲಕ್ಷ್ಮಿಕಾಂತ ರೆಡ್ಡಿ, ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಇನ್ನಿತರ ಅಧಿಕಾರಿಗಳಿದ್ದರು.

ಮೈಸೂರು, ಜ.3(ಎಸ್‌ಬಿಡಿ)– ಮೈಸೂರಿನಿಂದ ವಿಮಾನಯಾನ ಸೇವೆ ವಿಸ್ತರಣೆ, ನಗರದ ಅಭಿವೃದ್ಧಿಗೆ ಸಹಕಾರಿಯಾಗಲಿದೆ ಎಂದು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಹೇಳಿದರು.

ಮೈಸೂರು ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಶುಕ್ರವಾರ ನಡೆದ ವಿಮಾನ ನಿಲ್ದಾಣ ಸಲಹಾ ಸಮಿತಿ ಸಭೆಯಲ್ಲಿ ಮಾತನಾಡಿದ ಅವರು, ಮೈಸೂರಿನಿಂದ ಮೊದಲಿನಂತೆ ಹೆಚ್ಚು ವಿಮಾನಗಳು ಹಾರಾಟ ನಡೆಸುವಂತಾಗಬೇಕು. ಅದಕ್ಕೆ ಅಗತ್ಯವಾದ ಎಲ್ಲಾ ರೀತಿಯ ಪ್ರಯತ್ನಗಳನ್ನು ನಡೆಸಬೇಕು. ಸಮರ್ಪಕ ರೀತಿಯಲ್ಲಿ ವಿಮಾನಗಳ ಸೇವೆ ದೊರೆಯುವಂತಾದರೆ ಮೈಸೂರು ನಗರದ ಬೆಳವಣಿಗೆ ಮತ್ತು ಪ್ರವಾಸೋದ್ಯಮ ಅಭಿವೃದ್ಧಿಗೆ ಅನುಕೂಲವಾಗಲಿದೆ ಎಂದರು.

ಬೆಂಗಳೂರು ನಂತರ ಮೈಸೂರು ಅತೀ ವೇಗವಾಗಿ ಬೆಳೆಯುತ್ತಿರುವ ನಗರವಾಗಿದೆ. ಬೆಂಗಳೂರಲ್ಲಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ನಿರ್ಮಾಣದ ಬಳಿಕ ಆ ನಗರದ ಚಹರೆಯೇ ಬದಲಾಗಿದೆ. ಹಾಗಾಗಿ ಮೈಸೂರು ವಿಮಾನ ನಿಲ್ದಾಣ ಅಭಿವೃದ್ಧಿಯಾದರೆ ಈ ಭಾಗದ ಚಿತ್ರಣವೂ ಬದಲಾಗಲಿದೆ. ಹೆಚ್ಚು ವಿಮಾನಗಳು ಹಾರಾಡಿದರೆ ಬೃಹತ್ ಉದ್ಯಮಗಳ ಸ್ಥಾಪನೆ ಆಗಲಿದೆ. ಹೊಸ ಕೈಗಾರಿಕೆಗಳು ಆರಂಭವಾಗಲಿವೆ. ಆ ಮೂಲಕ ಮೈಸೂರಿಗೆ ಅಧಿಕ ಪ್ರಮಾಣದ ಬಂಡವಾಳ ಹರಿದು ಬರಲಿದೆ ಎಂದು ಹೇಳಿದರು.

ವಿಮಾನ ಸೇವೆ ಆರಂಭದಲ್ಲಿ ವೇಗ ಪಡೆದುಕೊಂಡಿತು. ಆನಂತರದಲ್ಲಿ ಕಾರಣಾಂತರಗಳಿಂದ ಕುಂಠಿತಗೊಂಡಿತು. ಈಗ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ವಿಮಾನ ಸೇವೆ ಹೆಚ್ಚಿಸಲು ಶ್ರಮಿಸುತ್ತಿದ್ದಾರೆ. ಮೈಸೂರು ನಗರವು ಚಾಮರಾಜನಗರ, ಮಂಡ್ಯ, ಕೊಡಗು ಜಿಲ್ಲೆಗಳ ಕೇಂದ್ರ ಸ್ಥಾನವಾಗಿರುವುದರಿಂದ ವಿಮಾನ ಸೇವೆ ವಿಸ್ತರಣೆಗೆ ಪೂರಕವಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಎಲ್ಲಾ ರೀತಿಯ ನೆರವು ನೀಡಬೇಕು ಎಂದು ತಿಳಿಸಿದರು. ವಿಮಾನ ನಿಲ್ದಾಣದ ರನ್ ವೇ ವಿಸ್ತರಣೆಗೆ ಭೂ ಸ್ವಾಧೀನ, ಮೇಲ್ಸೇತುವೆ ನಿರ್ಮಾಣ, ಚಾನಲ್‌ಗಳ ಬದಲಾವಣೆ, ವಿದ್ಯುತ್ ಲೈನ್ ಮಾರ್ಗ ಬದಲಾವಣೆ ಸೇರಿದಂತೆ ಎಲ್ಲಾ ಅಗತ್ಯ ಕೆಲಸಗಳನ್ನು ಅಧಿಕಾರಿಗಳು ಸಮನ್ವಯತೆಯಿಂದ ಮಾಡಬೇಕಿದೆ. ಅಧಿಕಾರಿಗಳು ಯಾವುದೇ ಗೊಂದಲವಾಗದಂತೆ ಕಾರ್ಯ ನಿರ್ವಹಿಸಿದಾಗ ಮಾತ್ರ ತ್ವರಿತ ಅಭಿವೃದ್ಧಿ ಸಾಧ್ಯ ಎಂದು ಕಿವಿಮಾತು ಹೇಳಿದರು.

ಪ್ರವಾಸಿ ತಾಣಗಳ ಚಿತ್ರ ಪ್ರದರ್ಶಿಸಿ: ವಿಮಾನ ನಿಲ್ದಾಣದಲ್ಲಿ ಮೈಸೂರು ಹಾಗೂ ಸುತ್ತಮುತ್ತಲ ಪ್ರವಾಸಿ ತಾಣಗಳ ಚಿತ್ರ ಸಹಿತ ಮಾಹಿತಿ ಪ್ರದರ್ಶಿಸಿದರೆ ಪ್ರವಾಸೋದ್ಯಮದ ಪ್ರಚಾರದ ಜೊತೆಗೆ ಪ್ರವಾಸಿಗರಿಗೆ ಅನುಕೂಲವೂ ಆಗುತ್ತದೆ. ಚಾಮುಂಡಿಬೆಟ್ಟ, ಅರಮನೆ, ಮಲೆ ಮಹದೇಶ್ವರ ಬೆಟ್ಟ, ಬಂಡೀಪುರ, ನಾಗರಹೊಳೆ, ಕೆಆರ್‌ಎಸ್ ಜಲಾಶಯ, ಶ್ರೀರಂಗಪಟ್ಟಣ, ಬಿಳಿಗಿರಿ ರಂಗನಬೆಟ್ಟ, ಹೀಗೆ ಎಲ್ಲಾ ತಾಣಗಳ ಚಿತ್ರಗಳನ್ನು ಪ್ರದರ್ಶಿಸಿ, ವಿಮಾನ ನಿಲ್ದಾಣದಿಂದ ಆ ತಾಣಗಳಿಗೆ ಎಷ್ಟು ಅಂತರವಿದೆ ಎಂಬುದನ್ನೂ ನಮೂದಿಸಿದರೆ ಒಳ್ಳೆಯದು ಎಂದು ಸಲಹೆ ನೀಡಿದರು. ಬೆಳಗಾವಿ ಮತ್ತು ಶಿವಮೊಗ್ಗದಲ್ಲಿ ವಿಮಾನ ಸೇವೆ ಆರಂಭಗೊಂಡು ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ಮೈಸೂರು ಐತಿಹಾಸಿಕ ಹಾಗೂ ಪಾರಂಪರಿಕ ಹಿನ್ನೆಲೆ ಹೊಂದಿರುವುದರಿಂದ ಇನ್ನೂ ಉತ್ತಮ ಪ್ರತಿಕ್ರಿಯೆ ಸಿಗಲಿದೆ. ಇಲ್ಲಿಗೆ ವರ್ಷದಲ್ಲಿ ಲಕ್ಷಾಂತರ ಜನ ಪ್ರವಾಸಿಗರು ಬರುತ್ತಾರೆ. ರೈಲ್ವೆ ಹಾಗೂ ರಸ್ತೆ ಸಂಪರ್ಕ ಉತ್ತಮವಾಗಿದ್ದು, ಸಮರ್ಪಕ ವಿಮಾನಯಾನ ಸೇವೆ ಕಲ್ಪಿತವಾದರೆ ಪ್ರವಾಸಿಗರ ಸಂಖ್ಯೆ ಗಣನೀಯವಾಗಿ ಹೆಚ್ಚಳವಾಗಲಿದೆ. ಈ ನಿಟ್ಟಿನಲ್ಲಿ ಎಲ್ಲರೂ ಶ್ರಮಿಸಬೇಕು ಎಂದು ತಿಳಿಸಿದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಸಂಸದ ಯದುವೀರ್ ಮಾತನಾಡಿ, ರನ್‌ವೇ ವಿಸ್ತರಣೆ, ಏರ್ ಕೇರಳ ಸಂಸ್ಥೆ ವಿಮಾನಯಾನ ಸೇವೆಗೆ ಮುಂದಾಗಿರುವುದು, ಇತರ ವಿಮಾನಯಾನ ಸಂಸ್ಥೆಗಳೊಂದಿಗಿನ ಮಾತುಕತೆ ಸೇರಿದಂತೆ ಹಲವು ವಿಚಾರಗಳ ಬಗ್ಗೆ ಮಾಹಿತಿ ಹಂಚಿಕೊಂಡರು.

ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ, ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಮೈಸೂರು ವಿಮಾನ ನಿಲ್ದಾಣ ನಿರ್ದೇಶಕ ಜಿ.ಆರ್.ಅನೂಪ್ ಮತ್ತಿತರರ ಅಧಿಕಾರಿಗಳು ಸಭೆಯಲ್ಲಿದ್ದರು.

DOCUMENT LOST

To Whomsoever it may concern

This is to inform the general public that I, **R. Shobha,** W/o. M. Chethan, residing at # 3008, Gokulam Park Road, Gokulam, Myore-570002, have lost the **Original Title Deed pertaining to the property located at Site # 1, No. 733/1/321/1/Kadakola, Mysuru Taluk, Jayapura Hobli which was executed on22/11/1991 respectively & registered as document No. 4404/91-92, Book 1 at Mysore North Sub Registrar.**

The Title Deed was lost during transit on 02/01/2025 near Gokulam. Accordingly a police report of the same has been filed.

If found, kindly inform Mrs. R.Shobha, W/o M.Chethan, Mobile No: **9886160569** immediately. This notice is issued in the public interest to prevent any fraudulent claims or disputes regarding the aforementioned property.



ಚಿದರವಳ್ಳಿ ಗ್ರಾಮ ಪಂಚಾಯಿತಿ ಕಾರ್ಯಾಲಯ

ಚಿದರವಳ್ಳಿ, ಸೋಸಲೆ ಹೋಬಳಿ, ತಿ.ನರಸೀಪುರ ತಾಲ್ಲೂಕು-571120. ಮೊ : 9986141493

ದಿನಾಂಕ:: 06.01.2025

ಕೆರೆಗಳ ಮೀನು ಪಾಶುವಾರು ಹಕ್ಕಿನ ಬಹಿರಂಗ ಹರಾಜು ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಚಿದರವಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸೇರಿದ ಗ್ರಾಮಗಳಲ್ಲಿ ಮೀನು ಪಾಶುವಾರು ಹಕ್ಕನ್ನು ಹರಾಜು ದಿನದಿಂದ 3 ವರ್ಷದ ಅಂತ್ಯಕ್ಕೆ ಅನ್ವಯವಾಗುವಂತೆ ದಿನಾಂಕ 13.01.2025ರ ಸೋಮವಾರ ದಂದು ಚಿದರವಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಶ್ರೀಮತಿ ರಾಜೇಶ್ವರಿ ರವರ ಅಧ್ಯಕ್ಷತೆಯಲ್ಲಿ "ಗ್ರಾಮ ಪಂಚಾಯಿತಿ ಆವರಣ"ದಲ್ಲಿ ಬೆಳಿಗ್ಗೆ 11 ಗಂಟೆಗೆ ಬಹಿರಂಗ ಹರಾಜು ಪ್ರಕ್ರಿಯೆಯನ್ನು ಏರ್ಪಡಿಸಲಾಗಿದ್ದು ಆಸಕ್ತರು ಸದರಿ ಪ್ರಕ್ರಿಯೆಯಲ್ಲಿ ಭಾಗವಹಿಸಲು ಸೂಚಿಸಲಾಗಿದೆ.

-: ವಿಲೇವಾರಿ ಮಾಡಬೇಕಾದ ಕೆರೆಗಳ ವಿವರ :-

ಕ್ರ ಸಂ.	ಕೆರೆಗಳ ಹೆಸರು	ಗ್ರಾಮ	ನಿಗಧಿ ಪಡಿಸಿರುವ ಕನಿಷ್ಠ ಬಿಡ್ ಮೊತ್ತ	ಮುಂಗಡ ಠೇವಣಿ ಮೊತ್ತ	ಹರಾಜು ಪ್ರಕ್ರಿಯೆ ದಿನಾಂಕ
1.	ಕೊಂಬರಿಕಟ್ಟೆ	ಬೊಮ್ಮನಹಳ್ಳಿ	25000	2500	13.01.20250 ಸೋಮವಾರ
2.	ಹೊಸಕೆರೆ	ಚಿದರವಳ್ಳಿ	35000	3500	
3.	ಹಾಜಕೆರೆ	ಚಿದರವಳ್ಳಿ	35000	3500	
4.	ಪರ್ವತಪ್ಪನ ಕಟ್ಟೆ	ರಾಮೇಗೌಡನಪುರ	20000	2000	
5.	ಮುದ್ದುಮಲ್ಲಯ್ಯನ ಕಟ್ಟೆ	ಕೆಂಪಸಪುರ	20000	2000	
6.	ಕಾಡು ಬಸಪ್ಪನ ಕೆರೆ	ಬೋಳೇಗೌಡನಹುಂಡಿ	30000	3000	

ಕೆರೆಗಳ ಮೀನು ಪಾಶುವಾರು ಹಕ್ಕಿನ ವಿಲೇವಾರಿಯ ಷರತ್ತುಗಳು, ನಿಬಂಧನೆಗಳು ಹಾಗೂ ಹೆಚ್ಚಿನ ಮಾಹಿತಿಗಾಗಿ ಗ್ರಾಮ ಪಂಚಾಯಿತಿ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.

ಶ್ರೀಮತಿ ರಾಜೇಶ್ವರಿ, ಅಧ್ಯಕ್ಷರು, ಚಿದರವಳ್ಳಿ ಗ್ರಾ.ಪಂ.
ಶ್ರೀ ಜಗದೀಶ, ಉಪಾಧ್ಯಕ್ಷರು, ಚಿದರವಳ್ಳಿ ಗ್ರಾ.ಪಂ.
ರವಿಕುಮಾರ್ ಎಂ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಚಿದರವಳ್ಳಿ ಗ್ರಾ.ಪಂ.

ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು

ಆಯುಕ್ತರು, ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು

ಟೆಂಡರ್ ಅಧಿಸೂಚನೆ ಸಂಖ್ಯೆ:ಪು.ಸಂ.ಪ/ಉಗ್ರಾಣ/2024-25 ದಿನಾಂಕ: 30.12.2024

ಸಾರ್ವಜನಿಕ ಬಹಿರಂಗ ಪ್ರಕಟಣೆ

ಈ ಕೆಳಗೆ ನಮೂದಿಸಿದ ಅನುಪಯುಕ್ತ ಸಾಮಗ್ರಿಗಳಾದ ಬಿಡಿ ಭಾಗಗಳು ಹಾಗೂ ಟೈರ್ಸ್‌ಗಳ ಟೈರ್ಸ್‌ಗಳನ್ನು ಅವು ಯಾವ ಸ್ಥಿತಿಯಲ್ಲಿ ಮತ್ತು ಎಲ್ಲಿ ಇರುತ್ತವೆಯೋ ಹಾಗೆಯೇ ಅದೇ ಸ್ಥಿತಿಯಲ್ಲಿ ಮೊಹರ್ ಬಂದ್ ಲಕೋಟೆ ಹಾಗೂ ಹರಾಜಿನ ಮುಖಾಂತರ ವಿಲೇವಾರಿ ಮಾಡಲು.

ಕ್ರ ಸಂ	ವಸ್ತುಗಳ ಹೆಸರು	ಪ್ರಮಾಣ	ಕ್ರ ಸಂ	ವಸ್ತುಗಳ ಹೆಸರು	ಪ್ರಮಾಣ
1	ಕಬ್ಬಿಣದ ಟ್ರೇಗಳು	5	44	ರಬ್ಬರ್ ಸ್ಟಾಂಪ್-ಬಳಸದೆ ಇರುವ ಅನುಪಯುಕ್ತ	1ಕವರ್
2	ಪ್ಲಾಸ್ಟಿಕ್ ಟ್ರೇಗಳು	2	45	ವೈರ್ ಚೇರುಗಳು	31
3	ಹಳೆಯ ಗಡಿಯಾರ	5	46	ವೈರ್ ಚೇರು (ವುಡನ್)	6
4	ಕಂಪ್ಯೂಟರ್ ಕಾಟ್ರೇಜ್ ಟ್ಯಾಂಕ್/ಜೆರಾಕ್ಸ್ ಕಾಟ್ರೇಜ್	170	47	ಎಕ್ಸಿಕ್ಯೂಟಿವ್ ಆಫೀಸ್ ಚೇರ್	1
5	ಕಂಪ್ಯೂಟರ್ ಪ್ರಿಂಟರ್	13	48	ಟಿಪಾಯಿ	5
6	ಸೋಲಾರ್ ಫ್ಯಾನ್ಸ್	39	49	ಕಬ್ಬಿಣದ ಚೇರ್‌ಗಳು	4
7	ಬ್ಯಾಟರೀಸ್	42	50	ವೈರ್ ಕಾಟ್‌ಗಳು	3
8	ಜೆರಾಕ್ಸ್ ಮೆಷಿನ್ಸ್	3	51	ಕಂಪ್ಯೂಟರ್ ಟೇಬಲ್	1
9	ಜೆರಾಕ್ಸ್ ಮೆಷಿನ್ಸ್ ಡ್ರಮ್ ಕಾಟ್ರೇಜ್	25	52	ಮರದ ಪೆಡಸ್ಟಲ್	1
10	ಕಂಪ್ಯೂಟರ್ ಸಿಪಿಯು	11	53	ಎಲೆಕ್ಟ್ರಿಕಲ್ ಬಾಕ್ಸ್‌ಗಳು	5
11	ಎಸಿಸಿ-ಯುಪಿಎಸ್	7	54	ಸ್ವಿಚ್ ಬೋರ್ಡ್‌ಗಳು	8
12	ಟೆಲಿಫೋನ್ ಇನ್ಸ್‌ಟ್ರೂಮೆಂಟ್	42	55	ಹಳೆಯ ಜೆರಾಕ್ಸ್ ಯಂತ್ರ	1
13	ಫ್ಯಾಕ್ಸ್ ಮೆಷಿನ್	1	56	ಮರದ ಪಟ್ಟಿಗಳು	12
14	ಸ್ಕ್ಯಾನರ್	2	57	ಕಬ್ಬಿಣದ ಬಿಂದಿಗೆ	4
15	ಮಾನಿಟರ್	9	58	ಕಬ್ಬಿಣದ ಬಾಣಲಿ	9
16	ಕ್ಯಾಲಿಕ್ಯೂಲೇಟರ್	6	59	ಕ್ಯಾಟಲಾಗ್ ಲಾಕರ್‌ಗಳು	3
17	ಫೋಟೋ ಕಟರ್	1	60	ಮರದ ಟೇಬಲ್‌ಗಳು	2
18	ಪ್ರಿಂಟರ್ ಆಲ್ ಇನ್ ಒನ್ ಹಳೆಯದು	4	61	ಮರದ ಬೋರ್ಡ್‌ಗಳು	4
19	ಆಲೋಜಿನ್ ಲೈಟ್	3	62	ಕಬ್ಬಿಣದ ರ್‍ಯಾಕ್‌ಗಳು	2
20	ಸ್ಟೆಬ್‌ಲೈಜರ್	6	63	ಲೋಹದ ಚಿಕ್ಕ ಬಾಕ್ಸ್‌ಗಳು	1200
21	ಸಿಡಿ ರೈಟರ್	2	64	ಕಬ್ಬಿಣದ ಗ್ರಿಲ್‌ಗಳು	2
22	ಇಂಟರ್ ಮೋಡಮ್	9	65	ಕಬ್ಬಿಣದ ಗ್ರಿಲ್‌ಗಳು	2
23	ಎಸ್‌ಎಂಪಿಎಸ್	11	66	ಅಲುಮಿನಿಯಮ್ ಏಣಿ	1
24	ಪ್ರಾಜೆಕ್ಟರ್	1	67	ಸೋಲಾರ್ ಲೈಟ್ಸ್	8
25	ಕೀ ಬೋರ್ಡ್	17	68	ಅಲುಮಿನಿಯಮ್ ಬಿಡಿ ಭಾಗಗಳು	26
26	ಬೋರ್‌ವೆಲ್ ಸ್ಟಾಟ್ ಬೋರ್ಡ್	1	69	ನ್ಯೂಸ್ ಪೇಪರ್	40
27	ಜನರೇಟರ್ ರಿಪೇರಿ ಪಾರ್ಟ್ಸ್/ಡಿಸ್ ಪ್ಲೇ ಬೋರ್ಡ್	15	70	ಅನುಪಯುಕ್ತ ಕಬ್ಬಿಣದ ದಪ್ಪ (ಗರ್ಡರ್ ಪಿಲ್ಲರ್)	2
28	ಟೈಯರ್-ಟಾಟಾ ಸುಮೋ	24	71	ಅನುಪಯುಕ್ತ ಕಬ್ಬಿಣದ ಎಲ್ ಪೀಸ್ ಹ್ಯಾಂಗ್ಲರ್ಸ	40
29	ಡಿಪಿ ಸ್ವಿಚ್	13	72	ಅನುಪಯುಕ್ತ ಕಬ್ಬಿಣದ ಪೀಸ್	15
30	ಕಬ್ಬಿಣದ ಟೇಬಲ್	1	73	ಅನುಪಯುಕ್ತ ಕಬ್ಬಿಣದ ಪೈಪ್	2
31	ಇಂಟರ್‌ನೆಟ್ ಸ್ವಿಚ್	10	74	ಅನುಪಯುಕ್ತ ಕಬ್ಬಿಣದ ಲೈಟ್ ಪೋಲ್	1
32	ರಾಕ್-ಪ್ಲೇಟ್ಸ್	3	75	ಸೀಲಿಂಗ್ ಲೈಟ್ಸ್ 2.2	6
33	ವೈರ್‌ಚೇರ್	3	76	ಟ್ಯೂಬ್ ಲೈಟ್ಸ್ ಫಿಟಿಂಗ್ಸ್	30
34	ಕಂಪ್ಯೂಟರ್ ಚೇರ್	2	77	ಸ್ಟ್ಯಾಂಡಿಂಗ್ ಫ್ಯಾನ್	1
35	ಕಬ್ಬಿಣದ ಚೇರ್	4	78	ಸೀಲಿಂಗ್ ಲೈಟ್ಸ್	100
36	ಕಬ್ಬಿಣದ ಸ್ಟೂಲ್	1	79	ಕಾರ್ ಪಾರ್ಟ್ಸ್ ಸ್ಕ್ರಾಪ್	100kg
37	ಸೀಲಿಂಗ್ ಫ್ಯಾನ್	9	80	ಬೋರ್‌ವೆಲ್ ಕಬ್ಬಿಣದ ಪಾಟ್ಸ್	30kg
38	ತಳ್ಳುಗಾಡಿ-ವೀಲ್ಸ್‌ಗಳು	4	81	ಬಕೆಟ್	10
39	ಆರ್.ಓ.ವಾಟರ್ ಫಿಲ್ಟರ್	3	82	ಅಲ್ಮೇರ	4
40	ಪ್ಲಾಸ್ಟಿಕ್ ಟೈಯಿಲೆಟ್ ಬಕೆಟ್	3	83	ಲೈಟ್ಸ್ ಡೂಮ್ ಸೀಲಿಂಗ್	40
41	ಸ್ಟೀಲ್ ವಾಟರ್ ಫಿಲ್ಟರ್-ವಿತ್ ಸ್ಟಾಂಡ್-ಸ್ಟ್ಯಾಂಡ್ಸ್	4	84	ಸಿಪಿಯು, ಮೊನಿಟರ್ ಸೆಟ್	2
42	ಬ್ಯಾಟರಿ ಸ್ಟಾಂಡ್	5	85	ಸೋಲಾರ್ ಲೈಟ್ಸ್	25
43	ಛಾರ್ಜರ್ ಬ್ಯಾಟರಿ	2	86	ಸೋಲಾರ್ ಪೆನಾಲ್	44

ತೆರಿಗೆಗಳಾದ ಜಿ.ಎಸ್.ಟಿ / ಐ.ಟಿ ಮತ್ತು ಸರ್‌ಚಾರ್ಜ್‌ಗಳು ಸರ್ಕಾರದ ಪ್ರಚಲಿತ ದರಗಳಂತೆ ಅನ್ವಯವಾಗುತ್ತದೆ. ಭರ್ತಿ ಮಾಡಿದ ಮೊಹರ್ ಬಂದ್ ಲಕೋಟೆಯ ಮೇಲೆ **"ಆಯುಕ್ತರು, ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು ಕಚೇರಿಯ ಅನುಪಯುಕ್ತ ಸಾಮಾಗ್ರಿಗಳು"** ಎಂದು ಬರೆದು **ದಿನಾಂಕ: 10.01.2025 17:00 ಘಂಟೆಯವರೆಗೆ** ಕಚೇರಿಯಲ್ಲಿ ಮೊಹರ್ ಬಂದ್ ಲಕೋಟೆ ಸ್ವೀಕರಿಸುವ ಸಲುವಾಗಿಯೇ ಇಟ್ಟಿರುವ ಬಾಕ್ಸ್‌ನೊಳಗೆ ಹಾಕತಕ್ಕದ್ದು. ಇ.ಎಂ.ಡಿ ಯನ್ನು ಪ್ರತ್ಯೇಕವಾಗಿ ಕಚೇರಿಯಲ್ಲಿ ಪಾವತಿಸಿ ಸ್ವೀಕೃತಿ ಪಡೆಯುವುದು. ಹರಾಜು ಮುಗಿದ ನಂತರ ಮೊಹರ್ ಬಂದ್ ಲಕೋಟೆಗಳನ್ನು ಎಲ್ಲರ ಸಮಕ್ಷಮದಲ್ಲಿ ತೆರೆಯಲಾಗುವುದು.

ಸಹಿ/- ಆಯುಕ್ತರು
ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು

DIPR/MYS/KAVITA/1046/2024-25

ನಕ್ಕರೆ ಅದೇ ಸ್ವರ್ಗ

ಹೆಂಡತಿ : ರೀ ಸಂಕ್ರಾಂತಿ ಹಬ್ಬಕ್ಕೆ ಶಾಪಿಂಗ್‌ಗೆ ಲಿಸ್ಟ್ ಮಾಡೋಣ್ವಾ...!

ಗಂಡ : ಸರಿ ಲಿಸ್ಟ್ ಬರಿ...

ಹೆಂಡತಿ : ಸರಿ ಹಾಗಿದ್ರೆ ಮೊದಲು ಏನ್ ತಗೊಳ್ಳೋವಾ?

ಗಂಡ : ಸಾಲ!

ಮೈಸೂರು ಮಿತ್ರ

ಶನಿವಾರ, 4 ಜನವರಿ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

ತಡವಾಗಿ ಸಿಕ್ಕ ಯಶಸ್ಸು ವ್ಯಕ್ತಿತ್ವ ರೂಪಿಸುತ್ತದೆ.
ತಕ್ಷಣಕ್ಕೆ ಸಿಕ್ಕ ಯಶಸ್ಸು ಅಹಂಕಾರ ಸೃಷ್ಟಿಸುತ್ತದೆ.– ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ನಿನ್ನದಲ್ಲ ಸರ್ವ ಆಸ್ತಿ, ಒಳ್ಳೆಯದಲ್ಲ ಗರ್ವ ಜಾಸ್ತಿ

ನಿಮ್ಮ ಪತ್ರಗಳು

ನಾಯಿ ಕೊಡೆಯಂತೆ ತಲೆ ಎತ್ತುತ್ತಿರುವ ವೇಶ್ಯಾವಾಟಿಕೆ ತಾಣಗಳು!

ಮಾನ್ಯರೆ,

ಮೈಸೂರು ನಗರದಲ್ಲಿ ಇತ್ತೀಚೆಗೆ ನಾನಾ ಹೆಸರುಗಳಲ್ಲಿ ವೇಶ್ಯಾವಾಟಿಕೆ ದಂಧೆಯು ಎಗ್ಗಿಲ್ಲದೆ ನಡೆಯುತ್ತಿರುವುದು ಕಳವಳಕಾರಿಯಾದ ಸಂಗತಿಯಾಗಿದೆ. ಈ ಋಣಾತ್ಮಕ ಬೆಳವಣಿಗೆಯನ್ನು ನಿಯಂತ್ರಿಸದೆ ಹೋದಲ್ಲಿ ಸಾಂಸ್ಕೃತಿಕ ನಗರಿ ಮೈಸೂರು ಮುಂದೊಮ್ಮೆ ವೇಶ್ಯಾವಾಟಿಕೆಯ ಕೇಂದ್ರ ಎನ್ನಿಸಿಕೊಂಡರೆ ಆಶ್ಚರ್ಯವಿಲ್ಲ. ಕಾನೂನು ಬಾಹಿರವಾದ ಈ ಚಟುವಟಿಕೆ ಬ್ಯೂಟಿ ಪಾರ್ಲರ್, ಸ್ಪಾ, ಎಸ್ಕಾರ್ಟ್ ಸರ್ವೀಸ್ ಮೊದಲಾದ ಹೆಸರುಗಳ ದುರುಪಯೋಗದೊಂದಿಗೆ ನಡೆಯುತ್ತಿರುವುದು ಒಂದೆಡೆಯಾದರೆ ಈ ಅಡ್ಡೆಗಳನ್ನು ಕಂಡು ಹಿಡಿದು ಕಾನೂನು ಸಮಕ್ಷಮಕ್ಕೆ ತರಬೇಕಾದ ಕೆಲವು ಅಧಿಕಾರಿಗಳು ಇಲಾಖೆಯ ಘನತೆಯನ್ನು ಅಡಕತ್ತರಿಯಲ್ಲಿರಿಸಿ ತಮ್ಮ ವೈಯಕ್ತಿಕ ಲಾಭಗಳಿಗಾಗಿ ಕಾನೂನು ವಿರೋಧಿ ವ್ಯಕ್ತಿಗಳೊಂದಿಗೆ ಕೈ ಜೋಡಿಸುತ್ತಿರುವುದನ್ನು ಗಂಭೀರವಾಗಿ ಪರಿಗಣಿಸಬೇಕಾಗಿದೆ. ಈ ದಂಧೆಯನ್ನು ಮಟ್ಟ ಹಾಕುವ ನಿಟ್ಟಿನಲ್ಲಿ ದಕ್ಷತೆ ಹಾಗೂ ಪ್ರಾಮಾಣಿಕತೆಯನ್ನು ರೂಢಿಸಿಕೊಂಡಿರುವ ನಿಷ್ಠಾವಂತ ಅಧಿಕಾರಿಗಳು ನಡೆಸುವ ಪ್ರಯತ್ನಗಳು ಕೂಡ ಭ್ರಷ್ಟರಿಂದಾಗಿ ವಿಫಲಗೊಳ್ಳುತ್ತಿರುವುದು ವಿಷಾದನೀಯ. ಮಾನವ ಕಳ್ಳ ಸಾಗಾಣಿಕೆ ತಡೆಗಾಗಿಯೇ ನಿಯೋಜಿಸಲ್ಪಟ್ಟಿರುವ ತಂಡಗಳು ಕೂಡ (ಎಹೆಚ್‌ಟಿಯು) ಇಲಾಖೆಯೊಳಗಿನ ತಮ್ಮ ಸಂಬಂಧಗಳನ್ನು ಹದಗೆಡಿಸಿಕೊಳ್ಳಲಿಚ್ಚಿಸದೆ ಕೈ ಚೆಲ್ಲುತ್ತಿರುವುದು ಕಂಡು ಬರುತ್ತಿದೆ. ಹತ್ತು ಹಲವು ಬಾರಿ ಕಾನೂನಿನ ಚೌಕಟ್ಟಿಗೆ ಬಂದಿರುವ ಪುನರಾವರ್ತಿತ ಆರೋಪಿಗಳು ಮತ್ತೆ ಮತ್ತೆ ಈ ದಂಧೆಗಳನ್ನು ನಡೆಸುತ್ತಿರುವುದು ಹಾಗೂ ಅವರಿಗೆ ನೀಡಿದ ಜಾಮೀನು ರದ್ದಾಗದಿರುವುದು ಈ ವ್ಯವಸ್ಥೆಗೆ ಹಿಡಿದ ಕೈಗನ್ನಡಿಯಾಗಿದೆ.

ಇತ್ತೀಚೆಗೆ ಸಾಂಸ್ಕೃತಿಕ ನಗರಿ ಮೈಸೂರಿನ ಭವಿಷ್ಯ ಹಾಗೂ ಅಭಿವೃದ್ಧಿಯ ಕಾರ್ಯಸೂಚಿಯೊಂದನ್ನು ತಯಾರಿಸುವ ನಿಟ್ಟಿನಲ್ಲಿ ಸರ್ಕಾರ ಹಾಗೂ ಜಿಲ್ಲಾಡಳಿತ ಕ್ಷೇತ್ರ ತಜ್ಞರ ಜೊತೆ ಸಮಾಲೋಚನೆ ನಡೆಸಿರುವುದು ಸ್ವಾಗತಾರ್ಹ. ಸರ್ಕಾರಕ್ಕೆ ಇರುವ ಆಸಕ್ತಿ ಹಾಗೂ ಕನಸುಗಳಿಗೆ ಈ ಕಾನೂನುಬಾಹಿರ ಅಡ್ಡೆಗಳ ಹೆಚ್ಚುವಿಕೆ ದೊಡ್ಡ ತಲೆನೋವಾಗಿದೆ. ಅಲ್ಲದೆ ಸರ್ಕಾರದ ಈ ಕನಸುಗಳನ್ನು ನನಸಾಗಿಸುವತ್ತ ಅಧಿಕಾರಿಗಳು ತಮ್ಮ ಕರ್ತವ್ಯ ಪ್ರಜ್ಞೆಯಿಂದ ಹೊರ ಸರಿಯುತ್ತಿರುವುದು ಅತ್ಯಂತ ಆತಂಕ ಹುಟ್ಟಿಸುವ ಸಂಗತಿಯಾಗಿದೆ. ಈ ಹೇಸಿಗೆ ದಂಧೆಯ ವಾಸನೆ ತಳಮಟ್ಟದಿಂದ ಏರುತ್ತಾ ಮೇಲ್ಮಟ್ಟದವರೆಗೆ ವ್ಯಾಪಿಸುತ್ತಿರುವುದು ಸರ್ಕಾರದ ಗ್ರಹಣ ಶಕ್ತಿಗೆ ತಲುಪಬೇಕಾಗಿದೆ. ನಗರದ ಪ್ರತಿ ಕಿಲೋಮೀಟರ್ ವ್ಯಾಪ್ತಿಯಲ್ಲೂ ಈ ದಂಧೆಗಳು ನಡೆಯುತ್ತಿರುವುದು ಕಾನೂನು ಸುವ್ಯವಸ್ಥೆಯಲ್ಲಿ ಇರುವ ಲೋಪವನ್ನಷ್ಟೇ ಎತ್ತಿ ಹಿಡಿಯುತ್ತಿದೆ. ಇದರ ಮಧ್ಯೆ ಕೆಲವು ಅಧಿಕಾರಿಗಳು ಯಾವುದೇ ಆಮಿಷಗಳಿಗೆ ಮಣಿಯದೆ ಈ ಕೊಳಕನ್ನು ತೊಳೆಯುವ ಕಾರ್ಯದಲ್ಲಿ ನಿರತರಾಗಿರುವುದು ಶ್ಲಾಘನೀಯ. ಸಾಂಸ್ಕೃತಿಕ ನಗರವನ್ನು ಕಟ್ಟುವ ಧನಾತ್ಮಕ ಯೋಜನೆಗಳು ಇಂತಹ ಲೈಂಗಿಕ ಅಪರಾಧಗಳ ಹಾಗೂ ಜೂಜು ದಂಧೆಗಳ ಬೆಳವಣಿಗೆಯಿಂದ ಕುಸಿದು ಘನತೆಯನ್ನು ಕಳೆದುಕೊಳ್ಳುವುದು ಕಳವಳಕರವಾದ ವಿಚಾರವಾಗಿದೆ.

ಕಳೆದ 35 ವರ್ಷಗಳಿಂದ ಮಾನವ ಕಳ್ಳ ಸಾಗಾಣಿಕೆ, ವೇಶ್ಯಾವಾಟಿಕೆ ಹಾಗೂ ಲೈಂಗಿಕ ಅಪರಾಧಗಳ ವಿರುದ್ಧ ಹೋರಾಟ ನಡೆಸುತ್ತಲೇ ನೊಂದವರ ಜೀವನ ಕಟ್ಟಿಕೊಡುವ ಕಾರ್ಯದಲ್ಲಿ ನಿರತರಾಗಿರುವ ಒಡನಾಡಿ ಸೇವಾ ಸಂಸ್ಥೆಯು, ಸರ್ಕಾರ ಹಾಗೂ ಇಲಾಖೆಗಳ ಪ್ರಯತ್ನಕ್ಕೆ ಕೈ ಜೋಡಿಸಲು ಸದಾ ಸಿದ್ಧವಿದ್ದು ಮುಂದಿನ ದಿನಗಳಲ್ಲಿ ಪೊಲೀಸ್ ಇಲಾಖೆ, ಆರೋಗ್ಯ ಇಲಾಖೆ ಹಾಗೂ ಮಹಾನಗರ ಪಾಲಿಕೆಯ ಸಹಭಾಗಿತ್ವದ ಕಾನೂನುಬದ್ಧ ಕಾರ್ಯಾಚರಣೆಗಳು ನಡೆಯಲೆಂದು ಆಶಿಸುತ್ತವೆ.

–ಸ್ಟ್ಯಾನ್ಲಿ–ಪರಶು, ನಿರ್ದೇಶಕರು, ಒಡನಾಡಿ ಸೇವಾ ಸಂಸ್ಥೆ

ಶೀಘ್ರ ಡಾಂಬರೀಕರಣಗೊಳಿಸಿ

ಮಾನ್ಯರೆ,

ಮಂಡ್ಯ ತಾಲೂಕು ಅಪ್ಪೇರಳ್ಳಿ ಗ್ರಾಮದಿಂದ ಪಾಂಡವಪುರ ತಾಲೂಕು ಅಗಟಹಳ್ಳಿ ಹಾಗೂ ನೊದೆಕೊಪ್ಪಲು ಗ್ರಾಮಗಳ ಮಾರ್ಗವಾಗಿ ಬ್ಯಾಡರಹಳ್ಳಿ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಗುಂಡಿಗಳಿಂದ ಕೂಡಿದ್ದು, ಇಲ್ಲಿಯವರೆಗೂ ಡಾಂಬರೀಕರಣವಿಲ್ಲದೆ ಸಂಪೂರ್ಣ ಹಾಳಾಗಿದೆ. ಈ ರಸ್ತೆಯನ್ನು ಡಾಂಬರೀಕರಣ ಮಾಡುವಂತೆ ಅನೇಕ ಬಾರಿ ಅಧಿಕಾರಿಗಳಿಗೆ ಹಾಗೂ ಜನಪ್ರತಿನಿಧಿಗಳಿಗೆ ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗಿಲ್ಲ. ಈ ರಸ್ತೆಯಲ್ಲಿ ಭಾರೀ ವಾಹನಗಳು ಹಾಗೂ ದ್ವಿಚಕ್ರ ವಾಹನಗಳು ಓಡಾಡುವುದರಿಂದ ಆಗಾಗ್ಗೆ ಅಪಘಾತಗಳು ಸಂಭವಿಸುತ್ತಲೇ ಇರುತ್ತವೆ. ಆದ್ದರಿಂದ ಜನಪ್ರತಿನಿಧಿಗಳು ಕೂಡಲೇ ಈ ರಸ್ತೆಗೆ ಡಾಂಬರೀಕರಣಗೊಳಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕೆಂದು ಈ ಮೂಲಕ ಮನವಿ.

– ಅಗಟಹಳ್ಳಿ ಗ್ರಾಮಸ್ಥರು, ಪಾಂಡವರಪುರ ತಾ., ಮಂಡ್ಯ ಜಿಲ್ಲೆ.

ಪ್ರಿನ್ಸೆಸ್ (ರಾಜಕುಮಾರಿ)/ ಸಿದ್ದರಾಮಯ್ಯ ಆರೋಗ್ಯ ಮಾರ್ಗ

ಮಾನ್ಯರೆ,

ಕೆಲವು ದಿನಗಳಿಂದ ಮೈಸೂರಿನಲ್ಲಿ ಪ್ರತಿದಿನ ರಸ್ತೆಯ ಬಗ್ಗೆ ಜನಪ್ರತಿನಿಧಿಗಳು ಮಾತನಾಡುತ್ತಿರುವುದು ತುಂಬಾ ಹಾಸ್ಯಾಸ್ಪದ ಸಂಗತಿ. ಒಬ್ಬರು ಪ್ರಿನ್ಸೆಸ್ ರಸ್ತೆಯ ಹೆಸರನ್ನು ಬದಲಿಸಿ ಸಿದ್ದರಾಮಯ್ಯ ಆರೋಗ್ಯ ಮಾರ್ಗ ಎಂದು ನಾಮಕರಣ ಮಾಡಿಯೇ ತೀರುತ್ತೇನೆ ಎಂದು ಹೇಳಿದರು. ಅಲ್ಲಿಂದ ಪ್ರಾರಂಭವಾದ ಈ ಚರ್ಚೆ ಅನಗತ್ಯ ಗೊಂದಲಗಳ ಗೂಡಾಗಿ ಮೈಸೂರಿನ ಸಾಮಾನ್ಯ ಜನರಲ್ಲಿ ನಮಗೆ ಇದು ಬೇಕಿತ್ತಾ ಅನ್ನಿಸುತ್ತಿರುವುದರಲ್ಲಿ ಸಂಶಯವೇ ಇಲ್ಲ. ಕೆಲವರು ಪ್ರಿನ್ಸೆಸ್ ರಸ್ತೆ ಎಂದು ಮೊದಲೇ ಇತ್ತು ಎನ್ನುತ್ತಾರೆ. ಈ ಸಂಗತಿ ಮಹಾನಗರ ಪಾಲಿಕೆಯ ದಾಖಲೆಗಳಲ್ಲಿ ಇದ್ದಲ್ಲಿ ಅಧಿಕಾರಿಗಳಿಗೆ ಗೊತ್ತಿದ್ದು, ಗೊತ್ತಿಲ್ಲದಂತೆ ಇದ್ದರೆ ಈ ಸಂಗತಿ ಇಷ್ಟೊಂದು ಬೆಳೆಯಲು ಕಾರಣರಾದ ಅಧಿಕಾರಿಗಳೇ ಹೊಣೆಗಾರರಾಗಬೇಕಾಗುತ್ತದೆ. ನಗರ ಪಾಲಿಕೆಯ ಹಳೆಯ ಕೌನ್ಸಿಲ್ ಸಭಾಂಗಣದಲ್ಲಿ ನಡೆದ ಕೆಪಿಸಿಸಿ ಸಭೆಯಲ್ಲಿ ಕೆಆರ್‌ಎಸ್ ರಸ್ತೆಗೆ ಮೊದಲೇ ಪ್ರಿನ್ಸೆಸ್ ರಸ್ತೆ ಎಂದು ಹೆಸರು ಇದ್ದಲ್ಲಿ ಹಾಗೂ ಅದಕ್ಕೆ ಸಂಬಂಧಿಸಿದಂತೆ ದಾಖಲೆಗಳಿದ್ದಲ್ಲಿ ಸಿದ್ದರಾಮಯ್ಯ ಆರೋಗ್ಯ ಮಾರ್ಗ ಎಂದು ನಾಮಕರಣ ಮಾಡುವುದು ಬೇಡ ಎಂದು ಒಕ್ಕೊರಲಿನಿಂದ ಹೇಳಿರುತ್ತಾರೆ. ಇದು ಸ್ವಾಗತಾರ್ಹ. ಇನ್ನೂ ಮುಂದಾದರೂ ಮೈಸೂರಿನಲ್ಲಿರುವ ಪ್ರಜ್ಞಾವಂತ ಜನಪ್ರತಿನಿಧಿಗಳು ಯಾವುದೇ ಮುಖ್ಯವಾದ ವಿಷಯಗಳನ್ನು ಮುನ್ನೆಲೆಗೆ ತರುವ ಮೊದಲೇ ಕುಲಂಕಶವಾಗಿ ಅಧ್ಯಯನ ಮಾಡಿ ಕಾರ್ಯಪ್ರವೃತ್ತರಾಗುವುದು ಸೂಕ್ತ.

–ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು.



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ: 94482 08746/ 97421 79000

ಚಿಂತನೆ

ಆನ್‌ಲೈನ್‌ನಲ್ಲಿ ಹಣ ಸುಮ್ಮನೆ ಬರೋದಿಲ್ಲ...!


ಇತ್ತೀಚೆಗೆ ಸುದ್ದಿ ಮಾಧ್ಯಮಗಳಲ್ಲಿ ಹೆಚ್ಚಾಗಿ ಜನರು ಮೋಸ ಹೋಗಿ ಹಣ ಕಳೆದುಕೊಳ್ಳುತ್ತಿರುವ ಬಗ್ಗೆ ವರದಿಯಾಗುತ್ತಿದೆ. ಇದರಲ್ಲಿ ಮುಖ್ಯವಾಗಿ ವಿದ್ಯಾವಂತರೇ ಹೆಚ್ಚಾಗಿರುವುದು ಆತಂಕ ಮೂಡಿಸುತ್ತದೆ. ಅದರಲ್ಲೂ ಸಾಮಾಜಿಕ ಜಾಲತಾಣಗಳಲ್ಲಿ ಹೆಚ್ಚು ಸಕ್ರಿಯವಾಗಿರುವ ಪ್ರಜ್ಞಾವಂತರು, ವಿಚಾರವಂತರೇ ಹೀಗೆ ಮೋಸ ಹೋಗುತ್ತಿದ್ದಾರೆ. ಮೋಸ ಹೋಗುವವರು ಇರುವವರೆಗೂ ಮೋಸ ಮಾಡುವವರು ಇದ್ದೇ ಇರುತ್ತಾರೆ. ನಮ್ಮಲ್ಲಿ ಮೋಸ ಮಾಡುವವರು ಬಹಳ ಬುದ್ಧಿವಂತರಾಗಿರುವುದು ಅತ್ಯಂತ ಆತಂಕದ ವಿಷಯ. ಯಾವುದೇ ಕಾನೂನು ತಂದರೂ ಅವರು ಅದರಿಂದ ಹೇಗೆ ನುಣುಚಿಕೊಳ್ಳುವುದು ಎಂಬುವುದರಲ್ಲಿ ಚಾಣಾಕ್ಷರು. ಕಾನೂನು ರಚಿಸುವವರಿಗಿಂತ ಇವರೇ ಬುದ್ಧಿವಂತರಂತೆ ಕಂಡುಬರುತ್ತಾರೆ.

ಹೀಗಾಗಿ ಇಂದು ನ್ಯಾಯಾಲಯಗಳಲ್ಲಿ ಅನೇಕ ಪ್ರಕರಣಗಳು ಅನಿರೀಕ್ಷಿತ ಮುಕ್ತಾಯ ಕಾಣುತ್ತಿವೆ. ಪ್ರಕರಣ ಹೊರನೋಟಕ್ಕೆ ಶಿಕ್ಷಾರ್ಹ ಎನಿಸುತ್ತದೆ. ಅದೂ ಸಾರ್ವಜನಿಕರ ಗಮನ ಸೆಳೆದಿದ್ದರೆ ಜನರು ಆ ಬಗ್ಗೆ ನ್ಯಾಯಾಲಯಗಳ ವಿಚಾರಣೆಯ ವರದಿ ಗಮನಿಸುತ್ತಾರೆ. ಪ್ರಕರಣಕ್ಕೆ ಹೀಗೇ ಮುಕ್ತಾಯ ಸಿಗುತ್ತದೆ ಎಂದು ಭಾವಿಸಿರುತ್ತಾರೆ. ಆದರೆ ನ್ಯಾಯಾಲಯಗಳು ಕೆಲವು ವಿಧಿವಿಧಾನಗಳನ್ನು ಅನುಸರಿಸುವುದರಿಂದ ಕೆಲವೊಮ್ಮೆ ನಾವಂದುಕೊಂಡಂತೆ ಪ್ರಕರಣದ ತೀರ್ಪು ಬರುವುದಿಲ್ಲ. ಇಲ್ಲೆಲ್ಲಾ ಕಾನೂನಿಗಿಂತ ಅದನ್ನು ಅರ್ಥ ಮಾಡಿಕೊಳ್ಳುವ ಹಾಗೂ ಒಳಹೊರಗು ಅರ್ಥ ಮಾಡಿಕೊಂಡು ಪ್ರಸ್ತುತಪಡಿಸುವುದರ ಮೇಲೆ ಪ್ರಕರಣಗಳು ಇತ್ಯರ್ಥವಾಗುತ್ತವೆ.

ಇತ್ತೀಚೆಗೆ ನಮ್ಮ ಮೈಸೂರಿನ ಒಬ್ಬ ಯುವಕ ಆತ್ಮಹತ್ಯೆಗೆ ಶರಣಾದ ಸುದ್ದಿ ಪತ್ರಿಕೆಯಲ್ಲಿ ಸಣ್ಣದಾಗಿ ಪ್ರಕಟವಾಗಿತ್ತು. ಇಂತಹ ಸುದ್ದಿ ಪತ್ರಿಕೆಗಳಲ್ಲಿ ಆಗಾಗ್ಗೆ ಇಲ್ಲವೆ ದಿನನಿತ್ಯ ಬರುವುದರಿಂದ ಹೆಚ್ಚಾಗಿ ಆ ಕಡೆಗೆ ನಮ್ಮ ಗಮನ ಸೆಳೆಯುವುದಿಲ್ಲ. ಈ ಬಗ್ಗೆ ಸಂಬಂಧಿಸಿದವರಲ್ಲಿ ವಿಚಾರಿಸಿದಾಗ ಗೊತ್ತಾದದ್ದು ಆತ 35 ವರ್ಷದ ಯುವಕ. ಒಳ್ಳೆಯ ಸ್ವಭಾವದವ. ಆದರೆ ಅವನಿಗೆ ಆನ್‌ಲೈನ್ ಆಟದ ಹುಚ್ಚು ಹತ್ತಿತ್ತು. ದಿನದಲ್ಲಿ ಹತ್ತಾರು ಗಂಟೆ ಮೊಬೈಲ್‌ನಲ್ಲಿ ಆತ ಆ ಆಟವಾಡುತ್ತಿದ್ದ. ಆರಂಭದಲ್ಲಿ ಒಂದಷ್ಟು ಹಣ ಗಳಿಸಿದ. ಆಗ ಈ ವ್ಯಾಮೋಹ ಮತ್ತಷ್ಟು ಹೆಚ್ಚಾಯಿತು. ನಂತರ ನಿರಂತರವಾಗಿ ಹಣ ಕಳೆದುಕೊಂಡ. ಕೊನೆಗೆ ಆ ಗುಂಗಿನಿಂದ ಹೊರಬರಲಾಗದೆ, ಜೀವನ ಮುಗಿಸಿಕೊಳ್ಳುವ ಆಲೋಚನೆಗೆ ಬಂದು, ಜೀವನ ಅಂತ್ಯಗೊಳಿಸಿದ.

ಇಂತಹ ಹಲವಾರು ಘಟನೆಗಳು ನಮ್ಮ ಸುತ್ತಮುತ್ತಾ ನಿರಂತರವಾಗಿ ನಡೆಯುತ್ತಿವೆ. ಕೆಲವರು ಆತ್ಮಹತ್ಯೆ ಮಾಡಿಕೊಳ್ಳದಿದ್ದರೂ ಹೆಚ್ಚಿನ ಆತಂಕದಿಂದ ಹೃದಯಾಘಾತಕ್ಕೆ ಒಳಗಾಗಿ ಜೀವನ ಕಳೆದುಕೊಳ್ಳುತ್ತಿದ್ದಾರೆ. ಈ ಬಗ್ಗೆ ಪೊಲೀಸರಿಗೆ ದೂರು ನೀಡಿದರೂ ಅವರು ಸಲೀಸಾಗಿ ತನಿಖೆ ಮಾಡಲಾಗದಂತಹ ಸ್ಥಿತಿಯಲ್ಲಿ ಇರುತ್ತಾರೆ. ಈ ರೀತಿಯ ಸೈಬರ್ ಅಪರಾಧ ಮಾಡಿದ ನಂತರ ಅವರ ಕಾರ್ಯಸ್ಥಾನ, ಅವರ ಬ್ಯಾಂಕಿನ ಖಾತೆ ಎಲ್ಲವೂ ರದ್ದಾಗಿಬಿಟ್ಟಿರುತ್ತದೆ. ಹೀಗಾದಾಗ ಅಪರಾಧಿಗಳನ್ನು ಕಂಡುಹಿಡಿಯುವುದು ಅಷ್ಟು ಸುಲಭವಲ್ಲ.

ಅಲ್ಲದೆ ದಿನನಿತ್ಯ ಇಂತಹ ಪ್ರಕರಣಗಳು ವರದಿಯಾಗುತ್ತಲೇ ಇರುತ್ತವೆ. ನಿಮಗೆ ಕೆಲಸ ಬೇಕೆ? ಮನೆಯಲ್ಲೇ ಕುಳಿತು ದಿನಕ್ಕೆ ಸಾವಿರಾರು ರೂಪಾಯಿ ಸಂಪಾದಿಸಿ, ಹೂಡಿಕೆ ಮಾಡಿ ಅಧಿಕ ಲಾಭ ಪಡೆಯಿರಿ ಮುಂತಾದ ಜಾಹೀರಾತುಗಳು ಪತ್ರಿಕೆಗಳಲ್ಲಿ, ಜಾಲತಾಣಗಳಲ್ಲಿ ಪ್ರಕಟವಾಗುತ್ತವೆ. ಅಲ್ಲದೇ ನಮ್ಮ ಮೊಬೈಲ್‌ಗಳಲ್ಲೂ ಇಂತಹ ಸಂದೇಶ ಬರುತ್ತದೆ. ಕಷ್ಟವಿಲ್ಲದೆ ಹಣ ಸಂಪಾದನೆಯಾಗುತ್ತದೆ ಎಂದಾದಾಗ ಯಾರಿಗಾದರೂ ಮನಸ್ಸು ವಾಲುತ್ತದೆ. ಇತ್ತೀಚೆಗೆ ನಾವು ನೋಡುತ್ತಿರುವ ಇಂತಹ ಪ್ರಕರಣಗಳ ವಿವರವೂ ಪತ್ರಿಕೆಯಲ್ಲಿ ಪ್ರಕಟವಾಗುತ್ತವೆ. ಬ್ಯಾಂಕುಗಳು ತಮ್ಮಲ್ಲಿ ಇಡುವ ಠೇವಣಿಗಳಿಗೆ ಶೇಕಡಾ ಏಳೆಂಟರಷ್ಟು ಮಾತ್ರ ಬಡ್ಡಿ ನೀಡುತ್ತವೆ. ನಮ್ಮಲ್ಲಿ ಶೇಕಡಾ ಇಪ್ಪತ್ತಕ್ಕಿಂತ ಹೆಚ್ಚು ಬಡ್ಡಿ ಸಂಪಾದಿಸಬಹುದು. ಕೆಲವೇ ದಿನಗಳಲ್ಲಿ ನಿಮ್ಮ ಹಣ ದ್ವಿಗುಣವಾಗು ತ್ತದೆ ಎಂದಾದಾಗ, ಆರಂಭದಲ್ಲಿ ಸ್ವಲ್ಪ ಹಣ ಹೂಡಿದವರಿಗೆ, ಜಾಹೀರಾತಿನಂತೆ ಹೆಚ್ಚು ಹಣ ಅವರ ಖಾತೆಗೆ ಬರುತ್ತದೆ. ಇದರಿಂದ ಆಸೆ ಹೆಚ್ಚಾಗಿ, ಕೊನೆಗೆ ತಮ್ಮಲ್ಲಿರುವ ಎಲ್ಲಾ ಹಣವನ್ನೂ ಅದರಲ್ಲಿ ತೊಡಗಿಸುತ್ತಾರೆ. ನಿಮಗೆ ಇಷ್ಟು ಲಾಭ ಬಂದಿದೆ ಎಂದು ತಿಳಿಸಲಾಗುತ್ತದೆಯಾದರೂ, ಅದನ್ನು ಡ್ರಾ ಮಾಡುವುದಕ್ಕೆ ಅಂತಹ ಕೂಟದವರು ಬಿಡುವುದಿಲ್ಲ. ಅದನ್ನು ಡ್ರಾ ಮಾಡಬೇಕಾದರೆ ಮತ್ತಷ್ಟು ಹಣ ಕೇಳುತ್ತಾರೆ. ಇದರಲ್ಲಿ ಏನೋ ಮೋಸ ನಡೆಯುತ್ತಿದೆ ಎಂದು ಅನ್ನಿಸುವುದರೊಳಗೆ ಅವರ ಹಣ ಪೂರ್ತಿ ಖಾಲಿಯಾಗಿರುತ್ತದೆ.



ಎಲ್ಲದರ ಅರಿವಿರುವ ಜನರು ಈ ಆನ್‌ಲೈನ್ ಆಟಗಳಿಗೆ ಮರುಳಾಗಿ ಹಣ ಹಾಗೂ ಜೀವ ಕಳೆದುಕೊಳ್ಳುತ್ತಿರುವುದು ನೋವಿನ ಸಂಗತಿಯಾಗಿದೆ. ಒಬ್ಬನ ಜೀವ ಹೋದರೆ, ಅವನ ಜೀವ ಮಾತ್ರ ಹೋಯಿತು ಎಂದೇನಲ್ಲಾ. ಅವರನ್ನು ನಂಬಿರುವ ಹಲವರು ಬದುಕಿದ್ದೂ ಸತ್ತಂತೆಯೇ ಸರಿ. ಇದು ಸತ್ತವರ ಅರಿವಿಗೆ ಬರುವುದೇ?

ಮತ್ತೊಂದು ನಮೂನೆ ವಂಚನೆ; ನಿಮಗೆ ವಿದೇಶದಿಂದ ಉಡುಗೊರೆ ಬಂದಿದೆ. ಅದಕ್ಕೆ ತೆರಿಗೆ ಪಾವತಿಸಿ ಪಡೆಯಿರಿ ಎಂಬ ಸಂದೇಶ ಕಳಿಸಿ, ಕುತೂಹಲದಿಂದ ಹಣ ಕಕ್ಕುವಂತೆ ಮಾಡುತ್ತಾರೆ. ಕೊನೆಗೆ ಅದು ಮೋಸ ಎಂದು ಅರಿವಾಗುವುದರೊಳಗೆ ಸಾಕಷ್ಟು ಕಳೆದುಕೊಂಡಿರುತ್ತೇವೆ. ಇಂತಹ ಪ್ರಕರಣ ಪ್ರತಿದಿನ ವರದಿಯಾಗುತ್ತದೆ. ಇವೆಲ್ಲಾ ಗೊತ್ತಿದ್ದೂ ಜನ ಯಾಕೆ ಮೋಸ ಹೋಗುತ್ತಾರೆ ಎನ್ನಿಸುತ್ತದೆ. ಆದರೆ ಯಾವುದೋ ದುರ್ಬಲ ಸಮಯ ಎಷ್ಟೋ ಜನರನ್ನು ಆ ಕಡೆಗೆ ಸೆಳೆಯುತ್ತದೆ. ಅವರು ಮೋಸ ಹೋಗುತ್ತಾರೆ. ಕೊನೆಯ ಹಂತದಲ್ಲಿ ಪೊಲೀಸರ ಬಳಿ ಬರುತ್ತಾರೆ. ಪೊಲೀಸರೂ ಪ್ರಕರಣ ನಡೆದ ಕೂಡಲೇ ದೂರು ನೀಡಿದರೆ ಏನಾದರೂ ಮಾಡಬಹುದು ಎನ್ನುತ್ತಾರೆ. ಆದರೆ ತಾನು ಮೋಸಹೋದೆ ಎಂದು ಜನರಿಗೆ ಗೊತ್ತಾದರೆ, ನನ್ನ ಮರ್ಯಾದೆಗೆ ಕಡಿಮೆ ಎಂದು ಭಾವಿಸುವ ಅದೆಷ್ಟೋ ಜನ ದೂರು ನೀಡಲೂ ಹೋಗುವುದಿಲ್ಲ. ಹಾಗಾಗಿ ವರದಿಯಾಗುವ ಪ್ರಕರಣಗಳು ಕಡಿಮೆಯೇ ಆಗಿರುತ್ತದೆ. ಇದೊಂದು ನಿರಂತರ ಪ್ರಕ್ರಿಯೆಯಾಗಿದೆ. ನಿನ್ನೆ ಅವರು ಮೋಸ ಹೋದರು, ಇಂದು ಇವರು ಮೋಸ ಹೋದರು, ನಾಳೆ ಯಾರೋ? ಎಂದು ಲೆಕ್ಕ ಹಾಕುವಂತೆ ಆಗುತ್ತಿದೆ.

ಮೇಲ್ಕಂಡ ಪ್ರಕರಣಗಳು ಆನ್‌ಲೈನ್ ಆಟದ ಹುಚ್ಚು ಸಾಹಸದ ವಂಚನೆ ಕತೆಗಳು. ಕಳೆದ ಕೆಲ ವರ್ಷಗಳ ಹಿಂದೆ ಇಂತಹ ಆಟದ ಕೊಂಡಿ ಹರಡಿತ್ತು. ಅದಕ್ಕೆ ಹೆಚ್ಚಾಗಿ ಬಲಿಯಾದವರು ನಗರ ಪ್ರದೇಶದ ಮಕ್ಕಳು. ಅದರಲ್ಲೂ ತಂದೆ–ತಾಯಿಯರು ತಮ್ಮ ಕೆಲಸದಲ್ಲಿ ಹೆಚ್ಚಾಗಿ ತೊಡಗಿಕೊಂಡಿರುವಾಗ ಮಕ್ಕಳ ಚಲನ–ವಲನಗಳ ಬಗ್ಗೆ ಹೆಚ್ಚು ಗಮನ ಹರಿಸಲಾಗುವುದಿಲ್ಲ. ತಮ್ಮ ಮಕ್ಕಳನ್ನು ಪ್ರತಿಷ್ಠಿತ ಹಾಗೂ ದುಬಾರಿ ಎನ್ನಿಸಬಹುದಾದ ಶಾಲೆಗೆ ಸೇರಿಸಿದ್ದೇವೆ. ಅಲ್ಲಿ ಚೆನ್ನಾಗಿ ಓದುತ್ತಾರೆ ಎಂಬ ಭಾವನೆಯಲ್ಲಿ ಇರುತ್ತಾರೆ. ಮಕ್ಕಳು ಶಾಲೆಯಿಂದ ಬಂದು ಟ್ಯೂಷನ್‌ಗೆ ಹೋದರೆ ನಮ್ಮ ಜವಾಬ್ದಾರಿ ಇನ್ನೇನು ಇಲ್ಲಾ ಎಂದೇ ಭಾವಿಸುತ್ತಾರೆ. ಅಂತಹವರ ಮಕ್ಕಳು ಇಂತಹ ಚಟಕ್ಕೆ ಬಲಿಯಾಗುತ್ತಾರೆ. ಅವರಿಗೆ ತೊಂದರೆಯಾದ ನಂತರ ತಂದೆ–ತಾಯಿಯರು ತಾವು ಈ ಬಗ್ಗೆ ಮೊದಲೇ ಗಮನ ಹರಿಸಬೇಕಾಗಿತ್ತು ಎಂದು ದುಃಖಿಸುವುದನ್ನು ಕಾಣಬಹುದು. ಮಕ್ಕಳನ್ನು ಒಳ್ಳೆಯ ಶಾಲೆಗೆ ಸೇರಿಸಿದ ನಂತರ ನಮ್ಮ ಜವಾಬ್ದಾರಿ ಮುಗಿಯುವುದಿಲ್ಲ ಎಂಬುದನ್ನು ಮೊದಲು ಪೋಷಕರು ಅರಿಯಬೇಕಾಗಿದೆ.

ನಾನು ಗಮನಿಸಿದ ಇನ್ನೊಂದು ಪ್ರಕರಣದಲ್ಲಿ ತಂದೆತಾಯಿಗೆ ಒಬ್ಬನೇ ಮಗ, ಅವರು ಹೇಳಿದಂತೆ ಕೇಳುತ್ತಿರಲಿಲ್ಲ ಎಂದು ಒಂದು ಪ್ರಖ್ಯಾತವಾದ ವಸತಿ ಶಾಲೆಗೆ ಸೇರಿಸಿದರು. ಅಲ್ಲಿ ಹೆಚ್ಚಾಗಿ ಉತ್ತರ ಭಾರತದ ಮಕ್ಕಳು ಇದ್ದರು. ಅವರೊಡನೆ ಸ್ನೇಹವಾಯಿತು. ಅವರಾಗಲೇ ಧೂಮಪಾನ, ಮದ್ಯಪಾನ ಕರಗತ ಮಾಡಿಕೊಂಡವರು. ಈತ ಕ್ರಮೇಣ ಅವರ ಪ್ರಭಾವಕ್ಕೆ ಒಳಗಾದ. ಆ ವಸತಿ ಶಾಲೆಯ ಮುಖ್ಯಸ್ಥರಿಗೆ ದೂರು ನೀಡಿದರೂ ಪ್ರಯೋಜನವಾಗಲಿಲ್ಲ. ಅವನನ್ನು ಅಲ್ಲಿಂದ ಬಿಡಿಸಿ ಮತ್ತೊಂದು ಶಾಲೆಗೆ ಸೇರಿಸೋಣ ಎಂದರೆ ಮೊದಲು ಮಗ ಒಪ್ಪಲಿಲ್ಲ, ಹಠ ಮಾಡಿದ. ಅಲ್ಲದೆ ಇನ್ನೊಂದು ಇಂತಹ ಶಾಲೆಗೆ ಸೇರಿಸಿದರೆ ಅಲ್ಲಿ ಹೀಗಿರುವುದಿಲ್ಲ ಎಂದು ಹೇಳಲಾಗದೆ, ಪೋಷಕರು ಸಂಕಟಕ್ಕೆ ಸಿಲುಕಿದ್ದನ್ನು ಕಾಣುವಂತಾಯಿತು. ಇದಕ್ಕೆ ಏನನ್ನು ಪರಿಹಾರ ಎಂದು ಸೂಚಿಸುವುದು?

ಇಂದು ಒಬ್ಬರ ದುಡಿತ ಸಾಕಾಗುವುದಿಲ್ಲ ಎಂದು ತಂದೆ–ತಾಯಿ ಇಬ್ಬರೂ ಕೆಲಸಕ್ಕೆ ಹೋಗುತ್ತಾರೆ. ಹೆಚ್ಚು ಸಂಬಳ ನೀಡುವ ಸಂಸ್ಥೆಗಳು ಅಷ್ಟೇ ದುಡಿಸಿಕೊಳ್ಳುತ್ತವೆ. ಬೆಂಗಳೂರಿನಂತಹ ಮಹಾನಗರಗಳಲ್ಲಿ ಊರ ಹೊರಗಿರುವ ಸಂಸ್ಥೆಗಳಲ್ಲಿ ದುಡಿ ಯುವವರು ಪ್ರಯಾಣಕ್ಕೆ ಹೆಚ್ಚು ಸಮಯ ಮೀಸಲಿಡಬೇಕಾಗುತ್ತದೆ. ಕಾರಿನಲ್ಲಿ ಹೋಗುವವರು ಕಾರಿನಲ್ಲೂ ಲ್ಯಾಪ್‌ಟಾಪ್ ನೋಡುತ್ತಲೇ ಇರಬೇಕಾಗುತ್ತದೆ. ಮನೆಗೆ ಬಂದ ಮೇಲೂ ಮತ್ತಷ್ಟು ಕೆಲಸ ಎಂದು ಅದೇ ಲ್ಯಾಪ್‌ಟಾಪ್ ಮುಂದೆ ಕೂರುತ್ತಾರೆ. ತಂದೆ–ತಾಯಿಯರಲ್ಲಿ ಒಬ್ಬರು ಹೀಗಾದರೆ ಸರಿ. ಇನ್ನೊಬ್ಬರು ಮನೆ ಹಾಗೂ ಮಕ್ಕಳ ಬಗ್ಗೆ ಗಮನಹರಿಸಬಹುದು. ಒಂದು ವೇಳೆ ಇಬ್ಬರೂ ಇದೇ ರೀತಿ ಕಂಪ್ಯೂಟರ್ ಮುಂದೆ ಕುಳಿತರೆ, ಮಕ್ಕಳ ಬಗ್ಗೆ ಅವರು ಗಮನ ಹರಿಸಲು ಹೇಗೆ ಸಾಧ್ಯ. ಆಗ ಮಕ್ಕಳಿಗೆ ಜೊತೆಗಾರ ಎಂದರೆ ಮೊಬೈಲ್. ಅದರಲ್ಲಿ ಬರುವ ಕೆಲವು ಜಾಹಿರಾತಿನ ಅರ್ಥ ಗೊತ್ತಾಗದ ಮಕ್ಕಳು ಕುತೂಹಲಕ್ಕೆಂದು ಆರಂಭಿಸುವ ಕೆಲವು ಆಟಗಳು ಅವರ ಜೀವನವನ್ನು ಬಲಿ ತೆಗೆದುಕೊಂಡು ಬಿಡುತ್ತದೆ. ಇಂದು ಒಂದು ಮಗುವನ್ನು ಓದಿಸುವುದೇ ಕಷ್ಟ ಎಂದು ಭಾವಿಸಿ, ಎರಡನೇ ಮಗುವಿನ ಬಗ್ಗೆ ಯೋಚಿಸದ ತಂದೆ–ತಾಯಿ ಇರುವ ಒಂದು ಮಗುವೇ ದೂರವಾಗುವಂತಾದರೆ, ತಮ್ಮ ಜೀವನ, ತಮ್ಮ ಸಂಪಾದನೆ ಏತಕ್ಕೆ ಎಂದು ಭಾವಿಸುವಂತಾಗುತ್ತದೆ. ಮುಂದಿನ ಜೀವನ ನೀರಸವಾಗುತ್ತದೆ.

ಇದು ಏನೂ ಅರಿಯದ ಮಕ್ಕಳ ಕಥೆಯಾದರೆ, ಎಲ್ಲದರ ಅರಿವಿರುವ ಜನರು ಈ ಆನ್‌ಲೈನ್ ಆಟಗಳಿಗೆ ಮರುಳಾಗಿ ಹಣ ಹಾಗೂ ಜೀವ ಕಳೆದುಕೊಳ್ಳುತ್ತಿರುವುದು ನೋವಿನ ಸಂಗತಿಯಾಗಿದೆ. ಒಬ್ಬನ ಜೀವ ಹೋದರೆ, ಅವನ ಜೀವ ಮಾತ್ರ ಹೋಯಿತು ಎಂದೇನಲ್ಲಾ. ಅವರನ್ನು ನಂಬಿರುವ ಹಲವರು ಬದುಕಿದ್ದೂ ಸತ್ತಂತೆಯೇ ಸರಿ. ಇದು ಸತ್ತವರ ಅರಿವಿಗೆ ಬರುವುದೇ?

ಇದಕ್ಕೆಲ್ಲಾ ನಾವು ವಾಸ್ತವಿಕತೆಯಿಂದ ವಿಮುಖವಾಗುತ್ತಿರುವುದು ಕಾರಣ ಎನ್ನಿಸುತ್ತದೆ. ನಮಗೆ, ನಮ್ಮ ಜೀವನಕ್ಕೆ ಯಾವಾಗಲೂ ಒಂದು ಮಿತಿ ಇರುತ್ತದೆ. ನಿಜವಾಗಿಯೂ ಅಂತಹ ಮಿತಿ ಇರುವುದು ಒಳ್ಳೆಯದೇ. ಅದು ನಮ್ಮ ಅರಿವಿಗೆ ಬಂದರೆ, ನಾವು ನಮ್ಮ ಆದಾಯ ಹಾಗೂ ಅಂತಸ್ತಿಗೆ ತಕ್ಕಂತಹ ಜೀವನ ಕಂಡುಕೊಳ್ಳಬಹುದು. ಆದರೆ ನಮ್ಮ ಕಣ್ಣು ಯಾವಾಗಲೂ ನಮಗಿಂತ ಮೇಲ್ವರ್ಗದವರ ಕಡೆಗೇ ಇರುತ್ತದೆ. ಅವರು ಹಾಗಿದ್ದಾರೆ, ಹೀಗಿದ್ದಾರೆ, ಅವರಲ್ಲಿ ದುಬಾರಿಯಾದ ವಸ್ತುಗಳಿವೆ, ನಮ್ಮಲ್ಲಿ ಇಲ್ಲವಲ್ಲಾ ಎಂಬ ಕೊರಗು, ಹೇಗಾದರೂ ಹಣ ಸಂಪಾದಿಸಬೇಕು, ನಾನೂ ಅವರಂತಾಗಬೇಕು ಎಂಬ ಆಸೆ ಹುಟ್ಟಿಸುತ್ತದೆ. ಅಂತಹವರೇ ಇಂತಹ ಆನ್‌ಲೈನ್ ಆಟಗಳ ಕಡೆಗೆ ಗಮನ ಹರಿಸುತ್ತಾರೆ. ಆದರೆ ಹಾಗೆ ಕಂಡದ್ದು ವಾಸ್ತವವಲ್ಲ ಎಂದು ತಿಳಿಯುವುದರಲ್ಲಿ ಸಮಯ ಮೀರಿರುತ್ತದೆ. ಜೀವನ ಕವಲು ಹಾದಿಗೆ ಬಂದಿರುತ್ತದೆ. ಪರಿಹಾರ ಕಾಣಿಸುವುದಿಲ್ಲ. ಕೊನೆಗೆ ಬೆಲೆ ಇಲ್ಲದಂತಾಗುವುದು ಜೀವ ಮಾತ್ರ.

ಅನೇಕರು ವಾದಿಸುವುದಿದೆ. ಇದೆಲ್ಲಾ ಸರ್ಕಾರಗಳಿಗೆ ಏಕೆ ಗೊತ್ತಾಗುವುದಿಲ್ಲ. ಇಂತಹುದನ್ನು ಏಕೆ ಬ್ಯಾನ್ ಮಾಡಬಾರದು ಎಂದೆಲ್ಲಾ ಕೇಳುವವ ರಿದ್ದಾರೆ. ಆದರೆ ವಿವೇಕ ಕಳೆದುಕೊಂಡವರು ಯಾವುದಾದರೂ ಮೋಸದ ಜಾಲಕ್ಕೆ ಸಿಲುಕುತ್ತಲೇ ಇರುತ್ತಾರೆ. ಪರಿಹಾರ ಎಂದರೆ ನಾವು ವಾಸ್ತವ ಅರಿತು ಜೀವನ ಮಾಡಬೇಕು. ಮುಖ್ಯವಾಗಿ ನನ್ನದಲ್ಲದ್ದು ನನಗೆ ಬೇಡ ಎಂಬ ತಿಳುವಳಿಕೆ ಬರಬೇಕು. ಯಾರೂ ಸುಮ್ಮನೇ ನಮಗೆ ಹೆಚ್ಚಿನ ಹಣ ಅಥವಾ ಯಾವುದೇ ಸೌಲಭ್ಯ ನೀಡುವುದಿಲ್ಲ. ಹಾಗೆ ಬರುವ ಜಾಹೀರಾತನ್ನು ನಿರ್ಲಕ್ಷಿಸಬೇಕು. ಹಣ ಹೆಚ್ಚಾಗದಿದ್ದರೂ ಪರವಾಗಿಲ್ಲ, ನಾನು ದುಡಿದ ಹಣ ನನ್ನದಾದರೆ ಸಾಕು ಎಂಬ ಮನೋಭಾವ ಬೆಳೆಯಬೇಕು. ಆಸೆಗಳು ನಮ್ಮ ಜೀವನಕ್ಕೇ ತೊಂದರೆ ನೀಡಬಾರದು.

ಸಿಡ್ನಿ ಟೆಸ್ಟ್: ಭಾರತ 185ಕ್ಕೆ ಆಲೌಟ್



ಸಿಡ್ನಿ, ಜ.3–ಬಾರ್ಡರ್–ಗವಾಸ್ಕರ್ ಟ್ರೋಫಿ ಟೆಸ್ಟ್ ಸರಣಿಯ ಅಂತಿಮ ಪಂದ್ಯದ ಮೊದಲ ದಿನ ಭಾರತ 185 ರನ್‌ಗಳಿಗೆ ಆಲೌಟ್ ಆಗಿದೆ. ಬಳಿಕ ಮೊದಲ ಇನ್ನಿಂಗ್ಸ್ ಆರಂಭಿಸಿರುವ ಆಸ್ಟ್ರೇಲಿಯಾ ದಿನದ ಅಂತ್ಯಕ್ಕೆ 3 ಓವರ್‌ಗಳಲ್ಲಿ 9 ರನ್‌ಗೆ 1 ವಿಕೆಟ್ ಕಳೆದುಕೊಂಡಿದೆ.

ಸಿಡ್ನಿ ಅಂತಾರಾಷ್ಟ್ರೀಯ ಕ್ರೀಡಾಂಗಣದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಭಾರತ 72.2 ಓವರ್‌ಗಳಲ್ಲಿ 185 ರನ್‌ಗಳಿಗೆ ಆಲೌಟ್ ಆಯಿತು.

ಅಗ್ರ ಬ್ಯಾಟರ್‌ಗಳ ವೈಫಲ್ಯ: ಅಂತಿಮ ಪಂದ್ಯದಲ್ಲೂ ಭಾರತದ ಅಗ್ರ ಕ್ರಮಾಂಕದ ಬ್ಯಾಟರ್‌ಗಳು ಕೈಕೊಟ್ಟರು. ಯಶಸ್ವಿ ಜೈಸ್ವಾಲ್, ಕೆ.ಎಲ್.ರಾಹುಲ್, ಶುಭಮನ್ ಗಿಲ್, ವಿರಾಟ್ ಕೊಹ್ಲಿ ಅಲ್ಪಮೊತ್ತಕ್ಕೆ ವಿಕೆಟ್ ಒಪ್ಪಿಸಿ ಪೆವಿಲಿಯನ್ ಪರೇಡ್ ನಡೆಸಿದರು. ಮಧ್ಯಮ ಕ್ರಮಾಂಕದಲ್ಲಿ ರಿಷಬ್ ಪಂತ್, ರವೀಂದ್ರ ಜಡೇಜಾ ಅವರಿಂದ 48 ರನ್‌ಗಳ ಸಣ್ಣ ಜೊತೆಯಾಟ ಬಂದರೂ ಭಾರತ 200 ರನ್‌ಗಳ ಗಡಿ ದಾಟುವಲ್ಲಿ ವಿಫಲವಾಯಿತು.

ಭಾರತದ ಪರ ರಿಷಬ್ ಪಂತ್ 40, ರವೀಂದ್ರ ಜಡೇಜಾ 26, ಜಸ್ಪ್ರೀತ್ ಬುಮ್ರಾ 22, ಶುಭಮನ್ ಗಿಲ್ 20, ವಿರಾಟ್ ಕೊಹ್ಲಿ 17, ವಾಷಿಂಗ್ಟನ್ ಸುಂದರ್ 14, ಯಶಸ್ವಿ ಜೈಸ್ವಾಲ್ 10, ಕೆ.ಎಲ್ ರಾಹುಲ್ 4, ಪ್ರಸಿದ್ಧ್ ಕೃಷ್ಣ 3, ಸಿರಾಜ್ ಅಜೇಯ 3 ರನ್ ಗಳಿಸಿದರೆ ನಿತೀಶ್ ರೆಡ್ಡಿ ಶೂನ್ಯ ಸುತ್ತಿದರು. ಆಸೀಸ್ ಪರ ಸ್ಕಾಟ್ ಬೋಲೆಂಡ್ 4, ಮಿಚೆಲ್ ಸ್ಟಾರ್ಕ್ 3, ನಾಯಕ ಪ್ಯಾಟ್ ಕಮಿನ್ಸ್ 2, ಸ್ಪಿನ್ನರ್ ನಥಾನ್ ಲಿಯೋನ್ 1 ವಿಕೆಟ್ ಪಡೆದರು.

ಬಳಿಕ ಮೊದಲ ಇನ್ನಿಂಗ್ಸ್ ಆರಂಭಿಸಿದ ಆಸೀಸ್ ಪರ ಉಸ್ಮಾನ್ ಖವಾಜ 2 ರನ್ ಗಳಿಸಿ, ದಿನಾಂತ್ಯದ ಕೊನೆ ಎಸೆತದಲ್ಲಿ ಜಸ್ಪ್ರೀತ್ ಬುಮ್ರಾಗೆ ವಿಕೆಟ್ ಒಪ್ಪಿಸಿದರು. ಇನ್ನೊ ಸ್ಯಾಮ್ ಕಾನ್‌ಸ್ಟಾಸ್ 7 ರನ್ ಗಳಿಸಿದ್ದು, 2ನೇ ದಿನಕ್ಕೆ ಕ್ರೀಸ್ ಕಾಯ್ದಿರಿಸಿದ್ದಾರೆ.

ಹೆಚ್.ಎಸ್.ಮಹದೇವಪ್ರಸಾದ್ ಪುಣ್ಯ ಸ್ಮರಣೆ



ಮೈಸೂರಿನ ಕುವೆಂಪುನಗರದ ನಾಗರಿಕ ಸಮಿತಿ ವತಿಯಿಂದ ಮಾಜಿ ಸಚಿವ ದಿವಂಗತ ಎಚ್.ಎಸ್.ಮಹದೇವಪ್ರಸಾದ್ ಅವರ ಎಂಟನೇ ಪುಣ್ಯ ಸ್ಮರಣೆ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಕಾರ್ಯಕ್ರಮವನ್ನು ಇತಿಹಾಸ ತಜ್ಞ ಪಿ.ವಿ.ನಂಜರಾಜ ಅರಸ್ ಉದ್ಘಾಟಿಸಿದರು. ಸಂಘದ ಅಧ್ಯಕ್ಷ ವಿಕ್ರಾಂತ್ ಪಿ.ದೇವೇಗೌಡ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಕೇಂದ್ರ ಕನ್ನಡ ಚಳುವಳಿಗಾರ ಸಂಘದ ಅಧ್ಯಕ್ಷ ಮೂಗೂರು ನಂಜುಂಡಸ್ವಾಮಿ, ಶಿವಶಂಕರ್, ರಾಜ್ಯ ಒಕ್ಕಲಿಗರ ಸಂಘದ ಮಾಜಿ ನಿರ್ದೇಶಕ ಪಿ. ವೆಂಕಟೇಶ್, ಮೈಸೂರು ಒಕ್ಕಲಿಗರ ಸಂಘದ ನಿರ್ದೇಶಕ ಗಿರೀಶ್, ಅಂಬೇಡ್ಕರ್ ಶಾಲೆಯ ಅಧ್ಯಕ್ಷ ನಾಗರಾಜ್, ಬೂಕನಕೆರೆ ವಿಜಯೇಂದ್ರ, ಕಾರ್ಪೊರೇಷನ್ ಪಾಪಣ್ಣ, ಕೆ ಬ್ಲಾಕ್ ಸಿದ್ದರಾಮಣ್ಣ, ನಾಗಣ್ಣ, ಸೊಸೈಟಿ ರಾಜು, ಕಾಳಬೋರಪ್ಪ, ಮಾದಪ್ಪ, ಗಜಪ್ಪನ ಮಾದೇವಣ್ಣ, ತೇಜ್ ಪಾಲ್, ಲಿಂಗೇಗೌಡ, ತೊಣಚಿ ಕೊಪ್ಪಲ್ ವಿಕ್ರಾಂತ್ ರಾಜಣ್ಣ, ಗುಂಡ್ಲುಪೇಟೆ ವಿಕ್ರಾಂತ್ ಕೆ.ವಿ.ಬಸವಣ್ಣ, ಮಾದೇವ್, ಯಡಿಯೂರಪ್ಪ, ಗಜಪ್ಪನ ಕೃಷ್ಣ ಮುಂತಾದವರಿದ್ದರು.

ಬಸ್ ಪ್ರಯಾಣ ದರ ಏರಿಕೆ ಶೇ.5ರಷ್ಟು ಕಡಿತಕ್ಕೆ ಹೋಟೆಲ್ ಮಾಲೀಕರ ಸಂಘ ಆಗ್ರಹ

ಮೈಸೂರು, ಜ.3– ಕೆಎಸ್‌ಆರ್‌ಟಿಸಿ ಬಸ್ ಪ್ರಯಾಣ ದರ ಏರಿಕೆಯನ್ನು ರಾಜ್ಯ ಸರ್ಕಾರ ಪರಿಷ್ಕರಿಸಿ, ಶೇ.5ರಷ್ಟು ಮಾತ್ರ ಹೆಚ್ಚಿಸಬೇಕೆಂದು ಮೈಸೂರು ಹೋಟೆಲ್ ಮಾಲೀಕರ ಸಂಘ ಆಗ್ರಹಿಸಿದೆ.

ಬಸ್ ಪ್ರಯಾಣ ದರವನ್ನು ಭಾರೀ ಪ್ರಮಾಣದಲ್ಲಿ ಏರಿಕೆ ಮಾಡಿದರೆ ಬಡ ಹಾಗೂ ಮಧ್ಯಮ ವರ್ಗದವರಿಗೆ ಹೊರೆ ಹೆಚ್ಚಾಗಲಿದೆ. ಈಗಾಗಲೇ ದಿನಸಿ ಪದಾರ್ಥಗಳು, ಎಣ್ಣೆ, ಕಾಳುಗಳು, ಎಲ್ಲಾ ಆಹಾರ ಪದಾರ್ಥಗಳು ತುಟ್ಟಿಯಾಗಿವೆ. ಡೀಸೆಲ್, ಪೆಟ್ರೋಲ್, ನೋಂದಣಿ ಶುಲ್ಕ ಮತ್ತು ಮುದ್ರಾಂಕ ಶುಲ್ಕ, ಮತ್ತಿತರ ಸೇವೆಗಳ ಶುಲ್ಕಗಳನ್ನು ಈಗಾಗಲೇ ಹೆಚ್ಚಿಸಲಾಗಿದೆ. ಈ ಪರಿಸ್ಥಿತಿಯಲ್ಲಿ ಸಾರಿಗೆ ಬಸ್ ಪ್ರಯಾಣ ದರ ಹೆಚ್ಚಾದರೆ ದಿನನಿತ್ಯದ ಕೆಲಸ ಕಾರ್ಯಗಳಿಗೆ ಹೋಗಿ ಬರುವ ಜನರಿಗೆ ಜೀವನ ನಿರ್ವಹಣೆ ದುಬಾರಿಯಾಗುತ್ತದೆ.

ಈ ಬಗ್ಗೆ ಸಾರಿಗೆ ಸಚಿವರು ಪ್ರತಿಕ್ರಿಯಿಸಿ, ಕೆಲವು ರಾಜ್ಯಗಳಲ್ಲಿ ಕರ್ನಾಟಕ ಸಾರಿಗೆಗಿಂತ ಹೆಚ್ಚು ದರವಿದೆ ಎಂದು ಸರ್ಕಾರದ ನಿರ್ಧಾರವನ್ನು ಸಮರ್ಥನೆ ಮಾಡಿಕೊಂಡಿದ್ದಾರೆ. ಆದರೆ ಕೆಲವು ರಾಜ್ಯಗಳಲ್ಲಿ ಸರ್ಕಾರಿ ಸಾರಿಗೆ ಪ್ರಯಾಣ ದರ ಕಡಿಮೆ ಇರುವುದನ್ನೂ ಪರಿಗಣಿಸಬೇಕಾಗಿದೆ. ಕೆಲವು ವೋಲ್ವೋ, ಐರಾವತ, ಹವಾ ನಿಯಂತ್ರಿತ ಬಸ್ ದರಗಳನ್ನು ಆಗಾಗ ಹೆಚ್ಚಿಸಿಕೊಂಡೇ ಬರಲಾಗಿದೆ. ಹಬ್ಬ, ಜಾತ್ರೆ ಸೇರಿದಂತೆ ವಿಶೇಷ ದಿನಗಳು, ದೀರ್ಘ ರಜೆ ಅವಧಿಯಲ್ಲೂ ದರ ಹೆಚ್ಚಿಸುವ ಬಗ್ಗೆ ತಿಳಿದಿದೆ. ರಾಜ್ಯ ಸರ್ಕಾರ ಶೇ.15ರಷ್ಟು ಪ್ರಯಾಣ ದರ ಏರಿಕೆ ನಿರ್ಧಾರವನ್ನು ಕೈಬಿಟ್ಟು, ಶೇ.5ಕ್ಕೆ ಮಿತಗೊಳಿಸಿದರೆ ಪ್ರಯಾಣಿಕರು ಹಾಗೂ ಸಂಸ್ಥೆಗೂ ಅನುಕೂಲವಾಗಲಿದೆ ಎಂದು ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಮತಾ ಆಪ್ತನ ಗುಂಡಿಟ್ಟು ಹತ್ಯೆ

ಕೋಲ್ಕತ್ತಾ, ಜ.3– ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿಯವರ ಆಪ್ತ ಹಾಗೂ ತೃಣಮೂಲ ಕಾಂಗ್ರೆಸ್(ಟಿಎಂಸಿ) ಕೌನ್ಸಿಲರನ್ನು ಇಬ್ಬರು ಅಪರಿಚಿತ ವ್ಯಕ್ತಿಗಳು ಗುಂಡಿಕ್ಕಿ ಹತ್ಯೆ ಮಾಡಿದ್ದಾರೆ.

ಮಮತಾ ಬ್ಯಾನರ್ಜಿ ಆಪ್ತ ದುಲಾಲ್ ಸರ್ಕಾರ್, ಜಲ್ಜಾಲಿಯಾ ಮೋರ್ ಪ್ರದೇಶದಲ್ಲಿ ಅಂಗಡಿಯೊಂದರೊಳಗೆ ನುಗ್ಗುತ್ತಿರುವುದು ಹಾಗು ಅವರನ್ನು ಹಂತಕರು ಬೆನ್ನತ್ತಿ ಗುಂಡು ಹಾರಿಸಿರುವುದು ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದೆ.

ಬ್ಯಾನರ್ಜಿ, ಬಾಬ್ಲಾ ಎಂದು ಜನಪ್ರಿಯರಾಗಿದ್ದ ಸರ್ಕಾರ್ ಅವರ ಹತ್ಯೆಯಿಂದ ನಾನು ತುಂಬಾ ಆಘಾತಕ್ಕೊಳಗಾಗಿದ್ದೇನೆ. ಕುಟುಂಬಕ್ಕೆ ಸಂತಾಪವನ್ನು ಹೇಗೆ ತಿಳಿಸಬೇಕೆಂದು ನನಗೆ ತಿಳಿದಿಲ್ಲ. ದೇವರು ಸರ್ಕಾರ್ ಚೈತಾಳಿಗೆ ಬದುಕುಳಿಯಲು ಮತ್ತು ಯುದ್ಧದಲ್ಲಿ ಹೋರಾಡಲು ಶಕ್ತಿಯನ್ನು ನೀಡಲಿ ಎಂದು ಅವರು ಹೇಳಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

'ಸಿದ್ದರಾಮಯ್ಯ ಆರೋಗ್ಯ ಮಾರ್ಗ' ನಾಮಕರಣ ವಿರೋಧಿಸಿ

ಬಿಜೆಪಿ ಕಾರ್ಯಕರ್ತರ ಪ್ರತಿಭಟನೆ; ಬಂಧನ, ಬಿಡುಗಡೆ





'ಸಿದ್ದರಾಮಯ್ಯ ಆರೋಗ್ಯ ಮಾರ್ಗ' ಎಂದು ಮರು ನಾಮಕರಣ ಮಾಡಲು ಮುಂದಾಗಿರುವ ಪಾಲಿಕೆ ಕ್ರಮ ಖಂಡಿಸಿ ಮೈಸೂರಿನ ಚೆಲುವಾಂಬ ಪಾರ್ಕ್‌ನ ಸ್ವಾಮಿ ವಿವೇಕಾನಂದ ಪ್ರತಿಮೆ ಬಳಿ ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರು, ಜ. 3(ಆರ್‌ಕೆ)– ಮೈಸೂರಿನ ಕೆಆರ್‌ಎಸ್ ರಸ್ತೆಗೆ 'ಸಿದ್ದರಾಮಯ್ಯ ಆರೋಗ್ಯ ಮಾರ್ಗ' ಎಂದು ಮರು ನಾಮಕರಣ ಮಾಡಲು ಮುಂದಾಗಿರುವ ಪಾಲಿಕೆ ಕ್ರಮ ಖಂಡಿಸಿ ಮೈಸೂರಿನ ಚೆಲುವಾಂಬ ಪಾರ್ಕಿನ ಸ್ವಾಮಿ ವಿವೇಕಾನಂದ ಪ್ರತಿಮೆ ಬಳಿ ಬಿಜೆಪಿ ಕಾರ್ಯಕರ್ತರು ಇಂದು ಭಾರೀ ಪ್ರತಿಭಟನೆ ನಡೆಸಿದರು.

ನಗರ ಬಿಜೆಪಿ ಅಧ್ಯಕ್ಷ ಎಲ್. ನಾಗೇಂದ್ರ, ಜಿಲ್ಲಾ ಘಟಕದ ಅಧ್ಯಕ್ಷ ಎಲ್.ಆರ್. ಮಹದೇವಸ್ವಾಮಿ, ಮಾಜಿ ಸಂಸದ ಪ್ರತಾಪ್ ಸಿಂಹ ನೇತೃತ್ವದಲ್ಲಿ ತಲೆಗೆ ಕಪ್ಪು ಪಟ್ಟಿ ಕಟ್ಟಿಕೊಂಡು ಪ್ರತಿಭಟನೆ ನಡೆಸಿದ ಬಿಜೆಪಿ ಕಾರ್ಯಕರ್ತರು, ಈ ಹಿಂದೆಯೇ ನಾಮಕರಣ ಮಾಡಿದ್ದ 'ಪ್ರಿನ್ಸೆಸ್ ರಸ್ತೆ'ಗೆ 'ಸಿದ್ದರಾಮಯ್ಯ ಆರೋಗ್ಯ ಮಾರ್ಗ' ಎಂದು ನಾಮಕರಣ ಮಾಡ ಬಾರದು ಎಂದು ಒತ್ತಾಯಿಸಿದರು.

ಬೆಳಗ್ಗೆ 10 ಗಂಟೆಗೆ ಆರಂಭವಾದ ಪ್ರತಿಭಟನಾ ಧರಣಿಯಲ್ಲಿ ಈ ಹಿಂದೆ ಟಿಬಿ ಖಾಯಿಲೆಯಿಂದ ರಾಜ ಮನೆತನದ ಇಬ್ಬರು ಸಾವನ್ನಪ್ಪಿದ ಹಿನ್ನೆಲೆಯಲ್ಲಿ ರಾಜಕುಮಾರಿ ಕೃಷ್ಣಾಜಮ್ಮಣಿ ಅವರು ಎತ್ತರದಲ್ಲಿ ವಿಶಾಲವಾಗಿದ್ದು, ಪ್ರಶಸ್ತವಾಗಿದ್ದ ಕುಂಬಾರಕೊಪ್ಪಲಿಗೆ ಹೊಂದಿಕೊಂಡಂತಿದ್ದ ಜಾಗದಲ್ಲಿ ಟಿಬಿ ಆಸ್ಪತ್ರೆಯನ್ನು ನಿರ್ಮಿಸಿ ಪ್ರಜೆಗಳಿಗೆ ಉಚಿತ ಚಿಕಿತ್ಸೆ ನೀಡಿ ಪ್ರಾಣ ರಕ್ಷಿಸುತ್ತಿದ್ದರು.

ಅದೇ ಕಾರಣಕ್ಕಾಗಿ ಕೆಆರ್‌ಎಸ್ ರಸ್ತೆಗೆ 'ಪ್ರಿನ್ಸೆಸ್ ರಸ್ತೆ' ಎಂದು ನಾಮಕರಣ ಮಾಡಲಾಗಿತ್ತು. ಯಾವುದೇ ಕಾರಣಕ್ಕೂ 'ಪ್ರಿನ್ಸೆಸ್ ರಸ್ತೆ'ಗೆ ಸಿದ್ದರಾಮಯ್ಯ ಆರೋಗ್ಯ ಮಾರ್ಗ ಎಂದು ಮರು ನಾಮಕರಣ ಮಾಡಬಾರದು. ಮೈಸೂರು ಮಹಾನಗರಪಾಲಿಕೆ ಅಧಿಕಾರಿಗಳು ತಕ್ಷಣವೇ 'ಪ್ರಿನ್ಸೆಸ್ ರಸ್ತೆ' ಫಲಕಗಳನ್ನು ಅಳವಡಿಸಿ, ಜನರಿಗೆ ಚಿರಪರಿಚಿತವಾಗುವಂತೆ ಮಾಡಬೇಕು ಎಂದು ಧರಣಿ ನಿರತ ಬಿಜೆಪಿ ಕಾರ್ಯಕರ್ತರು ಒತ್ತಾಯಿಸಿದರು.

ಪಾಲಿಕೆ ಅಧಿಕಾರಿಗಳು, ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದ ಪ್ರತಿಭಟನಾಕಾರರು, ಸಿದ್ದರಾಮಯ್ಯ ಆರೋಗ್ಯ ಮಾರ್ಗ ಮರು ನಾಮಕರಣ ಮಾಡಲು ಹೊರಡಿಸಿರುವ ನೋಟಿಸ್ ಅನ್ನು ಪಾಲಿಕೆ ಅಧಿಕಾರಿಗಳು ವಾಪಸ್ ಪಡೆಯಬೇಕು, ಇಲ್ಲದಿದ್ದಲ್ಲಿ ರಾಜ್ಯದಾದ್ಯಂತ ಬಿಜೆಪಿ ಉಗ್ರ ರೂಪದ ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ಮುಡಾ ಮಾಜಿ ಅಧ್ಯಕ್ಷ ಯಶಸ್ವಿ ಎಸ್. ಸೋಮಶೇಖರ್, ಮಾಜಿ ಮೇಯರ್ ಸಂದೇಶ್‌ಸ್ವಾಮಿ, ಮಾಜಿ ಕಾರ್ಪೋರೇಟರ್ ಶ್ರೀರಾಂ ಪಡುವಾರಹಳ್ಳಿ, ಮೃಗಾಲಯ ಪ್ರಾಧಿಕಾರದ ಮಾಜಿ ಅಧ್ಯಕ್ಷ ಎಂ.ಶಿವಕುಮಾರ್, ಮುಖಂಡರಾದ ಫಣೀಶ್, ಡಾ. ಅನಿಲ್ ಥಾಮಸ್, ಗಿರಿಧರ್, ಬಿ.ಎಂ. ರಘು, ಕೇಬಲ್ ಮಹೇಶ, ಕಿರಣ್ ಜಯರಾಮೇಗೌಡ, ಬಾಲಕೃಷ್ಣ, ಪಾಪಣ್ಣ, ರೇಣುಕಾರಾಜು, ದಿನೇಶ್‌ಗೌಡ ಸೇರಿದಂತೆ ಹಲವರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ನಂತರ ಪಿಕೆಟಿಬಿ ಆಸ್ಪತ್ರೆವರೆಗೆ ಮೌನ ಮೆರವಣಿಗೆ ನಡೆಸಲು ಪ್ರತಿಭಟನಾಕಾರರು ಪ್ರಯತ್ನಿಸಿದರಾದರೂ, ಪೂರ್ವಾನುಮತಿ ಪಡೆದಿಲ್ಲ, ವಾಹನ ಸಂಚಾರಕ್ಕೆ ಅಡಚಣೆಯಾಗುತ್ತದೆ. ಆದ್ದರಿಂದ ಮೆರವಣಿಗೆಗೆ ಅವಕಾಶ ನೀಡುವುದಿಲ್ಲ ಎಂದು ಪೊಲೀಸರು ತಿಳಿಸಿದಾಗ ಆಕ್ರೋಶಗೊಂಡ ಬಿಜೆಪಿ ಕಾರ್ಯಕರ್ತರು ವಾಗ್ವಾದಕ್ಕಿಳಿದರು.

ಈ ಸಂದರ್ಭ ಮಾತಿನ ಚಕಮಕಿಯೂ ನಡೆಯಿತು. ಪಟ್ಟು ಬಿಡದೆ ಕಾಲ್ನಡಿಗೆಯಲ್ಲಿ ಮೆರವಣಿಗೆ ಮಾಡುತ್ತೇವೆಂದು ಹೇಳುತ್ತಿದ್ದಂತೆಯೇ ಪೊಲೀಸರು ಬಿಜೆಪಿ ಮುಖಂಡರನ್ನು ಮುಂಜಾಗ್ರತಾ ಕ್ರಮವಾಗಿ ಬಂಧಿಸಿ ಸಿಎಆರ್ ಮೈದಾನಕ್ಕೆ ಕರೆದೊಯ್ದು ಮಧ್ಯಾಹ್ನ ಬಿಡುಗಡೆ ಮಾಡಿದರು. ಡಿಸಿಪಿ ಎಂ. ಮುತ್ತುರಾಜು, ಎಸಿಪಿ ಎಸ್.ಬಿ. ಗಜೇಂದ್ರಪ್ರಸಾದ್ ನೇತೃತ್ವದಲ್ಲಿ ಹೆಚ್ಚುವರಿ ಪೊಲೀಸರನ್ನು ನಿಯೋಜಿಸಿ, ಭಾರೀ ಭದ್ರತೆ ಮಾಡಲಾಗಿತ್ತು.

ಮಹಾರಾಜರ ಕಾಲದಲ್ಲಿ ಇಟ್ಟ ಹೆಸರನ್ನು ಬದಲಿಸಬಾರದು

ಮಾಜಿ ಸಂಸದ ಪ್ರತಾಪ್ ಸಿಂಹ ಆಗ್ರಹ

ಮೈಸೂರು, ಜ. 3(ಆರ್‌ಕೆ)– ಮಹಾರಾಜರ ಕಾಲದಲ್ಲಿ ಇಟ್ಟಿರುವ 'ಪ್ರಿನ್ಸೆಸ್ ರಸ್ತೆ' ಹೆಸರನ್ನು ಬದಲಾಯಿಸಬಾರದು ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ಇಂದಿಲ್ಲಿ ಒತ್ತಾಯಿಸಿದ್ದಾರೆ. 'ಪ್ರಿನ್ಸೆಸ್ ರಸ್ತೆ' ಬದಲಾಯಿಸಿ 'ಸಿದ್ದರಾಮಯ್ಯ ಆರೋಗ್ಯ ಮಾರ್ಗ' ಎಂದು ಮರುನಾಮಕರಣ ಮಾಡಬಾರದೆಂದು ಒತ್ತಾಯಿಸಿ ಚೆಲುವಾಂಬ ಪಾರ್ಕ್ ಬಳಿ ಬಿಜೆಪಿ ಕಾರ್ಯಕರ್ತರು ನಡೆಸಿದ ಪ್ರತಿಭಟನೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಮೈಸೂರಿಗೆ ರಾಜ ಮಹಾರಾಜರ ಕೊಡುಗೆ ಬಹಳಷ್ಟಿದೆ. 'ಪ್ರಿನ್ಸೆಸ್ ರಸ್ತೆ' ಎಂಬುದಕ್ಕೆ ಹಲವು ಪುರಾವೆಗಳಿರುವುದನ್ನು ರಾಜವಂಶಸ್ಥರಾದ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಪಾಲಿಕೆ ಆಯುಕ್ತರಿಗೆ ದಾಖಲೆ ಸಹಿತ ನೀಡಿದ್ದಾರೆ ಎಂದರು.

ರಾಜ್ಯದಲ್ಲಿ ಭಂಡ ಸರ್ಕಾರ ಇದೆ. ಮುಡಾ ನಿವೇಶನ ಹಂಚಿಕೆ ಹಗರಣದಲ್ಲಿ ಆರೋಪಿಯಾಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಹೆಸರನ್ನು ರಸ್ತೆಗೆ ಇಟ್ಟರೆ ಸಾರ್ವಜನಿಕರಿಗೆ ಕೆಟ್ಟ ಸಂದೇಶ ರವಾನೆಯಾಗಲಿದೆ ಎಂದು ಅವರು ತಿಳಿಸಿದರು. ಗುತ್ತಿಗೆದಾರ ಸಚಿನ್ ಆತ್ಮಹತ್ಯೆ ಪ್ರಕರಣ ಸಂಬಂಧ ಸಚಿವ ಪ್ರಿಯಾಂಕ್ ಖರ್ಗೆ ಸ್ವೀಚ್ ಅಂಡ್ ರನ್ ಮಾಡುತ್ತಿದ್ದಾರೆ. ಈ ಹಿಂದೆ ಪಿಎಸ್‌ಐ ನೇಮಕ ಹಗರಣದ ದಾಖಲೆಗಳಿವೆ ಎಂದಿದ್ರು, ಬಿಟ್ ಕಾಯಿನ್ ಹಗರಣ ಅನ್ನುತ್ತಿದ್ದರು. ಆದರೆ, ಯಾವುದೇ ದಾಖಲೆ ಬಿಡುಗಡೆ ಮಾಡಲಿಲ್ಲ ಎಂದು ಪ್ರತಾಪ್ ಸಿಂಹ ಇದೇ ವೇಳೆ ಪ್ರತಿಕ್ರಿಯಿಸಿದರು.

ಸಿದ್ದರಾಮಯ್ಯ ಸಹ ಕಾನೂನು ಪದವೀಧರರು. ಪಂಚ ಗ್ಯಾರಂಟಿ ಹೆಸರಲ್ಲಿ ಅಧಿಕಾರಕ್ಕೆ ಬಂದು, ಗೃಹ ಲಕ್ಷ್ಮಿಯಲ್ಲಿ 2 ಸಾವಿರ ಕೊಟ್ಟು ಮದ್ಯದ ಬೆಲೆ ಹೆಚ್ಚಿಸಿದರು. ಯುವ ನಿಧಿ ಕೊಟ್ಟಿಲ್ಲ, ಬೆಲೆ ಏರಿಕೆ ಮಾಡಿ ಬಿಟ್ಟಿ ಯೋಜನೆ ಕೊಡುತ್ತಿದ್ದಾರೆ. ಕೆಎಸ್‌ಆರ್‌ಟಿಸಿ 50 ಲಕ್ಷ ಕೋಟಿ ರೂ. ಲಾಭ ಮಾಡಿದೆ ಎನ್ನುವ ಸರ್ಕಾರ, ಶೇ. 15ರಷ್ಟು ಪ್ರಯಾಣ ದರ ಹೆಚ್ಚಳ ಮಾಡುತ್ತಿರುವುದಾದರೂ ಏಕೆ ಎಂದು ಪ್ರಶ್ನಿಸಿದರು. ಮೈಸೂರಿನ ಪ್ರತಿಷ್ಠಿತ ಬಡಾವಣೆಯಲ್ಲಿ ಸಿದ್ದರಾಮಯ್ಯ ಸರ್ಕಲ್ ಇದೆ. ಅವರ ಹೆಸರಲ್ಲಿ ವಿಜಯನಗರ 3ನೇ ಹಂತದಲ್ಲಿ ವಿದ್ಯಾರ್ಥಿನಿಲಯ ನಿರ್ಮಿಸಲಾಗಿದೆ. ಈಗ ರಾಜರ ಹೆಸರಿನಲ್ಲಿರುವ ರಸ್ತೆಗೇಕೆ ಅವರ ಹೆಸರಿಡಬೇಕು. ಪಾಲಿಕೆಯು ಹೊರಡಿಸಿರುವ ನೋಟಿಫಿಕೇಷನ್ ವಾಪಸ್ ಪಡೆಯಬೇಕು ಎಂದರು.

ದಿ ಗ್ರೇಟ್ 14 ಬಜೆಟ್ ಚಾಂಪಿಯನ್ ಸಿದ್ದರಾಮಯ್ಯರಿಂದ ಬಸ್ ಪ್ರಯಾಣ ದರ ಏರಿಕೆಯ ಉಡುಗೊರೆ

ಪ್ರತಿಪಕ್ಷ ನಾಯಕ ಆರ್.ಅಶೋಕ್ ವಾಗ್ದಾಳಿ



ಬೆಂಗಳೂರು, ಜ.3– ಸರ್ಕಾರಿ ಬಸ್ ಪ್ರಯಾಣ ದರ ಏರಿಕೆ ಮಾಡಿರುವ ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ನಗರದ ಮೆಜೆಸ್ಟಿಕ್ ಕೆಂಪೇಗೌಡ ಬಸ್ ನಿಲ್ದಾಣದಲ್ಲಿ ಬಿಜೆಪಿ ವತಿಯಿಂದ ವಿನೂತನ ಮಾದರಿಯಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು.

ಪ್ರತಿಪಕ್ಷ ನಾಯಕ ಆರ್.ಅಶೋಕ್, ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ವಿಧಾನ ಪರಿಷತ್ ಸದಸ್ಯ ಎನ್. ರವಿಕುಮಾರ್, ಪ್ರಮುಖರು ಮತ್ತು ಕಾರ್ಯಕರ್ತರು ಭಾಗವಹಿಸಿದ್ದರು.

ಕೆಲವು ಕಾರ್ಯಕರ್ತರು ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿಯವರ ಮುಖವಾಡ ಧರಿಸಿದ್ದರು. ಪುರುಷ ಪ್ರಯಾಣಿಕರಿಗೆ ಗುಲಾಬಿ ಹೂ ನೀಡಲಾಯಿತು. ಆರ್.ಅಶೋಕ್ ಅವರು ಮಾಧ್ಯಮಗಳ ಜೊತೆ ಮಾತನಾಡಿ, ಕರ್ನಾಟಕದ 7 ಕೋಟಿ ಜನರು ಹೊಸ ವರ್ಷಕ್ಕೆ ಉಡುಗೊರೆಗೆ ಕಾಯುತ್ತಿದ್ದೆವು. ಮೋದಿಯವರು ಹೊಸ ವರ್ಷಕ್ಕೆ ನಿಜವಾದ ಗಿಫ್ಟ್ ಕೊಟ್ಟಿದ್ದಾರೆ. ರಾಜ್ಯ ಸರ್ಕಾರ, ದಿ ಗ್ರೇಟ್ 14 ಬಜೆಟ್ ಚಾಂಪಿಯನ್ ಸಿದ್ದರಾಮಯ್ಯನವರು ಬಸ್ ದರ ಏರಿಕೆಯ ಉಡುಗೊರೆ ನೀಡಿದ್ದಾರೆ ಎಂದು ಟೀಕಿಸಿದರು. ಈ ಸರಕಾರ ಅಧಿಕಾರಕ್ಕೆ ಬಂದ ಬಳಿಕ ಪ್ರತಿದಿನ ತೆರಿಗೆ ಹೆಚ್ಚಳ, ಟ್ಯಾಕ್ಸ್ ಏರಿಕೆಯದೇ ಸಾಧನೆ ಮಾಡುತ್ತಿದೆ. ರಾಜ್ಯ ಸರ್ಕಾರವು ಅಭಿವೃದ್ಧಿ ವಿಚಾರದಲ್ಲಿ ಶೂನ್ಯ ಸಾಧನೆ ಮಾಡಿದೆ. ಆದರೆ, ಬೆಲೆ ಏರಿಕೆ ನಿರಂತರವಾಗಿ ಸಾಗಿದೆ ಎಂದು ಆಕ್ಷೇಪ ವ್ಯಕ್ತಪಡಿಸಿದರು.

ಛಲವಾದಿ ನಾರಾಯಣಸ್ವಾಮಿ ಮಾತನಾಡಿ, ಹೆಣ್ಮಕ್ಕಳಿಗೆ ಉಚಿತ ಪ್ರಯಾಣದರ ನೀಡಿ, ಗಂಡಸರಿಗೆ ಬರೆ ಹಾಕುವ ಸರ್ಕಾರ ಇದೆಂದು ಆಕ್ಷೇಪ ವ್ಯಕ್ತಪಡಿಸಿದರು. ಗ್ಯಾರಂಟಿ ಕಾರಣಗಳಿಂದ ಇಂದು ಜನರು ದುಬಾರಿ ಬೆಲೆಯನ್ನು ತೆರಬೇಕಾಗಿದೆ. ಹಾಲಿನ ದರ ಏರಿಸಿದ್ದೀರಿ. ವಿದ್ಯುತ್ ದರ ಏರಿಕೆ ಮಾಡಿದ್ದೀರಿ. ಸ್ಟಾಂಪ್ ಡ್ಯೂಟಿ, ರಿಜಿಸ್ಟ್ರೇಶನ್ ಶುಲ್ಕ ಮಾತ್ರವಲ್ಲದೆ ವಿವಿಧ ತೆರಿಗೆಗಳನ್ನೂ ಹೆಚ್ಚಿಸಲಾಗಿದೆ ಎಂದು ಖಂಡಿಸಿದರು. ಅಭಿವೃದ್ಧಿ ಒಂದು ಬಿಟ್ಟು ತಲೆ ಬೋಳಿಸುವ ಕೆಲಸ ಮಾಡುವ ಸರ್ಕಾರ ಇದಾಗಿದೆ ಎಂದು ಆರೋಪಿಸಿದರು. ಕಾಂಗ್ರೆಸ್ ಸರಕಾರದ ಖಜಾನೆ ಪೂರ್ತಿ ಖಾಲಿಯಾಗಿದೆ. ದಿನ ದೂಡಲು ಬರೆ ಹಾಕುವ ಕೆಲಸ ಮಾಡಿದ್ದಾರೆ. ಮೂರನೇ ದಿನಕ್ಕೆ ಮೂರು ನಾಮ ಹಾಕುವ ಕೆಲಸವನ್ನು ಸರಕಾರ ಮಾಡಿದೆ ಎಂದು ಟೀಕಿಸಿದರು.

ಬಿಜೆಪಿಯವರು 5,900 ಕೋಟಿ ಸಾಲ ಬಿಟ್ಟು ಹೋಗಿದ್ದಾರೆ; ಬಸ್ ದರ ಏರಿಕೆ ಅನಿವಾರ್ಯ



ರಾಮಲಿಂಗಾರೆಡ್ಡಿ

ಬೆಂಗಳೂರು, ಜ.3– ರಾಜ್ಯದ ನಾಲ್ಕು ಸಾರಿಗೆ ನಿಗಮಗಳ ಬಸ್ ಪ್ರಯಾಣ ದರ ಶೇ.15 ರಷ್ಟು ಏರಿಕೆಗೆ ಹಿಂದಿನ ಬಿಜೆಪಿ ಸರ್ಕಾರ ಕಾರಣವಾಗಿದೆ. ಅವರು ನಮ್ಮ ಮೇಲೆ ರೂ. 5,900 ಕೋಟಿ ಸಾಲವನ್ನು ಬಿಟ್ಟು ಹೋಗಿದ್ದಾರೆ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಆರೋಪಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದೈನಂದಿನ ನಿರ್ವಹಣಾ ವೆಚ್ಚ ಮತ್ತು ವೇತನ ಹೆಚ್ಚಾಗಿರುವುದರಿಂದ ದರ ಏರಿಕೆ ಅಗತ್ಯವಾಗಿದೆ. ಪ್ರತಿದಿನ ಡೀಸೆಲ್ ದರ ರೂ. 9 ಕೋಟಿಯಿಂದ ರೂ. 13 ಕೋಟಿಯಾಗುತ್ತದೆ. ಅದೇ ರೀತಿ ವೇತನ ರೂ. 12 ಕೋಟಿಯಿಂದ 18 ಕೋಟಿಯಾಗುತ್ತದೆ. ಪ್ರತಿದಿನ ಸಾರಿಗೆ ನಿಗಮಗಳಿಗೆ ರೂ. 10 ಕೋಟಿಗೂ ಹೆಚ್ಚು ಹೊರೆಯಾಗುತ್ತಿದೆ ಎಂದು ಹೇಳಿದರು. ಕೇಂದ್ರ ಸರ್ಕಾರ 2020ರಲ್ಲಿ ರೂ. 60 ಇದ್ದ ಡೀಸೆಲ್ ದರವನ್ನು ಈಗ 90 ರೂಪಾಯಿಗೆ ಹೆಚ್ಚಿಸಿದೆ. ಡೀಸೆಲ್ ದರವನ್ನು ಕಡಿಮೆ ಮಾಡಿ ನಂತರ ಬಿಜೆಪಿಯವರು ಟಿಕೆಟ್ ದರ ಏರಿಕೆ ಬಗ್ಗೆ ಮಾತನಾಡಲು ಅವಕಾಶ ನೀಡುವಂತೆ ಪ್ರಧಾನಿ ನರೇಂದ್ರ ಮೋದಿ ಅವರನ್ನು ಒತ್ತಾಯಿಸುತ್ತೇನೆ. ಬಿಜೆಪಿ ಸರ್ಕಾರ ಅಷ್ಟು ಮೊತ್ತದ ಸಾಲ ಮಾಡದಿದ್ದರೆ ಕಾಂಗ್ರೆಸ್ ದರ ಏರಿಕೆಗೆ ಹೋಗುತ್ತಿರಲಿಲ್ಲ. 2020 ಜನವರಿಯಲ್ಲಿ ಬಿ.ಎಸ್.ಯಡಿಯೂರಪ್ಪ ಸಿಎಂ ಆಗಿದ್ದಾಗ ಟಿಕೆಟ್ ದರವನ್ನು ಶೇ. 12 ರಷ್ಟು ಹೆಚ್ಚಳ ಮಾಡಲಾಗಿತ್ತು. ಈಗ ಬಿಜೆಪಿಯವರಿಗೆ ದರ ಏರಿಕೆ ಪ್ರಶ್ನಿಸುವ ಯಾವುದೇ ನೈತಿಕ ಹಕ್ಕಿಲ್ಲ ಎಂದರು.

ದೈನಂದಿನ ಬಸ್‌ಗಳ ನಿರ್ವಹಣೆ ಮತ್ತು ಸಂಬಳದ ವೆಚ್ಚಕ್ಕೆ ಹೋಲಿಸಿದರೆ ಟಿಕೆಟ್‌ಗಳ ಮಾರಾಟದಿಂದ ಬರುವ ಆದಾಯ ಕಡಿಮೆಯಾಗಿದೆ ಹೀಗಾಗಿ ದರ ಹೆಚ್ಚಳ ಅಗತ್ಯವಾಗಿದೆ

ವಿವಿಧೆಡೆ ವಿದ್ಯುತ್ ವ್ಯತ್ಯಯ



ಮೈಸೂರು,ಜ.2– ಜನವರಿ 3, 5, 7, 9, 11, 13 ಹಾಗೂ 15ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ಹೂಟಗಳ್ಳಿ ಉಪವಿಭಾಗ ವ್ಯಾಪ್ತಿಯ ಎನ್.ಜೆ.ವೈ ಯಾಚೇಗೌಡನಹಳ್ಳಿ ಮತ್ತು ಎಡ್ಡೆಹಳ್ಳಿ ಲಿಫ್ಟ್ ಇರಿಗೇಷನ್ ವಿದ್ಯುತ್ ಮಾರ್ಗಗಳಲ್ಲಿ ಲಿಂಕ್ ಲೈನ್ ಕೆಲಸದ ನಿರ್ವಹಣಾ ಕಾಮಗಾರಿ ನಿಮಿತ್ತ ಗುಂಗ್ರಾಲ್‌ಛತ್ರ, ಯಡ್ಡಹಳ್ಳಿ, ಯಾಚೇಗೌಡನಹಳ್ಳಿ, ಹೊಸಕೋಟೆ, ದಡದಕಲ್ಲಹಳ್ಳಿ, ಛತ್ರದಕೊಪ್ಪಲು, ರಾಮೇನಹಳ್ಳಿ, ಕಲ್ಲೂರು ನಾಗನಹಳ್ಳಿ, ಕಲ್ಲೂರು, ಮೀನಾಕ್ಷಿಪುರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯ ವಾಗಲಿದೆ ಹಾಗೂ ಕೃಷಿ ಪಂಪ್‌ಸೆಟ್‌ಗಳಿಗೆ ಸದರಿ ದಿನಗಳಂದು ರಾತ್ರಿ 10 ಗಂಟೆಯಿಂದ ಮಾರನೇ ದಿನದ ಬೆಳಗ್ಗೆ 10 ಗಂಟೆಯವರೆಗೆ 3 ಫೇಸ್ ವಿದ್ಯುತ್ ಸರಬರಾಜು ಮಾಡಲಾಗುವುದು ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ನಾಳೆ ಕಲಾಮಂದಿರದಲ್ಲಿ ವೈದ್ಯರಿಂದ ಸಂಗೀತ ಸಂಜೆ

'ಗೀತ್ ಗಾತಾ ಚಲ್' 23ನೇ ಆವೃತ್ತಿ



ಕೆ.ಆರ್.ದಾಕ್ಷಾಯಿಣಿ | ಡಾ. ಸಿ.ಉಮೇಶ್ ಕಾಮತ್ | ಡಾ. ಎಂ. ಜಗನ್ನಾಥ ಶೆಣೈ | ಕುಸುಮಾ ಶೆಣೈ | ಡಾ. ಸೋಮನಾಥ

ಮೈಸೂರು, ಜ.3– ವೈದ್ಯರು ಮತ್ತು ಅವರ ಕುಟುಂಬ ಸದಸ್ಯರ ಅತ್ಯಂತ ಜನಪ್ರಿಯ ಸಂಗೀತ ಕಾರ್ಯಕ್ರಮವಾದ 'ಗೀತ್ ಗಾತಾ ಚಲ್'ನ 23ನೇ ಆವೃತ್ತಿ ಕಾರ್ಯಕ್ರಮ ಮೈಸೂರಿನ ಕಲಾಮಂದಿರದಲ್ಲಿ ಜ.5(ಭಾನುವಾರ) ರಂದು ಸಂಜೆ 5 ರಿಂದ ರಾತ್ರಿ 9ರವರೆಗೆ ನಡೆಯಲಿದೆ. ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ (ಎಂಎಂಸಿ ಮತ್ತು ಆರ್‌ಐ) ಡೀನ್ ಮತ್ತು ನಿರ್ದೇಶಕರಾದ ಡಾ. ಕೆ.ಆರ್.ದಾಕ್ಷಾಯಿಣಿ ಕಾರ್ಯಕ್ರಮ ಉದ್ಘಾಟಿಸುವರು.

'ಗೀತ್ ಗಾತಾ ಚಲ್' ಸಂಗೀತ ಕಾರ್ಯಕ್ರಮವನ್ನು ಮೈಸೂರಿನಲ್ಲಿ ನಡೆಸುವುದು ವಾಡಿಕೆಯಾಗಿದೆ. ಇದು ವೈದ್ಯರು ಮತ್ತು ಅವರ ಕುಟುಂಬ ಸದಸ್ಯರನ್ನು ಒಟ್ಟುಗೂಡಿಸಿ ಸಮ್ಮೋಹನಗೊಳಿಸುವ ಸಂಗೀತ ಸಂಭ್ರಮವನ್ನು ಪ್ರಸ್ತುತಪಡಿಸುವ ವಿಶಿಷ್ಟ ಪರಿಕಲ್ಪನೆಗಾಗಿ ಆಚರಿಸಲಾಗುತ್ತದೆ. ಸೂಪರ್–ಹಿಟ್ ಹಿಂದಿ ಮತ್ತು ಕನ್ನಡ ಚಲನಚಿತ್ರ ಗೀತೆಗಳ ಕರೋಕೆ ನಿರೂಪಣೆಗಳೊಂದಿಗೆ, ಕಾರ್ಯಕ್ರಮವು ಎಲ್ಲಾ ವಯಸ್ಸಿನ ಪ್ರೇಕ್ಷಕರನ್ನು ಆಕರ್ಷಿಸುತ್ತದೆ. ಈ ಕಾರ್ಯಕ್ರಮವು ಭಾರತೀಯ ಚಿತ್ರರಂಗದ ಸುವರ್ಣ ಯುಗದ ಮೂಲಕ ಅವರನ್ನು ಸಂತೋಷಕರ ಪ್ರಯಾಣಕ್ಕೆ ಕರೆದೊಯ್ಯುತ್ತದೆ.

ಗೀತ್ ಗಾತಾ ಚಲ್ ಕಾರ್ಯಕ್ರಮ ಆರಂಭವಾದಾಗಿನಿಂದಲೂ ಉದ್ಯಮಿ ಡಾ. ಎಂ. ಜಗನ್ನಾಥ ಶೆಣೈ ಮತ್ತು ಅವರ ಪತ್ನಿ ಶ್ರೀಮತಿ ಕುಸುಮಾ ಶೆಣೈ ಅವರು ಈ ಸಂಗೀತ ಸಂಜೆ ಕಾರ್ಯಕ್ರಮವನ್ನು ಪ್ರಾಯೋಜಿಸಿದ್ದಾರೆ. ಮುಖ್ಯ ಪೋಷಕರಾದ ಡಾ. ಸಿ.ಉಮೇಶ್ ಕಾಮತ್ ಭಾಗವಹಿಸಲಿದ್ದಾರೆ. ಈ ವರ್ಷ ಡಾ. ಸೋಮನಾಥ ವಾಸುದೇವ ಅವರನ್ನು ನೂತನ ಸಂಘಟನಾ ಅಧ್ಯಕ್ಷರಾಗಿ ನೇಮಿಸಲಾಗಿದೆ.

'ಗೀತ್ ಗಾಥಾ ಚಲ್–23' ಕಾರ್ಯಕ್ರಮವು ಡಾ.ಎಂ.ಎಸ್. ನಟಶೇಖರ್ ಸೇರಿದಂತೆ ಡಾ.ಎ.ಎಲ್.ಹೇಮಲತಾ, ಡಾ. ಪಿ.ಎ.ಕುಶಾಲಪ್ಪ, ಡಾ.ಸ್ನೇಹಶ್ರೀ ನಿರ್ಮಲಕುಮಾರ್, ಡಾ.ಯು.ಜಿ. ಶೆಣೈ, ಡಾ.ಸೋಮನಾಥ್ ವಾಸುದೇವ, ಡಾ.ಸೀತಾಲಕ್ಷ್ಮಿ ಸೋಮನಾಥ್, ಡಾ.ಶ್ಯಾಮ್ ಪ್ರಸಾದ್, ಡಾ.ಅಮೃತ ಉಪಾಧ್ಯ, ಡಾ.ಶಿವಾನಿ ನಾಯಕ್, ಡಾ.ಸುಷ್ಮಾ ಕೃಷ್ಣಮೂರ್ತಿ, ಡಾ.ಯು. ಗಣೇಶ್ ರಾವ್, ಡಾ.ಸುಷ್ಮಾ ಅರುಣ್, ಅಪೂರ್ವ ನಟಶೇಖರ್, ಸ್ಪರ್ಶಾ ಶೆಣೈ, ಭೂಮಿಕಾ ಅರುಣ್ ಮತ್ತು ಆರ್.ಎಲ್. ವರ್ಷಾ ಇನ್ನಿತರ ಅಸಾಧಾರಣ ಪ್ರತಿಭಾವಂತ ಗಾಯಕರನ್ನು ಒಳಗೊಂಡಿದೆ. ಈ ವರ್ಷ ಒಬ್ಬ ಅತಿಥಿ ಗಾಯಕ, ಶಬ್ಬೀರ್ ಸಂಗೀತ ಸಂಜೆಗೆ ವಿಶೇಷ ಮೆರಗನ್ನು ನೀಡಲಿದ್ದಾರೆ. ಈ ವರ್ಷ ಮೊದಲ ಬಾರಿಗೆ 'ಆಪ್ ಕಿ ಫರ್ಮಾಯಿಶ್' ಕಾರ್ಯಕ್ರಮ ಯೋಜಿಸಲಾಗಿದೆ. ಕಾರ್ಯಕ್ರಮವನ್ನು ವರ್ಚಸ್ವಿ ಸೈಯದ್ ಅಫ್ತಾಬ್ ಅಹಮದ್ ನಿರ್ವಹಿಸಲಿದ್ದಾರೆ.



ಡಾ.ನಟಶೇಖರ್ | ಡಾ. ಹೇಮಲತಾ | ಡಾ.ಕುಶಾಲಪ್ಪ | ಡಾ.ಸ್ನೇಹಶ್ರೀ | ಡಾ.ಶೆಣೈ | ಡಾ.ಸೀತಾಲಕ್ಷ್ಮಿ



ಡಾ.ಶ್ಯಾಮ್ | ಡಾ.ಅಮೃತ | ಡಾ.ಶಿವಾನಿ | ಡಾ.ಸುಷ್ಮಾ | ಡಾ.ಗಣೇಶ್ ರಾವ್ | ಡಾ.ಸುಷ್ಮಾ



ಅಪೂರ್ವ | ಸ್ಪರ್ಶಾ | ಭೂಮಿಕಾ | ವರ್ಷಾ | ಸೈಯದ್ ಅಫ್ತಾಬ್ | ಶಬ್ಬೀರ್

ಪೈಲ್ವಾನ್ ಚಿಕ್ಕಪುಟ್ಟಿ ಪರ ಮತಯಾಚನೆ



ಮೈಸೂರಿನ ಗಾಂಧಿ ಚೌಕದಲ್ಲಿರುವ ದಿ ಮೈಸೂರ್ ಕೋ ಆಪರೇಟಿವ್ ಬ್ಯಾಂಕ್‌ನ 2025–2030ನೇ ಸಾಲಿನ ಆಡಳಿತ ನಿರ್ದೇಶಕರ ಚುನಾವಣೆಯಲ್ಲಿ ಸ್ಪರ್ಧಿಸಿರುವ ಪೈಲ್ವಾನ್ ಚಿಕ್ಕಪುಟ್ಟಿ ಪರವಾಗಿ ಮುಡಾ ಮಾಜಿ ಸದಸ್ಯ ಕೆ.ಮಾದೇಶ್, ಅರುಣ್‌ಕುಮಾರ್, ಡಾ.ಲೋಕೇಶ್ ಆರ್.ರವೀಂದ್ರ, ಜಗದೀಶ್, ರೋಹಿತ್, ಪ್ರಕಾಶ್ ಮತಯಾಚಿಸಿದರು.

ವಿಶೇಷ ಮಕ್ಕಳಿಗೆ ಕಣ್ಣಿನ ತಪಾಸಣಾ ಶಿಬಿರ



ಮೈಸೂರಿನ ಚಾಮುಂಡಿಪುರಂನಲ್ಲಿರುವ ಅರುಣೋದಯ ವಿಶೇಷ ಶಾಲೆಯಲ್ಲಿ ಹೊಸ ವರ್ಷದ ಅಂಗವಾಗಿ ಉಚಿತ ಕಣ್ಣಿನ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿತ್ತು.

ಮೈಸೂರು, ಜ.3– ಚಾಮುಂಡಿಪುರಂನಲ್ಲಿರುವ ಅರುಣೋದಯ ವಿಶೇಷ ಶಾಲೆಯಲ್ಲಿ ಹೊಸ ವರ್ಷದ ಅಂಗವಾಗಿ ಮಾಜಿ ಕಾರ್ಪೊರೇಟರ್ ಮಾ.ವಿ. ರಾಮಪ್ರಸಾದ್ ಆಯೋಜಿಸಿದ್ದ ಅನ್ನಪೂರ್ಣ ಐ ಆಸ್ಪತ್ರೆಯ ಸಹಯೋಗದೊಂದಿಗೆ ಉಚಿತ ಕಣ್ಣಿನ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷರಾದ ಡಿ ಟಿ ಪ್ರಕಾಶ್ ಕ್ಯಾಲೆಂಡರ್ ಹೊಸ ವರ್ಷದ ದಿನದಂದು ವಿಶೇಷ ಮಕ್ಕಳಿಗೆ ಬೆಳಕು ನೀಡುವ ಇಂತಹ ಅರ್ಥಪೂರ್ಣ ಕಾರ್ಯಕ್ರಮವನ್ನು ಆಯೋಜಿಸಿರುವ ಮಾಜಿ ನಗರಪಾಲಿಕ ಸದಸ್ಯ ಮಾ ವಿ ರಾಮ್ ಪ್ರಸಾದ್ ರವರ ಶ್ಲಾಘನೀಯ ಕೆಲಸ, ವಿಶೇಷ ಮಕ್ಕಳನ್ನು ದೇವರ ಮಕ್ಕಳಂತೆ ಆರೈಕೆ ಮಾಡುತ್ತಾ, ಪೋಷಿಸುತ್ತಿರುವ ಅರುಣೋದಯ ವಿಶೇಷ ಶಾಲೆಯ ಸೇವೆ ಮಾದರಿ ಕಾರ್ಯವಾಗಿದೆ ವಿಶೇಷ ಮಕ್ಕಳನ್ನು ಸ್ವಂತ ಮಕ್ಕಳಿಗಿಂತಲೂ ಹೆಚ್ಚಾಗಿ ಇಲ್ಲಿನ ಸಂಸ್ಥೆಯಲ್ಲಿ ಆರೈಕೆ ಮಾಡಿ, ಪೋಷಿಸುತ್ತಾ ಸೇವೆ ಇತರರಿಗೂ ಪ್ರೇರಣೆಯಾಗಿದೆ ಎಂದರು.

ವಿಶೇಷ ಚೇತನ ಮಕ್ಕಳ ಹೆತ್ತವರಿಗೆ ಇಂತಹ ಮಕ್ಕಳನ್ನು ನೋಡಿಕೊಳ್ಳುವುದು ಸವಾಲಿನ ಕೆಲಸ. ವಿಶೇಷ ಚೇತನರೊಂದಿಗೆ ಸಮಾಜ ಹೊಂದ ಬೇಕಾದ ಕನಿಷ್ಠ ಸೌಜನ್ಯ, ಸಂವೇದನಾಶೀಲತೆಯ ಕುರಿತು ಅರಿವು ಮೂಡಿಸುವುದು ಬಹಳ ಅಗತ್ಯ. ಎಂದರು. ಮಾಜಿ ಕಾರ್ಪೋರೇಟರ್ ಮಾ.ವಿ. ರಾಮ್‌ಪ್ರಸಾದ್ ವಿಶೇಷ ಮಕ್ಕಳ ಸೇವೆ ಮಾಡುವುದು ದೇವರ ಸೇವೆ ಮಾಡಿದಂತೆ. ಮನೆಯಲ್ಲಿ ಒಂದು ವಿಶೇಷ ಚೇತನ ಮಗುವಿದ್ದರೇ ನೋಡಿಕೊಳ್ಳುವುದು ಕಷ್ಟ, ಆದರೆ ನಮ್ಮ ಈ ಸಂಸ್ಥೆ ನೂರಾರು ಮಕ್ಕಳ ಪೋಷಣೆ ಮಾಡುತ್ತಿದೆ. ಇದು ನಿಜಕ್ಕೂ ದೇವರ ಸೇವೆ ಮಾಡಿದಂತೆಯೇ, ಇಲ್ಲಿ ಕೆಲಸ ಮಾಡುವ ಶಿಕ್ಷಕಿಯರು ತಮ್ಮ ಮಕ್ಕಳನ್ನು ಕಾಳಜಿ ವಹಿಸುವಂತೆ ಈ ವಿಶೇಷ ಚೇತನ ಮಕ್ಕಳ ಪಾಲನೆ ಮಾಡುತ್ತಿರುವುದು ಇತರರಿಗೂ ಪ್ರೇರಣೆಯಾಗಿದೆ ಎಂದು ಶ್ಲಾಘಿಸಿದರು.

ಜೆಡಿಎಸ್ ಕಾರ್ಯಾಧ್ಯಕ್ಷ ಎಸ್ ಪ್ರಕಾಶ್ ಪ್ರಿಯದರ್ಶನ್, ಬಿಜೆಪಿ ಮುಖಂಡರಾದ ರಮೇಶ್, ಸಂತೋಷ್ (ಶಂಭು), ಮಂಜುನಾಥ್, ಹೇಮಂತ್, ಬೈರತಿ ಲಿಂಗರಾಜು ಹಾಗೂ ಇನ್ನಿತರರು ಹಾಜರಿದ್ದರು.

ಕ್ಯಾಲೆಂಡರ್ ಬಿಡುಗಡೆ



ತೆಲಗು ರೆಡ್ಡಿ ಸಂಘದ 2025 ನೇ ವರ್ಷದ ಕ್ಯಾಲೆಂಡರ್ ಅನ್ನು ತಿಲಕ್ ನಗರ ರಾಮ ಮಂದಿರದಲ್ಲಿ ಮಾಜಿ ನಗರ ಪಾಲಿಕೆ ಸದಸ್ಯ ಪ್ರಶಾಂತ್ ಗೌಡ ಹಾಗೂ ಎಪಿಎನ್ ಡೆವಲಪರ್ ನಾಗೇಶ್ ಬಿಡುಗಡೆಗೊಳಿಸಿದರು ಸಂಘದ ಅಧ್ಯಕ್ಷ ಗುರುಪ್ರಸಾದ್, ಗುರುರಾಜ್, ಹರೀಶ್ ರೆಡ್ಡಿ, ವಿಶ್ವನಾಥ್ ಹಾಗೂ ಇತರರು ಉಪಸ್ಥಿತರಿದ್ದರು

ಕಾಂಗ್ರೆಸ್ ಸರ್ಕಾರದ ನಿರ್ಲಕ್ಷ್ಯದಿಂದ 300 ಬಾಣಂತಿಯರ ಸಾವು

ಜನಸಾಮಾನ್ಯರಿಗೆ ಗುಣಮಟ್ಟದ ಚಿಕಿತ್ಸೆ, ಔಷಧ ನೀಡಲಾಗದ ಸ್ಥಿತಿ; ಕೇಂದ್ರ ಸಚಿವ ಹೆಚ್‌ಡಿಕೆ

ಕೆ.ಆರ್.ಪೇಟೆ, ಜ.3– ರಾಜ್ಯದಲ್ಲಿ ಸುಮಾರು 300 ಮಂದಿ ಬಾಣಂತಿಯರು ಸೂಕ್ತ ಚಿಕಿತ್ಸೆ ದೊರೆಯದೇ ಸಾವನ್ನಪ್ಪಿದ್ದು, ಇದಕ್ಕೆ ರಾಜ್ಯ ಸರ್ಕಾರದ ನಿರ್ಲಕ್ಷ್ಯವೇ ಮುಖ್ಯ ಕಾರಣ. ಗ್ಯಾರಂಟಿ ಯೋಜನೆಯಿಂದಾಗಿ ಜನಸಾಮಾನ್ಯರಿಗೆ ಅಗತ್ಯವಾದ ಗುಣಮಟ್ಟದ ಚಿಕಿತ್ಸೆ ಮತ್ತು ಔಷಧಿ ದಾಸ್ತಾನು ಮಾಡಲು ಹಣ ನೀಡದ ಕಾರಣ ಏನೂ ಅರಿಯದ ಕಂದಮ್ಮ ಗಳು, ಬಾಣಂತಿಯರು ಪ್ರಾಣ ಕಳೆದುಕೊಳ್ಳುವಂತಾಗಿದೆ ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಆಪಾದಿಸಿದ್ದಾರೆ.



ಕೆ.ಆರ್.ಪೇಟೆ–ಚನ್ನರಾಂಯಪಟ್ಟಣ ಮುಖ್ಯರಸ್ತೆಂಯು ದುರಸ್ತಿ ಕಾಮಗಾರಿಗೆ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಭೂಮಿ ಪೂಜೆ ನೆರವೇರಿಸಿ ಮಾತನಾಡಿದರು.

ತಾಲೂಕಿನ ಹೊಡಕಹಳ್ಳಿ ಗ್ರಾಮದಲ್ಲಿ ಸುಮಾರು 6 ಕೋಟಿ ರೂ. ವೆಚ್ಚದಲ್ಲಿ ಕೆ.ಆರ್.ಪೇಟೆ–ಚನ್ನರಾಂಯಪಟ್ಟಣ ಮುಖ್ಯ ರಸ್ತೆಯ ದುರಸ್ತಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಮಂಡ್ಯ ಲೋಕಸಭಾ ವ್ಯಾಪ್ತಿಯ ಎಲ್ಲಾ 8 ತಾಲೂಕುಗಳಲ್ಲಿಯೂ ಶೀಘ್ರದಲ್ಲಿಯೇ ಆರೋಗ್ಯ ತಪಾಸಣಾ ಶಿಬಿರಗಳು ಮತ್ತು ಉಚಿತ ಚಿಕಿತ್ಸೆ ನೀಡುವ ಕಾರ್ಯಕ್ರಮ ಹಮ್ಮಿಕೊಳ್ಳುವುದಾಗಿ ತಿಳಿಸಿದರು.

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಸುಮಾರು ಒಂದು ಮುಕ್ಕಾಲು ವರ್ಷ ಕಳೆದಿದೆ. ಆದರೂ ಸಹ ರಾಜ್ಯದ ಮೂಲಭೂತ ಸೌಲಭ್ಯಗಳಿಗೆ ಅನುದಾನ ನೀಡದೇ ಕೇವಲ ಐದು ಗ್ಯಾರಂಟಿಗಳಿಗೆ ಅನುದಾನ ಒದಗಿಸಲು ವಿಲವಿಲ ಒದ್ದಾಡುತ್ತಿದೆ. ಹಿಂದೆ ಪೆಟ್ರೋಲ್, ಡೀಸೇಲ್ ದರ ಜಾಸ್ತಿ ಮಾಡಿತ್ತು. ಈಗ ಬಸ್ ದರ ಶೇ.15ರಷ್ಟು ಜಾಸ್ತಿ ಮಾಡಿದೆ. ಇದರಿಂದ ಎಲ್ಲಾ ಅಗತ್ಯ ವಸ್ತುಗಳ ಬೆಲೆಗಳು ಗಗನಕ್ಕೆ ಏರಲಿವೆ ಎಂದರು.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ರಾಜ್ಯದ ಜನರು ನನ್ನ ಪಂಚರತ್ನ ಯೋಜನೆಯನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಲಿಲ್ಲ. ಗ್ಯಾರಂಟಿಗೆ ಮರುಳಾಗಿ ಜನರು ಕಾಂಗ್ರೆಸ್ ಪಕ್ಷಕ್ಕೆ ಓಟ್ ಹಾಕಿದ್ದಾರೆ. ನಾವು ಅಧಿಕಾರಕ್ಕೆ ಬಂದರೆ ನಮ್ಮ ಪಂಚರತ್ನ ಯೋಜನೆಯಡಿ ಎಲ್ಲಾ ಜನರಿಗೂ ಅನುಕೂಲ ಆಗ್ತಿತ್ತು. ಆಸ್ಪತ್ರೆ, ಶಾಲಾ–ಕಾಲೇಜು, ರೈತರಿಗೆ ಸಾಲ, ಬಾಣಂತಿ ತಾಯಂದಿರಿಗೆ 4 ಸಾವಿರ ಕೊಡುವ ಯೋಜನೆ ಇತ್ತು. ಆದರೆ ರಾಜ್ಯದ ಜನರು ಮಾತ್ರ ನಮ್ಮ ಕೈ ಹಿಡಿಯಲಿಲ್ಲ. ಇದಕ್ಕೆ ಬೇಸರ ಇದೆ. ಆದರೂ ನಾವು ಎದೆಗುಂದಿಲ್ಲ ಎಂದರು.

ಶ್ರೀರಂಗಪಟ್ಟಣ–ಅರಸೀಕೆರೆ ರಾಜ್ಯ ಹೆದ್ದಾರಿಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮೇಲ್ದರ್ಜೆಗೇರಿಸಿ, ಚತುಷ್ಪಥ ರಸ್ತೆಯನ್ನಾಗಿ ಅಭಿವೃದ್ಧಿಪಡಿಸಲು ಈಗಾಗಲೇ ಅಧಿಕಾರಿಗಳೊಂದಿಗೆ ಚರ್ಚಿಸಿದ್ದೇನೆ. ನನ್ನ ಅಧಿಕಾರದ ಅವಧಿಯಲ್ಲಿ ಖಂಡಿತಾ ಈ ರಸ್ತೆಯನ್ನು ಅಭಿವೃದ್ಧಿ ಮಾಡಿಯೇ ಮಾಡುತ್ತೇನೆ. ಮಂಡ್ಯ ಲೋಕಸಭಾ ವ್ಯಾಪ್ತಿಯ ಕೆ.ಆರ್.ಪೇಟೆ, ಪಾಂಡವಪುರ, ನಾಗಮಂಗಲ, ಶ್ರೀರಂಗಪಟ್ಟಣ, ಮಂಡ್ಯ, ಮದ್ದೂರು, ಮಳವಳ್ಳಿ, ಕೆ.ಆರ್. ನಗರ ವಿಧಾನಸಭಾ ಕ್ಷೇತ್ರಗಳ ಸಮಗ್ರ ಅಭಿವೃದ್ಧಿಗೆ ನನ್ನ ಅಧಿಕಾರದ ಅವಧಿಯಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡುತ್ತೇನೆ. ಪ್ರಮುಖವಾಗಿ ಸಮುದಾಯ ಭವನಗಳ ಅಭಿವೃದ್ಧಿ, ರಸ್ತೆಗಳ ಅಭಿವೃದ್ಧಿ, ಕೈಗಾರಿಕೆಗಳ ಅಭಿವೃದ್ಧಿ, ಉದ್ಯೋಗ ಸೃಷ್ಟಿಗೆ ಒತ್ತು ನೀಡುವುದಾಗಿ ಕುಮಾರಸ್ವಾಮಿ ಭರವಸೆ ನೀಡಿದರು.

ವಿಧಾನಸೌಧಕ್ಕೆ ಪಾದಯಾತ್ರೆಗೆ ಸಿದ್ಧ: ರಾಜ್ಯ ಸರ್ಕಾರ ನನ್ನ ಕ್ಷೇತ್ರದ ಅಭಿವೃದ್ಧಿಗೆ ಅನುದಾನ ಕೊಡದೆ ತಾಲೂಕಿನಲ್ಲಿ ಯಾವುದೇ ಅಭಿವೃದ್ಧಿ ಕೆಲಸ ಮಾಡೋಕೆ ಆಗ್ತಿಲ್ಲ ಹೀಗಾಗಿ ಯಾಕಾದ್ರು ನಾನು ಶಾಸಕನಾದನೋ ಅನ್ನಿಸಿಬಿಟ್ಟಿದೆ. ಹಲವಾರು ಬಾರಿ ನಾನು ಸರ್ಕಾರದ ಅಧಿಕಾರಿಗಳು ಸಿಎಂ, ಡಿಸಿಎಂ, ಸೇರಿ ಸಂಬಂಧಪಟ್ಟ ಸಚಿವರ ಗಮನಕ್ಕೆ ತಂದರೂ ಅನುದಾನ ಕೊಡುತ್ತಿಲ್ಲ. ಈ ಸರ್ಕಾರ ಜೆಡಿಎಸ್ ಶಾಸಕರನ್ನು ಕಡೆಗಣಿಸ್ತಾ, ನಿರ್ಲಕ್ಷ್ಯ ಮಾಡುತ್ತಿದೆ. ಇದಕ್ಕಾಗಿ ನಾನು ಹಾಗೂ ನನ್ನ ಕ್ಷೇತ್ರದ ಜನರೊಂದಿಗೆ ವಿಧಾನಸೌಧಕ್ಕೆ ಪಾದಯಾತ್ರೆ ತೆರಳಿ ಹೋರಾಟ ಮಾಡುತ್ತೇನೆ ಎಂದು ಶಾಸಕ ಹೆಚ್.ಟಿ. ಮಂಜು ಹೇಳಿದರು.

ಮಂಡ್ಯ ಲೋಕಸಭೆ ಕ್ಷೇತ್ರದಲ್ಲಿ ಕೌಶಲ್ಯಾಧಾರಿತ ಉದ್ಯೋಗಾವಕಾಶ

ಅಧಿಕಾರಿಗಳೊಂದಿಗೆ ಚರ್ಚಿಸಿದ ಕೇಂದ್ರ ಸಚಿವ ಕುಮಾರಸ್ವಾಮಿ

ಮಂಡ್ಯ/ಬೆಂಗಳೂರು, ಜ.3– ಮಂಡ್ಯ ಲೋಕಸಭೆ ಕ್ಷೇತ್ರವೂ ಸೇರಿದಂತೆ ರಾಜ್ಯದ ನಿರುದ್ಯೋಗಿ ಯುವಜನರಿಗೆ ಕೌಶಲ್ಯಾಧಾರಿತ ಉದ್ಯೋಗಾವಕಾಶಗಳನ್ನು ಕಲ್ಪಿಸುವ ಬಗ್ಗೆ ಕೇಂದ್ರದ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವ ಹೆಚ್.ಡಿ.ಕುಮಾರಸ್ವಾಮಿ ಮಹತ್ವದ ಸಭೆ ನಡೆಸಿದರು.

ಮುಖ್ಯವಾಗಿ ಶೇ.80ರಷ್ಟು ಕೃಷಿಯನ್ನೇ ನಂಬಿಕೊಂಡಿರುವ ಮಂಡ್ಯ ಜಿಲ್ಲೆಯಲ್ಲಿ ಕೌಶಲ್ಯ ತರಬೇತಿ, ಉದ್ಯೋಗ ಅವಕಾಶಗಳ ಬಗ್ಗೆ ಸಚಿವರು ವಿವಿಧ ಇಲಾಖೆಗಳ ಉನ್ನತ ಅಧಿಕಾರಿಗಳ ಜತೆ ವಿಸ್ತೃತ ಸಮಾಲೋಚನೆ ನಡೆಸಿದರು.

ಬೆಂಗಳೂರಿನ ಹೆಚ್‌ಎಂಟಿ ಭವನದಲ್ಲಿರುವ ತಮ್ಮ ಕಚೇರಿಯಲ್ಲಿ ಸಭೆ ನಡೆಸಿದ ಕೇಂದ್ರ ಸಚಿವರು; ಪ್ರಮುಖವಾಗಿ ಡಿಪ್ಲೊಮೊ, ಐಟಿಐ, ಎಂಜಿನಿಯರಿಂಗ್, ಪದವಿ, ಸ್ನಾತಕೋತ್ತರ ಮುಂತಾದ ವಿಭಾಗಗಳಲ್ಲಿ ಉತ್ತೀರ್ಣರಾಗಿರುವ ಯುವಜನರಿಗೆ ಅವರವರ ಕುಶಲತೆಗೆ ತಕ್ಕಂತೆ ಉದ್ಯೋಗ ಕಲ್ಪಿಸಬೇಕು. ಅಗತ್ಯವಾಗಿ ನಾವು ಅಪ್ರೆಂಟೀಸ್ ಮೇಳ ಮಾಡಿದರೆ ಉತ್ತಮ ಎಂದು ಸಚಿವರು ಹೇಳಿದರು.

ಬೆಂಗಳೂರಿನಲ್ಲಿರುವ ಹೆಚ್‌ಎಂಟಿ ಕೌಶಲ್ಯ ತರಬೇತಿ ಕೇಂದ್ರದ ಮೂಲಕ ಐಟಿಐ, ಡಿಪ್ಲೊಮೊ, ಎಂಜಿನಿಯರಿಂಗ್ ಸೇರಿ ವಿವಿಧ ತಾಂತ್ರಿಕ ಕೋರ್ಸ್ ಗಳನ್ನು ಮಾಡಿಕೊಂಡಿರುವ ಯುವ ಜನರಿಗೆ ಸೂಕ್ತ ಕೌಶಲ್ಯ ತರಬೇತಿ ನೀಡುವ ಬಗ್ಗೆ ಕಂಪನಿಯ ಅಧಿಕಾರಿಗಳ ಜತೆ ಕೇಂದ್ರ ಸಚಿವರು ಚರ್ಚಿಸಿದರು.

ಮಂಡ್ಯದಲ್ಲಿ ಮೊಬೈಲ್ ಹೆಲ್ತ್ ಘಟಕ

ಮಂಡ್ಯ ಲೋಕಸಭೆ ಕ್ಷೇತ್ರ ಎಂಟು ವಿಧಾನಸಭೆ ಕ್ಷೇತ್ರಗಳೂ ಪ್ರತಿ ಕ್ಷೇತ್ರಕ್ಕೊಂದು ಮೊಬೈಲ್ ಆರೋಗ್ಯ ಘಟಕಗಳನ್ನು ಆರಂಭಿಸುವ ಬಗ್ಗೆ ಸಚಿವರು ಹೆಚ್‌ಎಲ್‌ಎಲ್ ಹೆಲ್ತ್ ಕೇರ್ ಸಂಸ್ಥೆ ಅಧಿಕಾರಿಗಳ ಜತೆ ಸಮಾಲೋಚನೆ ನಡೆಸಿದರು.

ಈ ಬಗ್ಗೆ ವಿಸ್ತೃತ ಪ್ರಾತ್ಯಕ್ಷಿಕೆಯನ್ನು ವೀಕ್ಷಿಸಿದ ಸಚಿವರು, ಮೊಬೈಲ್ ಆರೋಗ್ಯ ಘಟಕಗಳನ್ನು ಆರಂಭಿಸುವ ಬಗೆ, ಆರೋಗ್ಯ ಸೇವೆಯ ವಿಧಾನ, ಹಣಕಾಸು ಸಂಪನ್ಮೂಲ ಕ್ರೋಢೀಕರಣ ಇತ್ಯಾದಿ ಅಂಶಗಳ ಬಗ್ಗೆ ಸಚಿವರು ಮಾಹಿತಿ ಸಂಗ್ರಹ ಮಾಡಿದರು. ಆರೋಗ್ಯ ಕ್ಷೇತ್ರದಲ್ಲಿ ನರ್ಸ್, ಲ್ಯಾಬ್ ಅಸಿಸ್ಟೆಂಟ್, ಲ್ಯಾಬ್ ಟೆಕ್ನಿಷಿಯನ್, ವೈದ್ಯಕೀಯ ಪರಿಕರಗಳ ತಯಾರಿಕೆ ಇತ್ಯಾದಿ ವಿಭಾಗಗಳಲ್ಲಿ ಉದ್ಯೋಗಗಳಿಗೆ ಬೇಡಿಕೆ ಇದೆ. ಅರ್ಹ ಯುವಜನರಿಗೆ ಅಗತ್ಯವಾದ ತರಬೇತಿ ಕೊಡಬೇಕು. ಮಂಡ್ಯ ಕ್ಷೇತ್ರದಲ್ಲಿ ಇದಕ್ಕೆ ವಿಪುಲ ಅವಕಾಶಗಳಿವೆ. ಖಾಸಗಿ ಹಾಗೂ ಸಾರ್ವಜನಿಕ ವಲಯದ ಆರೋಗ್ಯ ಕ್ಷೇತ್ರದಲ್ಲಿ ಕೌಶಲ್ಯಾಧಾರಿತ ಉದ್ಯೋಗಗಳಿಗೆ ಬೇಡಿಕೆ ಇದೆ. ಅಲ್ಲದೆ, ಕೇಂದ್ರ ರಾಜ್ಯ ಸರಕಾರಗಳ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಇಂತಹ ಉದ್ಯೋಗಿಗಳ ಅಗತ್ಯ ಇದೆ. ಅದಕ್ಕಾಗಿ ಯುವಜನರಿಗೆ ಸೂಕ್ತ ತರಬೇತಿ ಕೊಟ್ಟು ಸಜ್ಜು ಮಾಡಬೇಕಿದೆ ಎಂದು ಸಚಿವರು ಸಲಹೆ ನೀಡಿದರು.

ಬೆಳ್ಳಿ ಪದಕ ವಿಜೇತ ಮನುಕುಮಾರ್

ಮಂಡ್ಯ, ಜ.3– ಮಂಡ್ಯ ಜಿಲ್ಲಾ ಗೃಹರಕ್ಷಕದಳ ಮನುಕುಮಾರ್ ಗೃಹರಕ್ಷಕ ಮತ್ತು ಪೌರರಕ್ಷಣಾ ಅಕಾಡೆಮಿ (ಬೆಂಗಳೂರು) ಯಲ್ಲಿ ನಡೆದ ರಾಜ್ಯ ಮಟ್ಟದ ಪುರುಷ ಗೃಹರಕ್ಷಕ ಅಧಿಕಾರಿಗಳ ತರಬೇತಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ ದ್ವಿತೀಯ ಸ್ಥಾನ ಪಡೆದಿದ್ದು, ಬೆಳ್ಳಿಯ ಪದಕ ಪಡೆದು ಮಂಡ್ಯ ಜಿಲ್ಲಾ ಗೃಹರಕ್ಷಕದಳಕ್ಕೆ ಕೀರ್ತಿ ತಂದಿದ್ದಾರೆ.



ಮಂಡ್ಯ ಜಿಲ್ಲಾ ಗೃಹರಕ್ಷಕದಳದ ವತಿಯಿಂದ ಅಧಿಕಾರಿ ಡಿ.ವಿನೋದ್‌ಖನ್ನಾ ಕಮಾಂಡೆಂಟ್ ಹಾಗೂ ಪುರುಷೋತ್ತಮ್‌ರಾವ್ ಎ. ಡೆಪ್ಯೂಟಿ ಕಮಾಂಡೆಂಟ್, ಬೋಧಕ ವರ್ಗದವರು ಮತ್ತು ಕಛೇರಿಯ ಸಿಬ್ಬಂದಿ ವರ್ಗದವರು, ಗೃಹರಕ್ಷಕ ಅಧಿಕಾರಿಗಳು ಹಾಗೂ ಗೃಹರಕ್ಷಕರು ಪದಕ ಪುರಸ್ಕೃತರನ್ನು ಪ್ರಶಂಸಿಸಿರುತ್ತಾರೆ ಎಂದು ಮಂಡ್ಯ ಗೃಹ ರಕ್ಷಕ ದಳದ ಸಮಾದೇಷ್ಟರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎಸ್.ಎಂ.ಕೃಷ್ಣ ಭಾವನಾತ್ಮಕ ಶ್ರದ್ಧಾಂಜಲಿ ಕಾರ್ಯಕ್ರಮ

ವೇದಿಕೆ ಸಂಚಾಲಕರಾಗಿ ಶಾಸಕ ದಿನೇಶ್ ಗೂಳಿಗೌಡರ ನಿಯೋಜನೆ

ಬೆಂಗಳೂರು, ಜ.3– ರಾಜ್ಯದ ಧೀಮಂತ ನಾಯಕರು, ಮುತ್ಸದ್ದಿ ರಾಜಕಾರಣಿ, ಮಂಡ್ಯ ಜಿಲ್ಲೆಯ ಸುಪುತ್ರರಾದ ಮಾಜಿ ಸಿಎಂ ಎಸ್.ಎಂ.ಕೃಷ್ಣ ಅವರಿಗೆ ಜಿಲ್ಲೆಯ ಮತ್ತು ರಾಜ್ಯದ ಜನತೆ ಪರವಾಗಿ ಶ್ರದ್ಧಾಂಜಲಿ ಕಾರ್ಯಕ್ರಮ ಆಯೋಜಿಸಲು ದಿವ್ಯಚೇತನ ಎಸ್.ಎಂ.ಕೃಷ್ಣ ಸಂಸ್ಮರಣಾ ವೇದಿಕೆ ಮುಂದಾಗಿದೆ.



ಶ್ರದ್ಧಾಂಜಲಿ ಪೂರ್ವಭಾವಿ ಸಭೆ ನಡೆಯಿತು.

ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವರಾದ ಚಲುವರಾಯಸ್ವಾಮಿ ಅವರ ಬೆಂಗಳೂರಿನ ಸರ್ಕಾರಿ ನಿವಾಸ 7 ಮಿನಿಸ್ಟರ್ ಕ್ವಾಟರ್ಸ್‌ನಲ್ಲಿ ಮಂಡ್ಯ ಜಿಲ್ಲೆಯ ಜನಪ್ರತಿನಿಧಿಗಳು, ಮುಖಂಡರು, ಎಸ್.ಎಂ.ಕೃಷ್ಣ ಅವರ ಅಭಿಮಾನಿಗಳ ಜೊತೆಗಿನ ಶ್ರದ್ಧಾಂಜಲಿ ಪೂರ್ವಭಾವಿ ಸಭೆ ನಡೆಯಿತು.

ಎಸ್.ಎಂ.ಕೃಷ್ಣ ಅವರಿಗೆ ಭಾವ ನಮನ, ಗೀತ ನಮನ, ಚಿತ್ರ ನಮನ, ಪುಷ್ಪ ನಮನ ಹಾಗೂ ದೀಪ ನಮನ ಒಳಗೊಂಡಂತೆ ಐದು ರೂಪದಲ್ಲಿ ನಮನ ಸಲ್ಲಿಸಲು ಸಭೆಯಲ್ಲಿ ಚರ್ಚಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಚಲುವರಾಯಸ್ವಾಮಿ, ಹಿರಿಯ ರಾಜಕಾರಣಿ, ಧೀಮಂತ ನಾಯಕರು, ಅಭಿವೃದ್ಧಿಯ ಹರಿಕಾರ ಮಾಜಿ ಸಿಎಂ ಎಸ್.ಎಂ.ಕೃಷ್ಣ ಅವರಿಗೆ ಶ್ರದ್ಧಾಂಜಲಿ ಕಾರ್ಯಕ್ರಮ ಆಯೋಜಿಸುವ ಕುರಿತು ಮಂಡ್ಯ ಜಿಲ್ಲೆಯ ಮುಖಂಡರೊಂದಿಗೆ ನಡೆದ ಸಭೆಯಲ್ಲಿ ಚರ್ಚಿಸಲಾಯಿತು. ದಿವ್ಯಚೇತನ ಎಸ್.ಎಂ. ಕೃಷ್ಣ ಸಂಸ್ಮರಣಾ ವೇದಿಕೆಯ ಈ ಕಾರ್ಯಕ್ರಮಕ್ಕೆ ಸಂಚಾಲಕರನ್ನಾಗಿ ಶಾಸಕರಾದ ದಿನೇಶ್ ಗೂಳಿಗೌಡ ಅವರನ್ನು ನಿಯೋಜಿಸಲಾಗಿದೆ. ಕಾರ್ಯಕ್ರಮದ ದಿನಾಂಕ, ಸಿದ್ಧತೆ ಮತ್ತು ರೂಪುರೇಷೆಗಳನ್ನು ವಿದೇಶ ಪ್ರವಾಸದಲ್ಲಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಬೆಂಗಳೂರಿಗೆ ವಾಪಸ್ ಆದ ನಂತರ ಅವರೊಂದಿಗೆ ಚರ್ಚಿಸಿ ಅಂತಿಮಗೊಳಿಸಲಾಗುವುದು ಎಂದರು.

ಸಭೆಯಲ್ಲಿ ಮಂಡ್ಯ ಶಾಸಕ ರವಿಕುಮಾರ್ ಗಣಿಗ, ವಿಧಾನಪರಿಷತ್ ಸದಸ್ಯರಾದ ಮಧು ಜಿ.ಮಾದೇಗೌಡ, ದಿನೇಶ್ ಗೂಳಿಗೌಡ, ಮಾಜಿ ಶಾಸಕರಾದ ಎಲ್.ಆರ್.ಶಿವರಾಮೇಗೌಡ, ಕೆ.ಬಿ.ಚಂದ್ರಶೇಖರ್, ಮರಿತಿಬ್ಬೇಗೌಡ, ಹೆಚ್.ಬಿ.ರಾಮು, ಹಿರಿಯ ಐಪಿಎಸ್ ಅಧಿಕಾರಿ ರವಿಕಾಂತೇಗೌಡ, ಮಂಡ್ಯ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷ ವೆಂಕಟರಮಣೇಗೌಡ (ಸ್ಟಾರ್ ಚಂದ್ರು), ಮಂಡ್ಯ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಡಿ.ಗಂಗಾಧರ್, ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಬಿ.ಜಯಪ್ರಕಾಶ್ ಗೌಡ, ಮುಖಂಡರಾದ ಸತ್ಯಾನಂದ ಹಲವರು ಉಪಸ್ಥಿತರಿದ್ದರು.

ಮಾಜಿ ಶಾಸಕಿ ಜಯವಾಣಿ ಮಂಚೇಗೌಡ ವಿಧಿವಶ

ಮದ್ದೂರು, ಜ.3– ಮಾಜಿ ಶಾಸಕಿ ಜಯವಾಣಿ ಮಂಚೇಗೌಡ (91) ವಯೋಸಹಜ ಅನಾರೋಗ್ಯದಿಂದ ಶುಕ್ರವಾರ ಮಧ್ಯಾಹ್ನ ಪಟ್ಟಣದ ತಮ್ಮ ನಿವಾಸದಲ್ಲಿ ಕೊನೆಯುಸಿರೆಳೆದರು.



1983ರಲ್ಲಿ ನಡೆದ ಚುನಾವಣೆಯಲ್ಲಿ ಮದ್ದೂರು ಕ್ಷೇತ್ರದಿಂದ ಶಾಸಕರಾಗಿ ಆಯ್ಕೆಯಾಗಿದ್ದ ಎಂ.ಮಂಚೇಗೌಡರ ಅಕಾಲಿಕ ಮರಣದಿಂದ ತೆರವಾದ ಸ್ಥಾನಕ್ಕೆ ನಡೆದ ಉಪಚುನಾವಣೆ ವೇಳೆ 1984ರಲ್ಲಿ ಮದ್ದೂರು ಕ್ಷೇತ್ರದಿಂದ ಆಯ್ಕೆಯಾಗಿದ್ದ ಜಯವಾಣಿ ಮಂಚೇಗೌಡ ಅವರು, ಪ್ರತಿಷ್ಠಿತ ಎಂ.ಎಚ್. ಚನ್ನೇಗೌಡ ವಿದ್ಯಾಸಂಸ್ಥೆಯ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದರು.

ಮಾಜಿ ಶಾಸಕ ದಿ.ಎಂ.ಮಂಚೇಗೌಡ ಅವರ ಪತ್ನಿಯಾದ ಜಯವಾಣಿ ಮಂಚೇಗೌಡರ ಅಂತ್ಯ ಸಂಸ್ಕಾರ ಮದ್ದೂರು ಪಟ್ಟಣದಲ್ಲಿ ಜ.4 ಶನಿವಾರ ಮಧ್ಯಾಹ್ನ 11 ಗಂಟೆಗೆ ನೆರವೇರಲಿರುವುದಾಗಿ ಕುಟುಂಬ ಸದಸ್ಯರು ತಿಳಿಸಿದ್ದಾರೆ. ಮೃತರು ಮಕ್ಕಳಾದ ಮಾಜಿ ಶಾಸಕ ಡಾ.ಎಂ.ಮಹೇಶ್‌ಚಂದ್, ಜಿ.ಪಂ. ಶಿಕ್ಷಣ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಎಂ.ಸ್ವರೂಪ್‌ಚಂದ್ ಹಾಗೂ ಪ್ರಫೂಲ್‌ಚಂದ್, ಮೂವರು ಪುತ್ರಿಯರು ಮತ್ತು ಸಹೋದರ ಸ್ವಾತಂತ್ರ್ಯ ಹೋರಾಟಗಾರ ಎಂ.ಎಚ್.ಚನ್ನೇಗೌಡ ವಿದ್ಯಾಸಂಸ್ಥೆ ಸಂಸ್ಥಾಪಕ, ಕಾರ್ಯದರ್ಶಿ ಕೆ.ಟಿ.ಚಂದು ಸೇರಿದಂತೆ ಅಪಾರ ಬಳಗವನ್ನು ಅಗಲಿದ್ದಾರೆ.

ಒಂದನೇ ಪುಟದಿಂದ

ಪ್ರಹ್ಲಾದ್ ಜೋಶಿ

ಹಿಂದೆ ಕೆಲವು ಕಡೆ ರಾಜ್ಯಾಧ್ಯಕ್ಷರ ಆಯ್ಕೆಯೂ ನಡೆದಿದೆ ಎಂದರು. ಇದೀಗ ಪಕ್ಷದ ಎಲ್ಲಾ ಹಂತಗಳಲ್ಲಿ ನಡೆಯುವಂತೆ ಮುಂದಿನ ರಾಜ್ಯಾಧ್ಯಕ್ಷರ ಸ್ಥಾನಕ್ಕೂ ಚುನಾವಣೆ ನಡೆಯಲಿದೆ. ಬಿಜೆಪಿ ಸದಸ್ಯತ್ವ ಅಭಿಯಾನ ಮುಗಿದ ಬಳಿಕ ಎಲ್ಲ ಹಂತಗಳಲ್ಲೂ ಪಕ್ಷದ ಪದಾಧಿಕಾರಿಗಳ ಚುನಾವಣೆ ನಡೆಯಲಿದೆ. ಈಗಾಗಲೇ ಬೂತ್ ಅಧ್ಯಕ್ಷರ ಆಯ್ಕೆ ನಡೆದಿದೆ. ಮಂಡಲ ಅಧ್ಯಕ್ಷರ ಚುನಾವಣೆ ಪ್ರಕ್ರಿಯೆ ಆರಂಭ ವಾಗಿದೆ. ಅದೇ ರೀತಿ ಪ್ರತಿ ರಾಜ್ಯದ ಬಿಜೆಪಿ ಅಧ್ಯಕ್ಷರ ಚುನಾವಣೆಗೆ ಸಂಬಂಧಿಸಿದಂತೆ ಒಬ್ಬೊಬ್ಬರನ್ನು ಮೇಲ್ವಿಚಾರಕರನ್ನಾಗಿ ನೇಮಕ ಮಾಡಲಾಗಿದೆ. ಕರ್ನಾಟಕದಲ್ಲಿ ಶಿವರಾಜ್‌ಸಿಂಗ್ ಚೌಹಾಣ್ ಮೇಲ್ವಿಚಾರಕರಾಗಿದ್ದಾರೆ ಎಂದು ಅವರು ಹೇಳಿದರು.

ರಾಜ್ಯಾಧ್ಯಕ್ಷರ ಆಯ್ಕೆಗೆ ಚುನಾವಣೆ ಪ್ರಕ್ರಿಯೆ ನಡೆಯುತ್ತಿದೆ ಎನ್ನುವಾಗಲೇ ಹಲವು ನಾಯಕರು ಬಿಜೆಪಿ ರಾಜ್ಯಾಧ್ಯಕ್ಷ ಪಟ್ಟಕ್ಕೆ ಬೇಡಿಕೆ ಇಟ್ಟಿದ್ದಾರೆ. ಅದೇ ವೇಳೆ ಬಿ.ವೈ.ವಿಜಯೇಂದ್ರ ಕರ್ನಾಟಕದ ಬಿಜೆಪಿ ರಾಜ್ಯಾಧ್ಯಕ್ಷ ಸ್ಥಾನ ಉಳಿಸಿಕೊಳ್ಳಲು ಶತಪ್ರಯತ್ನ ನಡೆಸಿದ್ದಾರೆ. ಬಿಜೆಪಿ ರಾಜ್ಯಾಧ್ಯಕ್ಷ ಸ್ಥಾನದ ರೇಸ್‌ನಲ್ಲಿ ಸಿ.ಟಿ.ರವಿ, ಡಾ.ಅಶ್ವತ್ ನಾರಾಯಣ್, ಆರ್. ಅಶೋಕ್, ಶೋಭಾ ಕರಂದ್ಲಾಜೆ, ಬಸವರಾಜ ಬೊಮ್ಮಾಯಿ ಸೇರಿದಂತೆ ಉತ್ತರ ಕರ್ನಾಟಕ ಭಾಗದ ಲಿಂಗಾಯತ ನಾಯಕನ ಹೆಸರು ಕೂಡ ಕೇಳಿಬರುತ್ತಿದೆ. ಕರ್ನಾಟಕದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷರ ಬದಲಾವಣೆ ವಿಚಾರವಾಗಿ ಸುದ್ದಿಗಳು ಹರಿದಾಡುತ್ತಿದ್ದಂತೆ ಹೊಸ ವರ್ಷದಂದು ಗೃಹ ಸಚಿವ ಅಮಿತ್ ಶಾ ಅವರನ್ನು ದೆಹಲಿಯ ನಿವಾಸದಲ್ಲಿ ಭೇಟಿ ಮಾಡಿದ್ದ ಬಿ.ವೈ. ವಿಜಯೇಂದ್ರ ಬಿಜೆಪಿ ರಾಜ್ಯಾಧ್ಯಕ್ಷರಾಗಿ 1 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಅಭಿನಂದನೆ ಸಲ್ಲಿಸಿದ್ದರು. ಈ ಭೇಟಿಯ ವೇಳೆ ಕರ್ನಾಟಕದ ಭಿನ್ನಮತಕ್ಕೆ ಬ್ರೇಕ್ ಹಾಕುವಂತೆ ಅಮಿತ್ ಶಾ ಅವರಿಗೆ ವಿಜಯೇಂದ್ರ ಮನವಿ ಮಾಡಿದ್ದಾರೆ ಎನ್ನಲಾಗಿದೆ.

ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಪುತ್ರ ಬಿ.ವೈ.ವಿಜಯೇಂದ್ರ ಅವರನ್ನು ಬಿಜೆಪಿ ಹೈಕಮಾಂಡ್ ರಾಜ್ಯಾಧ್ಯಕ್ಷರನ್ನಾಗಿ ನೇಮಕ ಮಾಡಿದ ಬಳಿಕ ಬಿಜೆಪಿ ಪಾಳಯದಲ್ಲಿಯೇ ಯಡಿಯೂರಪ್ಪ ಅವರ ವಿರೋಧಿ ಬಣ ಬಹಿರಂಗವಾಗಿಯೇ ಅಸಮಾಧಾನ ಹೊರ ಹಾಕುತ್ತಿದೆ. ನಿರಂತರವಾಗಿ ಬಿಜೆಪಿ ಹೋರಾಟ ಹಾಗೂ ಕಾರ್ಯಕ್ರಮಗಳಿಂದ ದೂರವಿದ್ದ ಬಸವನಗೌಡ ಪಾಟೀಲ್ ಯತ್ನಾಳ್ ಅಂಡ್ ಟೀಮ್ ರಾಜ್ಯಾಧ್ಯಕ್ಷರ ಬದಲಾವಣೆಗೆ ಪಟ್ಟು ಹಿಡಿಯುವ ಮೂಲಕ ಹೈಕಮಾಂಡ್ ನಾಯಕರ ಮುಂದೆ ತಮ್ಮ ಬೇಡಿಕೆ ಇಟ್ಟಿತ್ತು ಮೊದಲಿನಿಂದಲೂ ಉತ್ತರ ಕರ್ನಾಟಕದ ನಾಯಕನಿಗೆ ಬಿಜೆಪಿ ರಾಜ್ಯಾಧ್ಯಕ್ಷ ಸ್ಥಾನ ನೀಡಬೇಕು ಎಂಬ ಕೂಗು ಕೇಳಿ ಬಂದಿತ್ತು. ಹೀಗಾಗಿ ಉತ್ತರ ಕರ್ನಾಟಕದ ಲಿಂಗಾಯತ ನಾಯಕ ಅರವಿಂದ್ ಬೆಲ್ಲದ್ ಅವರಿಗೆ ಬಿಜೆಪಿ ರಾಜ್ಯಾಧ್ಯಕ್ಷ ಸ್ಥಾನವನ್ನು ನೀಡುವ ಕುರಿತು ಚರ್ಚೆಯಾಗುತ್ತಿದೆ. ಅರವಿಂದ್ ಬೆಲ್ಲದ್ ಅವರಿಗೆ ರಾಜ್ಯಾಧ್ಯಕ್ಷ ಸ್ಥಾನ ನೀಡಿದರೆ ಯಡಿಯೂರಪ್ಪ ಅವರ ವಿರೋಧಿ ಬಣ ಫುಲ್ ಸೈಲೆಂಟ್ ಆಗಲಿದೆ ಎಂದು ಹೇಳಲಾಗುತ್ತಿದೆ.

ತುರ್ತು ಪರಿಸ್ಥಿತಿ ಘೋಷಣೆ

ಚೀನಾದಲ್ಲಿ ಎಚ್‌ಎಂಪಿವಿ ಪ್ರಕರಣಗಳು ಹೆಚ್ಚಾಗಿ ವರದಿಯಾಗಿವೆ ಮತ್ತು ರೈನೋವೈರಸ್‌ನಂತಹ ಇತರ ಸಾಂಕ್ರಾಮಿಕ ರೋಗಗಳನ್ನು ಹರಡುವ ಅಪಾಯದಲ್ಲಿದೆ.

ಈ ವೈರಸ್ ಎಲ್ಲಾ ವಯಸ್ಸಿನ ಜನರಲ್ಲಿ ಉಸಿರಾಟದ ಕಾಯಿಲೆಗಳನ್ನು ಉಂಟುಮಾಡಬಹುದು. ಆದಾಗ್ಯೂ, ಚಿಕ್ಕ ಮಕ್ಕಳು, ಹಿರಿಯ ವಯಸ್ಕರು ಮತ್ತು ದುರ್ಬಲ ರೋಗನಿರೋಧಕ ಶಕ್ತಿ ಹೊಂದಿರುವ ಜನರು ವಿಶೇಷವಾಗಿ ಈ ರೋಗಕ್ಕೆ ಬೇಗ ಗುರಿಯಾಗುತ್ತಾರೆ.

ಕೆಮ್ಮು, ಜ್ವರ, ಮೂಗು ಕಟ್ಟುವಿಕೆ, ಉಸಿರಾಟದ ತೊಂದರೆ ಮುಂತಾದ ಸೋಂಕಿನ ಕ್ಲಿನಿಕಲ್ ರೋಗಲಕ್ಷಣಗಳು ಉಲ್ಬಣಗೊಳ್ಳಬಹುದು ಮತ್ತು ಬ್ರಾಂಕೈಟಿಸ್ ಅಥವಾ ನ್ಯುಮೋನಿಯಾದಂತಹ ಸಮಸ್ಯೆಗಳಿಗೆ ಕಾರಣವಾಗಬಹುದು. ಇದು ಉಸಿರಾಟದ ಸೋಂಕುಗಳಿಗೆ ಕಾರಣವಾಗುವ ಇತರ ವೈರಸ್‌ಗಳಿಗೆ ಹೋಲುತ್ತದೆ. ಸೋಂಕಿನ ಕಾವು ಅವಧಿಯು ಮೂರರಿಂದ ಆರು ದಿನಗಳಾಗಿವೆ. ಅಂದರೆ ಜನರು ಸೋಂಕಿಗೆ ಒಳಗಾದ ಮೂರರಿಂದ ಆರು ದಿನಗಳ ನಂತರ ಅದರ ರೋಗಲಕ್ಷಣಗಳನ್ನು ಎದುರಿಸುತ್ತಾರೆ. ಅನಾರೋಗ್ಯದ ಅವಧಿಯು ಅದರ ತೀವ್ರತೆಯನ್ನು ಅವಲಂಬಿಸಿ ಬದಲಾಗಬಹುದಾಗಿದೆ.

HMPV ಸೋಂಕು ತಡೆ ಹೇಗೆ?: ಮನೆಗೆ ಬಂದಾಗ ಸಾಬೂನಿನಿಂದ ಕೈ ತೊಳೆಯಿರಿ. ತೊಳೆಯದ ಕೈಗಳಿಂದ ಕಣ್ಣು, ಮೂಗು ಅಥವಾ ಬಾಯಿಯನ್ನು ಮುಟ್ಟುವುದನ್ನು ತಪ್ಪಿಸಿ. ಸೋಂಕಿತರೊಂದಿಗೆ ಅಂತರ ಕಾಯ್ದುಕೊಳ್ಳಿ. ಒಂದು ವೇಳೆ ನೀವು ವೈರಸ್‌ನ ಲಕ್ಷಣಗಳನ್ನು ಅನುಭವಿಸುತ್ತಿದ್ದರೆ, ಪ್ರತ್ಯೇಕತೆಯನ್ನು ಕಾಪಾಡಿಕೊಳ್ಳಿ. ಸೀನುವಾಗ ಜನರು ಕೈ ಮತ್ತು ಬಾಯಿಯನ್ನು ಮುಚ್ಚಿಕೊಳ್ಳಬೇಕು. ಸೋಂಕಿತರೊಂದಿಗೆ ಕಪ್‌ಗಳನ್ನು, ಪಾತ್ರೆಗಳನ್ನು ಹಂಚಿಕೊಂಡು ಏನಾದರೂ ತಿನ್ನುವುದನ್ನು ತಪ್ಪಿಸಿ, ಅನಾರೋಗ್ಯದ ಸಂದರ್ಭದಲ್ಲಿ ಮನೆಯಲ್ಲೇ ಇರಬೇಕಿದೆ.

ನೀವೇ ಮುಖ್ಯಮಂತ್ರಿಗಳಾಗಿರಿ...

ಚಲುವರಾಯಸ್ವಾಮಿ ಸೇರಿದಂತೆ ತಟಸ್ಥರಾಗಿದ್ದ ಸಚಿವರುಗಳು, ಇಂತಹ ಹೇಳಿಕೆಗೆ ಯಾವ ರೀತಿ ಪ್ರತಿಕ್ರಿಯಿಸಬೇಕೆಂದು ಅರ್ಥವಾಗದೆ, ಮೌನಕ್ಕೆ ಶರಣಾಗಿದ್ದರು.

ಮುಖ್ಯಮಂತ್ರಿ ಮಧ್ಯೆ ಪ್ರವೇಶಿಸಿ, ನೀನು ಕೆಪಿಸಿಸಿ ಅಧ್ಯಕ್ಷನಾಗುವುದಿಲ್ಲವೇ ಎಂದಾಗ, ಸತೀಶ್, 2028ರವರೆಗೂ ನಿಮ್ಮ ಕೈಕೆಳಗೇ ಸಚಿವನಾಗಿ ಕೆಲಸ ನಿರ್ವಹಿಸುತ್ತೇನೆ. ನಿಮ್ಮ ನಂತರ ಮುಖ್ಯಮಂತ್ರಿ ಆಗಲು ಬಯಸಿದ್ದೇನೆ ಎಂದಿದ್ದಾರೆ. ಇದೇ ಸಂದರ್ಭದಲ್ಲಿ ಖಾಲಿ ಆಗುತ್ತಿರುವ ವಿಧಾನ ಪರಿಷತ್‌ನ 4 ಸ್ಥಾನಗಳನ್ನು ಭರ್ತಿ ಮಾಡುವ ವಿಷಯ ಮುಂದಿಟ್ಟಿದ್ದಲ್ಲದೆ, ನಾಮಕರಣ ಮಾಡುವುದರಿಂದ ಇವು ನಮ್ಮ ಪಕ್ಷಕ್ಕೇ ಲಭ್ಯವಾಗುತ್ತವೆ. ಆಗ ಪರಿಷತ್‌ನಲ್ಲಿ ನಾವು ಪ್ರತಿಪಕ್ಷಗಳಿಗಿಂತ ಹೆಚ್ಚು ಸಂಖ್ಯಾಬಲ ಹೊಂದುತ್ತೇವೆ. ಬಜೆಟ್ ಅಧಿವೇಶನದಲ್ಲಿ ಸಭಾಪತಿ ಬಸವರಾಜ ಹೊರಟ್ಟಿ ಜಾಗಕ್ಕೆ ಸಚಿವ ಎನ್.ಎಸ್.ಬೋಸರಾಜ್ ಅವರನ್ನು ತರೋಣ, ಉಪಸಭಾಪತಿ ಸ್ಥಾನಕ್ಕೆ ರವಿ ಅವರನ್ನು ಕೂರಿಸೋಣ ಎಂದಿದ್ದಾರೆ. ಮಧ್ಯೆ ಪ್ರವೇಶಿಸಿದ ಜಾರಕಿಹೊಳಿ ಮತ್ತು ಕೆ.ಎನ್.ರಾಜಣ್ಣ, ನೀವು ಹೇಳಿದವರೇ ಅಭ್ಯರ್ಥಿಗಳಾಗಲಿ, ಕೆಪಿಸಿಸಿ ಅಧ್ಯಕ್ಷರ ಮಾತಿಗೆ ಮನ್ನಣೆ ನೀಡಬೇಡಿ ಎಂದಿದ್ದಾರೆ.

ಇದೇ 7ರಂದು ದೆಹಲಿಗೆ ತೆರಳುತ್ತಿದ್ದು, ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಮತ್ತು ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡಿ ಈ ಎಲ್ಲಾ ವಿಚಾರಗಳ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವುದಾಗಿ ತಿಳಿಸಿದ್ದಾರೆ.

ಸಚಿವ ಸತೀಶ್ ಜಾರಕಿಹೊಳಿ ಔತಣಕೂಟಕ್ಕೆ ತಮ್ಮ ಜಿಲ್ಲೆಯವರೇ ಆದ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರಿಗೆ ಆಹ್ವಾನ ನೀಡಿರಲಿಲ್ಲ, ಇನ್ನು ಉಪಮುಖ್ಯಮಂತ್ರಿ ವಿದೇಶ ಪ್ರವಾಸದಲ್ಲಿ ಇರುವುದರಿಂದ ಅವರ ಅನುಪಸ್ಥಿತಿಯಲ್ಲೇ ಈ ಎಲ್ಲಾ ಬೆಳವಣಿಗೆಗಳು ನಡೆದಿವೆ.

GNSS ಇದ್ದರೆ 20 ಕಿ.ಮೀ. ಪ್ರಯಾಣಕ್ಕೆ ಟೋಲ್ ಕಟ್ಟಬೇಕಿಲ್ಲ; ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇಗೂ ಇದು ಅನ್ವಯ

ನವದೆಹಲಿ, ಜ.3–ನಿರ್ದಿಷ್ಟ ಹೆದ್ದಾರಿಗಳಲ್ಲಿ 20 ಕಿ.ಮೀ ವ್ಯಾಪ್ತಿಯಲ್ಲಿ ಪ್ರಯಾಣಿಸುವ ಜಿಎನ್‌ಎಸ್‌ಎಸ್ ಅಳವಡಿಸಲಾದ ಖಾಸಗಿ ವಾಹನಗಳಿಗೆ ಹೊಸ ಟೋಲ್ ಟ್ಯಾಕ್ಸ್ ವಿನಾಯಿತಿಯನ್ನು ಪರಿಚಯಿಸಲಾಗಿದೆ.



ಕಳೆದ ಸೆಪ್ಟೆಂಬರ್‌ನಲ್ಲಿ ಜಾರಿಗೆ ತಂದಿರುವ ನಿಯಮದ ಪ್ರಕಾರ, ನಿರ್ದಿಷ್ಟ ಹೆದ್ದಾರಿಗಳಲ್ಲಿ 20 ಕಿ.ಮೀ ವ್ಯಾಪ್ತಿಯಲ್ಲಿ ಪ್ರಯಾಣಿಸುವ ಖಾಸಗಿ ವಾಹನಗಳು ಇನ್ನು ಮುಂದೆ ಶುಲ್ಕ ಪಾವತಿಸಬೇಕಾಗಿಲ್ಲ ಆದರೆ, ಅದಕ್ಕಾಗಿ ಗ್ಲೋಬಲ್ ನ್ಯಾವಿಗೇಷನ್ ಸ್ಯಾಟಲೈಟ್ ಸಿಸ್ಟಮ್ (ಜಿಎನ್‌ಎಸ್‌ಎಸ್) ನಿಮ್ಮ ವಾಹನಗಳಲ್ಲಿ ಇರಬೇಕು. ಅದು ಇದ್ದಲ್ಲಿ ಮಾತ್ರವೇ ಈ ವಿನಾಯಿತಿ ಸಿಗಲಿದೆ. ಪ್ರಸ್ತುತ ನಿರ್ದಿಷ್ಟ ಸಂಖ್ಯೆಯ ಹೆದ್ದಾರಿಗಳಿಗೆ ಈ ನಿಯಮ ಅನ್ವಯಿಸುತ್ತದೆ, ಶೀಘ್ರದಲ್ಲೇ ದೇಶಾದ್ಯಂತ ಇದನ್ನು ವಿಸ್ತರಿಸಲು ಸರ್ಕಾರ ಯೋಜಿಸಿದೆ. ಈ ವಿನಾಯಿತಿಯಿಂದ ಲಾಭ ಪಡೆಯಲು, ವಾಹನಗಳಲ್ಲಿ ಜಿಎನ್‌ಎಸ್‌ಎಸ್ ತಂತ್ರಜ್ಞಾನವನ್ನು ಅಳವಡಿಸಿರಬೇಕು. ಶುಲ್ಕರಹಿತವಾಗಿ ನೀವು 20 ಕಿ.ಮೀ ರೇಡಿಯಸ್‌ನಲ್ಲಿ ಪ್ರಯಾಣ ಮಾಡಬಹುದಾಗಿದೆ. ಸಾರಿಗೆ ಸಚಿವಾಲಯ ಈ ಬದಲಾವಣೆಯ ಬಗ್ಗೆ ಮಾಹಿತಿ ನೀಡಿದೆ. ಹೊಸ ವ್ಯವಸ್ಥೆಯ ಬಗ್ಗೆ ಜನರಿಗೆ ತಿಳಿಸುವ ಕೆಲಸ ಮಾಡುತ್ತಿದೆ. ಈ ಕ್ರಮವು ಟೋಲ್ ಪ್ಲಾಜಾಗಳಲ್ಲಿ ದಟ್ಟಣೆಯನ್ನು ಕಡಿಮೆ ಮಾಡುತ್ತದೆ ಮತ್ತು ಪ್ರಯಾಣವನ್ನು ಸುಗಮ ಮತ್ತು ಪರಿಣಾಮಕಾರಿಯಾಗಿ ಮಾಡುತ್ತದೆ ಎಂದು ನಿರೀಕ್ಷಿಸಲಾಗಿದೆ. ಗ್ಲೋಬಲ್ ನ್ಯಾವಿಗೇಷನ್ ಸ್ಯಾಟಲೈಟ್ ಸಿಸ್ಟಮ್, ನಿಖರವಾದ ಸ್ಥಳ ಟ್ರ್ಯಾಕಿಂಗ್ ಅನ್ನು ಸಕ್ರಿಯಗೊಳಿಸುವ ತಂತ್ರಜ್ಞಾನ. ಟೋಲ್ ರಸ್ತೆಗಳಲ್ಲಿ ಪ್ರಯಾಣಿಸುವ ನಿಖರವಾದ ದೂರದ ಆಧಾರದ ಮೇಲೆ ಟೋಲ್ ಶುಲ್ಕವನ್ನು ಲೆಕ್ಕಹಾಕಲು ಸಾರಿಗೆ ಸಚಿವಾಲಯವು ಈ ವಿಧಾನವನ್ನು ಅಳವಡಿಸಿಕೊಂಡಿದೆ. ಟೋಲ್ ಪ್ಲಾಜಾಗಳಲ್ಲಿ ನಿಗದಿತ ಮೊತ್ತವನ್ನು ಪಾವತಿಸುವ ಬದಲು, ಪ್ರತಿ ಕಿಲೋಮೀಟರ್‌ಗೆ ಚಾಲಕರಿಂದ ಶುಲ್ಕ ವಿಧಿಸಲಾಗುತ್ತದೆ. ಪೈಲಟ್ ಯೋಜನೆಯಾಗಿ, ಈ ವ್ಯವಸ್ಥೆಯನ್ನು ಈಗಾಗಲೇ ಎರಡು ಪ್ರಮುಖ ಹೆದ್ದಾರಿಗಳಲ್ಲಿ ಜಾರಿಗೊಳಿಸಲಾಗಿದೆ.

ರಾಷ್ಟ್ರೀಯ ಹೆದ್ದಾರಿ 275, ಕರ್ನಾಟಕದಲ್ಲಿ ಬೆಂಗಳೂರು ಮತ್ತು ಮೈಸೂರನ್ನು ಸಂಪರ್ಕಿಸುತ್ತದೆ ಮತ್ತು ರಾಷ್ಟ್ರೀಯ ಹೆದ್ದಾರಿ 709, ಹರಿಯಾಣದಲ್ಲಿ ಪಾಣಿಪತ್ ಮತ್ತು ಹಿಸಾರ್ ಅನ್ನು ಸಂಪರ್ಕಿಸುತ್ತದೆ. ಭಾರತದಲ್ಲಿನ ಎಲ್ಲಾ ಹೆದ್ದಾರಿಗಳಲ್ಲಿ ಶೀಘ್ರದಲ್ಲೇ ಜಿಎನ್‌ಎಸ್‌ಎಸ್ ವ್ಯವಸ್ಥೆಯನ್ನು ಜಾರಿಗೊಳಿಸಲಾಗುವುದು ಎಂದು ಕೇಂದ್ರ ಸಚಿವ ನಿತಿನ್ ಗಡ್ಕರಿ ಘೋಷಿಸಿದ್ದಾರೆ. ಉಪಗ್ರಹ ತಂತ್ರಜ್ಞಾನದ ಮೂಲಕ ಬಳಕೆದಾರರ ಖಾತೆಯಿಂದ ಟೋಲ್ ಶುಲ್ಕವನ್ನು ಸ್ವಯಂಚಾಲಿತವಾಗಿ ಕಡಿತಗೊಳಿಸಲಾಗುವುದರಿಂದ, ಈ ಭವಿಷ್ಯದ ವಿಧಾನವು ಟೋಲ್ ಪ್ಲಾಜಾಗಳ ಅಗತ್ಯವನ್ನು ನಿವಾರಿಸುತ್ತದೆ.

ಈ ಬೆಳವಣಿಗೆಯು ಟೋಲ್ ಸಂಗ್ರಹವನ್ನು ಸುವ್ಯವಸ್ಥಿತಗೊಳಿಸುವ ಗುರಿಯನ್ನು ಹೊಂದಿದೆ, ಆದರೆ ಟೋಲ್ ಪ್ಲಾಜಾಗಳಲ್ಲಿ ಸಂಚಾರ ಅಡಚಣೆಗಳನ್ನು ಕಡಿಮೆ ಮಾಡುತ್ತದೆ ಮತ್ತು ಪ್ರಯಾಣಿಕರಿಗೆ ಸಮಯ ಮತ್ತು ಇಂಧನವನ್ನು ಉಳಿಸುತ್ತದೆ ಎಂದು ಭರವಸೆ ನೀಡುತ್ತದೆ. ಈ ನಿಯಮದ ಪ್ರಸ್ತುತ ವ್ಯಾಪ್ತಿಯು ಸೀಮಿತವಾಗಿದ್ದರೂ, ದೇಶಾದ್ಯಂತ ಅದರ ವಿಸ್ತರಣೆಯು ರಸ್ತೆ ಪ್ರಯಾಣದಲ್ಲಿ ಕ್ರಾಂತಿಯನ್ನುಂಟು ಮಾಡಬಹುದು.

ನಟ ಅಲ್ಲು ಅರ್ಜುನ್‌ಗೆ ಜಾಮೀನು ನೀಡಿ ಕೋರ್ಟ್ ಆದೇಶ

ಹೈದರಾಬಾದ್, ಜ.3– ಸಂಧ್ಯಾ ಥಿಯೇಟರ್‌ನಲ್ಲಿ ಕಾಲ್ತುಳಿತ ಪ್ರಕರಣಕ್ಕೆ ಸಂಬಂಧಿಸಿದಂತೆ ನಟ ಅಲ್ಲು ಅರ್ಜುನ್ ಅವರಿಗೆ ನಾಂಪಲ್ಲಿ ಕೋರ್ಟ್ ಜಾಮೀನು ನೀಡಿ ಆದೇಶ ಹೊರಡಿಸಿದೆ.



ಅಲ್ಲು ಅರ್ಜುನ್ ಬಂಧನವಾದ ದಿನವೇ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿ ಮಧ್ಯಂತರ ಜಾಮೀನು ಪಡೆಯಲಾಗಿತ್ತು. ಅಂತೆಯೇ ನಾಂಪಲ್ಲಿ ಕೋರ್ಟ್‌ನಲ್ಲಿ ಸಹ ಅರ್ಜಿ ಹಾಕಲಾಗಿತ್ತು. ಈ ಆದೇಶವನ್ನು ಕೋರ್ಟ್ ಇಂದಿಗೆ (ಜ.3) ಕ್ಕೆ ಕಾಯ್ದಿರಿಸಿತ್ತು. ಪುಷ್ಪ 2 ಚಿತ್ರದ ಪ್ರೀಮಿಯರ್ ಪ್ರದರ್ಶನದ ವೇಳೆ ಹೈದರಾಬಾದ್ ನ ಸಂಧ್ಯಾ ಥಿಯೇಟರ್ ನಲ್ಲಿ ಕಾಲ್ತುಳಿತ ಸಂಭವಿಸಿ ರೇವತಿ (39)ಎಂಬ ಮಹಿಳೆ ಸಾವನ್ನಪ್ಪಿದ್ದರು. ಪ್ರಕರಣ ಸಂಬಂಧ ಥಿಯೆಟರ್ ಮಾಲೀಕ, ಇಬ್ಬರು ವ್ಯವಸ್ಥಾಪಕರು ಸೇರಿದಂತೆ ಮೂವರನ್ನು ಪೊಲೀಸರು ಬಂಧಿಸಿದ್ದರು.

ಇಂದು ಕೇಂದ್ರ ಸಚಿವ ಕುಮಾರಸ್ವಾಮಿ ನೇತೃತ್ವದಲ್ಲಿ ಜೆಡಿಎಸ್ ಮುಖಂಡರ ಸಭೆ

ಮೈಸೂರು, ಜ.3– ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆ ಸಂಬಂಧ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅಧ್ಯಕ್ಷತೆಯಲ್ಲಿ ಶನಿವಾರ ಮೈಸೂರಿನಲ್ಲಿ ಜೆಡಿಎಸ್ ಮುಖಂಡರ ಸಭೆ ನಡೆಯಲಿದೆ.



ದಟ್ಟಗಳ್ಳಿಯಲ್ಲಿರುವ ಸಾ.ರಾ.ಕನ್ವೆನ್ಷನಲ್ ಹಾಲ್‌ನಲ್ಲಿ ಶನಿವಾರ ಸಂಜೆ 4ಕ್ಕೆ ನಡೆಯಲಿರುವ ಸಭೆಯಲ್ಲಿ ನಗರ ಮತ್ತು ಜಿಲ್ಲಾಧ್ಯಕ್ಷರುಗಳು, ಪಕ್ಷದ ಕೋರ್ ಕಮಿಟಿ ಅಧ್ಯಕ್ಷ ಜಿ.ಟಿ.ದೇವೇಗೌಡರು, ಕಾರ್ಯಾಧ್ಯಕ್ಷ ಸಾ.ರಾ.ಮಹೇಶ್, ವಿಧಾನ ಪರಿಷತ್ ಸದಸ್ಯರಾದ ಸಿ.ಎನ್.ಮುಂಜೇಗೌಡ, ಕೆ.ವಿವೇಕಾನಂದ ಸೇರಿದಂತೆ ಪಕ್ಷದ ಸ್ಥಳೀಯ ಪದಾಧಿಕಾರಿಗಳು ಭಾಗವಹಿಸಲಿದ್ದಾರೆ ಎಂದು ಪಕ್ಷದ ಮುಖಂಡರು ತಿಳಿಸಿದ್ದಾರೆ.

ಬಸ್ ಪ್ರಯಾಣ ದರ ಏರಿಕೆ ಖಂಡಿಸಿ ಕರ್ನಾಟಕ ಸೇನಾಪಡೆ ಪ್ರತಿಭಟನೆ



ಬಸ್ ಪ್ರಯಾಣ ದರ ಏರಿಕೆ ಖಂಡಿಸಿ ಕರ್ನಾಟಕ ಸೇನಾ ಪಡೆ ಪ್ರತಿಭಟಿಸಿತು.

ಮೈಸೂರು, ಜ.3(ಎಸ್‌ಬಿಡಿ)– ಕೆಎಸ್‌ಆರ್‌ಟಿಸಿ ಬಸ್ ಪ್ರಯಾಣ ದರ ಏರಿಕೆಯನ್ನು ಖಂಡಿಸಿ ಕರ್ನಾಟಕ ಸೇನಾ ಪಡೆ ಶುಕ್ರವಾರ ಪ್ರತಿಭಟಿಸಿತು.

ಹಳೇ ಡಿಸಿ ಕಚೇರಿ ಬಳಿ ಜಮಾಯಿಸಿದ ಸಂಘಟನೆಯ ಸದಸ್ಯರು, ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದಲೂ ಬೆಲೆ ಏರಿಕೆ ಮೂಲಕ ಕನ್ನಡಿಗರ ರಕ್ತ ಹೀರುತ್ತಿದೆ. 20 ರೂ. ಇದ್ದ ಸ್ಟ್ಯಾಂಪ್ ಪೇಪರ್ ಬೆಲೆಯನ್ನು 100 ರೂ. ಏರಿಸಿದ್ದಾರೆ. ನೋಂದಣಿ ದರ, ಆಸ್ತಿ ತೆರಿಗೆ ಏರಿಕೆಯಾಗಿದೆ. ವಿದ್ಯುತ್ ದರ, ಜನನ ಮರಣ ಪ್ರಮಾಣ ಪತ್ರ ಶುಲ್ಕ, ಹಾಲಿನ ದರ ಏರಿಕೆ ಸಾಲದೆಂಬಂತೆ ಇದೀಗ ಸಾರಿಗೆ ಬಸ್ ಪ್ರಯಾಣ ದರವನ್ನು ಶೇ.15ರಷ್ಟು ಹೆಚ್ಚಿಸಿರುವುದು ಖಂಡನೀಯ ಎಂದು ಘೋಷಣೆ ಕೂಗಿದರು.

ಈ ಕಾಂಗ್ರೆಸ್ ಅಧಿಕಾರಕ್ಕೆ ಬರಲು ಉಚಿತ ಭಾಗ್ಯಗಳನ್ನು ಘೋಷಣೆ ಮಾಡಿ, ಈಗ ರಾಜ್ಯವನ್ನು ಆರ್ಥಿಕ ಸಂಕಷ್ಟಕ್ಕೆ ದೂಡುತ್ತಿದೆ. ಹೀಗೆಯೇ ಮುಂದುವರೆದರೆ ರಾಜ್ಯದಲ್ಲಿ ಆರ್ಥಿಕ ದೀವಾಳಿಯಾಗಲಿದೆ. ಬಜೆಟ್ ಮಂಡನೆಯಲ್ಲಿ ದಾಖಲೆ ಮಾಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಬೆಲೆ ಏರಿಕೆಯಿಂದ ಸಾಮಾನ್ಯ ಜನ ಸಂಕಷ್ಟಕ್ಕೆ ಸಿಲುಕುತ್ತಾರೆಂದು ತಿಳಿದಿಲ್ಲವೇ?. ಸರಿಯಾಗಿ ವೇತನ ಸಿಗದೆ ಸಾರಿಗೆ ನೌಕರರು ಪ್ರತಿಭಟನೆ ಎಚ್ಚರಿಕೆ ನೀಡಿದ್ದರಿಂದ ಬೆಲೆ ಏರಿಕೆ ಮೂಲಕ ಸಾರ್ವಜನಿಕರಿಗೆ ಬರೆ ಎಳೆಯುತ್ತಿದ್ದಾರೆ. ಕೂಡಲೇ ಮುಖ್ಯಮಂತ್ರಿಗಳು ಪ್ರಯಾಣ ದರ ಏರಿಕೆ ನಿರ್ಧಾರವನ್ನು ಹಿಂಪಡೆಯಬೇಕು ಎಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಕರ್ನಾಟಕ ಸೇನಾ ಪಡೆ ಜಿಲ್ಲಾಧ್ಯಕ್ಷ ತೇಜೇಶ್ ಲೋಕೇಶ್ ಗೌಡ, ಕೃಷ್ಣಪ್ಪ, ಪ್ರಭುಶಂಕರ್, ಹನು ಮಂತಯ್ಯ, ಪ್ರಭಾಕರ್, ನೇಹ, ಸಿಂಧು ವಳ್ಳಿ ಶಿವಕುಮಾರ್, ಭಾಗ್ಯಮ್ಮ, ಶಾಂತ ರಾಜೇಅರಸ್, ನಾಗರಾಜು, ಶುಭಶ್ರೀ, ಕೃಷ್ಣೇಗೌಡ, ಸ್ವಾಮಿಗೌಡ, ರಘು ಅರಸ್, ಪ್ರದೀಪ್, ದರ್ಶನ್‌ಗೌಡ, ಚಂದ್ರಶೇಖರ್, ತ್ಯಾಗರಾಜ್, ಬಸವರಾಜು, ಗುರುಮಲ್ಲಪ್ಪ, ರಾಮಕೃಷ್ಣೇಗೌಡ ಮತ್ತಿತರರು ಭಾಗವಹಿಸಿದ್ದರು.

ದ್ವಿಚಕ್ರ ವಾಹನ ಕಳವು: ಇಬ್ಬರ ಬಂಧನ

ಮೈಸೂರು, ಜ. 3(ಆರ್‌ಕೆ)– ಇಬ್ಬರು ಖದೀಮರನ್ನು ಬಂಧಿಸಿರುವ ದೇವರಾಜ ಠಾಣೆ ಪೊಲೀಸರು, 2,05,000 ರೂ. ಮೌಲ್ಯದ 3 ದ್ವಿಚಕ್ರ ವಾಹನಗಳನ್ನು ವಶಪಡಿಸಿಕೊಂಡಿದ್ದಾರೆ.

2024ರ ಡಿಸೆಂಬರ್ 27ರಂದು ರಾತ್ರಿ 7.30 ಗಂಟೆ ವೇಳೆಯಲ್ಲಿ ಸಯ್ಯಾಜಿ ರಾವ್ ರಸ್ತೆಯ ಕಾವೇರಿ ಎಂಪೋರಿಯಂ ಬಳಿ ನಿಂತಿದ್ದ ಹೋಂಡಾ ಆಕ್ಟೀವಾ ಸ್ಕೂಟರ್ ಕಳವು ಮಾಡಿದ್ದ ಓರ್ವನನ್ನು ಡಿಸೆಂಬರ್ 28ರಂದು ರೈಲು ನಿಲ್ದಾಣ ಸರ್ಕಲ್ ಬಳಿ ಬಂಧಿಸಿ ಆತನಿಂದ 1,05,000 ರೂ. ಬೆಲೆಯ ದ್ವಿಚಕ್ರ ವಾಹನವನ್ನು ವಶಪಡಿಸಿಕೊಳ್ಳಲಾಗಿದೆ.

ಡಿಸೆಂಬರ್ 28ರಂದು ಪುರಭವನ ಬಳಿ ಮತ್ತೋರ್ವ ಆರೋಪಿಯನ್ನು ಬಂಧಿಸಿದ ದೇವರಾಜ ಠಾಣೆ ಪೊಲೀಸರು, 1 ಲಕ್ಷ ರೂ. ಮೌಲ್ಯದ 2 ದ್ವಿಚಕ್ರ ವಾಹನಗಳನ್ನು ವಶಪಡಿಸಿಕೊಂಡಿದ್ದಾರೆ. ದೇವರಾಜ ಉಪವಿಭಾಗದ ಎಸಿಪಿ ಶಾಂತಮಲ್ಲಪ್ಪ ನೇತೃತ್ವದಲ್ಲಿ ನಡೆದ ಪತ್ತೆ ಕಾರ್ಯದಲ್ಲಿ ಇನ್‌ಸ್ಪೆಕ್ಟರ್ ಟಿ.ಬಿ. ಶಿವಕುಮಾರ್, ಸಬ್‌ಇನ್‌ಸ್ಪೆಕ್ಟರ್‌ಗಳಾದ ಜೈಕೀರ್ತಿ, ಪ್ರಭು, ಸಿಬ್ಬಂದಿಗಳಾದ ಪಿ.ಆರ್. ಶಶಿಕಾಂತ, ಆರ್.ಆರ್. ಮಂಜುನಾಥ, ರವಿಕುಮಾರ್, ಕೆಂಡಗಣ್ಣಸ್ವಾಮಿ, ಶಶಿಕಿರಣ್, ಶಿವರಾಜು, ಸುನಿಲ್‌ಕುಮಾರ್ ಹಾಗೂ ಇತರರು ಪತ್ತೆ ಕಾರ್ಯದಲ್ಲಿ ಪಾಲ್ಗೊಂಡಿದ್ದರು.

ಸರಸ್ವತಿಪುರಂ ಪೊಲೀಸರಿಂದ ಇಬ್ಬರು ಖದೀಮರ ಬಂಧನ

18.9 ಲಕ್ಷ ರೂ. ಮೌಲ್ಯದ ಆಭರಣ, ಒಂದು ಕಾರು ವಶಕ್ಕೆ

ಮೈಸೂರು, ಜ. 3(ಆರ್‌ಕೆ)– ಇಬ್ಬರು ಮನೆ ಕಳ್ಳರನ್ನು ಬಂಧಿಸಿರುವ ಮೈಸೂರಿನ ಸರಸ್ವತಿಪುರಂ ಠಾಣೆ ಪೊಲೀಸರು, 18,09,200 ರೂ. ಮೌಲ್ಯದ ಚಿನ್ನ, ಬೆಳ್ಳಿ ಆಭರಣ ಹಾಗೂ 1 ಕಾರನ್ನು ವಶಪಡಿಸಿಕೊಂಡಿದ್ದಾರೆ.

2024ರ ಡಿಸೆಂಬರ್ 9 ಮತ್ತು 23ರಂದು ಸಂಶಯಾಸ್ಪದವಾಗಿ ಓಡಾಡುತ್ತಿದ್ದ ಇಬ್ಬರನ್ನು ಠಾಣೆಗೆ ಕರೆತಂದು ವಿಚಾರಣೆ ಮಾಡಿದಾಗ ಚನ್ನಪಟ್ಟಣ ಪೂರ್ವ ಠಾಣೆ ಮತ್ತು ಚಿಂತಾಮಣಿ ಟೌನ್ ಠಾಣೆ ವ್ಯಾಪ್ತಿಯ ಮನೆಯಲ್ಲಿ ಚಿನ್ನ, ಬೆಳ್ಳಿ ಆಭರಣ ಹಾಗೂ ಮಾರುತಿ ಕಾರು ಕಳವು ಮಾಡಿರುವುದು ತಿಳಿಯಿತು.

ಆರೋಪಿಗಳಿಂದ 18,09,200 ರೂ. ಬೆಲೆಬಾಳುವ 240 ಗ್ರಾಂ ಚಿನ್ನಾಭರಣ, 1 ಕೆಜಿ 146 ಗ್ರಾಂ ಬೆಳ್ಳಿ ಪದಾರ್ಥ ಹಾಗೂ 1 ಮಾರುತಿ 800 ಕಾರನ್ನು ವಶಪಡಿಸಿಕೊಳ್ಳಲಾಗಿದೆ. ವಿಜಯನಗರ ಉಪವಿಭಾಗದ ಎಸಿಪಿ ಗಜೇಂದ್ರ ಪ್ರಸಾದ್ ನೇತೃತ್ವದಲ್ಲಿ ನಡೆದ ಪತ್ತೆ ಕಾರ್ಯದಲ್ಲಿ ಸರಸ್ವತಿಪುರಂ ಠಾಣೆ ಇನ್‌ಸ್ಪೆಕ್ಟರ್ ಜಿ. ಪುರುಷೋತ್ತಮ್, ಸಬ್‌ಇನ್‌ಸ್ಪೆಕ್ಟರ್‌ಗಳಾದ ಟಿ.ಎಸ್. ಮಹೇಂದ್ರ ಎಸ್.ಎಸ್. ಲತಾ, ಸಿಬ್ಬಂದಿಗಳಾದ ನಾಗರಾಜು, ಬಸವರಾಜೇ ಅರಸ್, ಮೋಹನ್ ಕುಮಾರ್, ರಕ್ಷಿತಕುಮಾರ್, ಚಂದ್ರಶೇಖರ, ಕುಮಾರ ಪಾಲ್ಗೊಂಡಿದ್ದರು.


ಕುವೆಂಪು ಅವರಿಗೆ ತಳವರ್ಗದವರ ಬಗ್ಗೆ ಅಪಾರ ಕಾಳಜಿ ಇತ್ತು

ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ.ಲೋಕನಾಥ್ ಅಭಿಮತ

ಮೈಸೂರು,ಜ.3(ಎಂಟಿವೈ)– ಕನ್ನಡ ಸಾಹಿತ್ಯ ಲೋಕದ ಮೇರು ವ್ಯಕ್ತಿತ್ವ ರಾಷ್ಟ್ರಕವಿ ಕುವೆಂಪು ಸಮಾಜದ ತಳವರ್ಗದವರ ಬಗ್ಗೆ ಅಪಾರವಾದ ಕಾಳಜಿ ಇಟ್ಟುಕೊಂಡಿದ್ದರು ಎಂದು ಮೈಸೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಶೇಷಾದ್ರಿಪುರಂ ಕಾಲೇಜಿನಲ್ಲಿ ಸಾಕ್ಷಿ ಪ್ರತಿಷ್ಠಾನ ತುಮಕೂರು, ನ್ಯಾಶುವೇಲ್ ಕನ್ನಡ ಕೂಟ ಅಮೆರಿಕ, ಈಳ್ಗೇವು ಪ್ರಕಾಶನ ಬೆಂಗಳೂರು ಸಹಯೋಗದಲ್ಲಿ ಆಯೋಜಿಸಿದ್ದ 'ಕನ್ನಡ ಸಾಹಿತ್ಯ ಶ್ರೀ ಸಾಮಾನ್ಯ ಚಿಂತನೆ' ಅಂತಾರಾಷ್ಟ್ರೀಯ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದ ಅವರು, ಕುವೆಂಪು ಅವರು ಶ್ರೀಸಾಮಾನ್ಯನ ಚಿಂತನೆಯನ್ನು ತಮ್ಮ ಎಲ್ಲಾ ಸಾಹಿತ್ಯ ಕೃತಿಗಳಲ್ಲಿ ಅನಾವರಣಗೊಳಿಸಿದ್ದಾರೆ. ಪ್ರಾಚೀನ ಕನ್ನಡ ಸಾಹಿತ್ಯವನ್ನು ಚೆನ್ನಾಗಿ ತಿಳಿದುಕೊಂಡು ಜನಸಾಮಾನ್ಯರಿಗೆ ಸಾಹಿತ್ಯವನ್ನು ರಚಿಸಿದರು. ಶ್ರೀಸಾಮಾನ್ಯನ ಬಗೆಗೆ ಅಪಾರವಾದ ಕಾಳಜಿ ಇದ್ದ ಕಾರಣಕ್ಕೆ ಮಲೆಗಳಲ್ಲಿ ಮದುಮಗಳು ಮತ್ತು ಶೂದ್ರ ತಪಸ್ವಿ ಜಲಗಾರದಂತಹ ಸಾಹಿತ್ಯ ಕೃತಿಗಳು ಬರಲು ಕಾರಣವಾಯಿತು. ಇದಕ್ಕೆ ಬಹುಮುಖ್ಯ ಕಾರಣ, ಮಾತೃಭಾಷೆ ಕನ್ನಡದೊಂದಿಗೆ ಇಂಗ್ಲಿಷ್ ಭಾಷೆ ಗೊತ್ತಿದ್ದ ಕಾರಣಕ್ಕೆ ಇವರು ವಿಶ್ವಕವಿಯಾಗಲು ಕಾರಣವಾಯಿತು ಎಂದು ಹೇಳಿದರು.

ವಿಚಾರ ಸಂಕಿರಣದ ಅಂಗವಾಗಿ ಹೊರತಂದ 'ಕನ್ನಡ ಸಾಹಿತ್ಯ: ಶ್ರೀಸಾಮಾನ್ಯನ ಚಿಂತನೆ' ಪುಸ್ತಕವನ್ನು ಕನ್ನಡ ಶಾಸ್ತ್ರೀಯ ಅಧ್ಯಯನ ಸಂಸ್ಥೆ ನಿರ್ದೇಶಕ ಪ್ರೊ.ಎನ್.ಎಂ. ತಳವಾರ್ ಬಿಡುಗಡೆ ಮಾಡಿದರು. ನಾಡೋಜ ವೊಡೇಪಿ ಕೃಷ್ಣ ಮತ್ತು ಪ್ರೊ.ಚಿತ್ತಯ್ಯ ಪೂಜಾರ್ ಅವರಿಗೆ ಈಳ್ಗೇವು ಪ್ರಕಾಶನ ಬೆಂಗಳೂರು ಇವರ ವತಿಯಿಂದ ಕನ್ನಡ ಸಾಹಿತ್ಯ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಡಾ.ಪ್ರಿಯಾಂಕ ಕೃತಿ ಕುರಿತು ಮಾತನಾಡಿದರು. ಮುಖ್ಯ ಅತಿಥಿಗಳಾಗಿ ಪ್ರೊ.ವೈ ಎಸ್ ಸಿದ್ದೇಗೌಡ ಭಾಗವಹಿಸಿದ್ದರು. ಶೇಷಾದ್ರಿಪುರಂ ಪದವಿ ಕಾಲೇಜಿನ ಪ್ರಾಂಶುಪಾಲರಾದ ಡಾ. ಸೌಮ್ಯಾ ಈರಪ್ಪ ಅಧ್ಯಕ್ಷತೆ ವಹಿಸಿದರು. ವಿಚಾರ ಸಂಕಿರಣ ಸಂಚಾಲಕರಾದ ಡಾ.ಚಿತ್ರಲಿಂಗಯ್ಯ ಸ್ವಾಗತಿಸಿದರು. ಪ್ರೊ. ಸಿದ್ದಪ್ಪ ವಂದಿಸಿದರು, ಡಾ.ಸಿ.ಪಿ.ಲಾವಣ್ಯ ಕಾರ್ಯಕ್ರಮ ನಿರೂಪಿಸಿದರು.



ಮೈಸೂರಿನ ಶೇಷಾದ್ರಿಪುರಂ ಕಾಲೇಜಿನಲ್ಲಿ ನಡೆದ ಕನ್ನಡ ಸಾಹಿತ್ಯ: ಶ್ರೀಸಾಮಾನ್ಯನ ಚಿಂತನೆ ಪುಸ್ತಕವನ್ನು ಪ್ರೊ.ಎನ್.ಎಂ. ತಳವಾರ್ ಬಿಡುಗಡೆ ಮಾಡಿದರು.

ನಿವೃತ್ತ ವೈದ್ಯರಿಗೆ ಸನ್ಮಾನ



ಸೇವಾ ನಿವೃತ್ತಿ ಹೊಂದಿದ ಮೈಸೂರಿನ ಚಲುವಾಂಬ ತಾಯಿ ಮತ್ತು ಮಕ್ಕಳ ಆಸ್ಪತ್ರೆಯ ಅಧೀಕ್ಷಕ ಹಾಗೂ ಮಕ್ಕಳ ತಜ್ಞ ಡಾ.ರಾಜೇಂದ್ರಕುಮಾರ್ ಅವರನ್ನು ಪೇಪರ್ ಮಂಜು ನಾಡನಹಳ್ಳಿ, ನಿವೃತ್ತ ಬ್ಯಾಂಕ್ ವ್ಯವಸ್ಥಾಪಕ ವೈ.ಎಂ.ರಂಗಸ್ವಾಮಿ, ಲೋಕೇಶ್ವರ, ನಿವೃತ್ತ ಪ್ರೊಫೆಸರ್ ಬಸವರಾಜು ಮತ್ತು ಪಂಡಿತ್ ನಾಗರಾಜು ಸನ್ಮಾನಿಸಿದರು.

ಸಮಗ್ರ ಔಷಧ ಸೇವೆ ಒದಗಿಸುತ್ತಿರುವ ನಿಮ್ಹಾನ್ಸ್ ಸಂಸ್ಥೆ ದೇಶಕ್ಕೆ ಮಾದರಿ

ರಾಷ್ಟ್ರಪತಿ ದ್ರೌಪದಿ ಮುರ್ಮು ಪ್ರಶಂಸೆ



ಬೆಂಗಳೂರು, ಜ.3– ಸಮಗ್ರ ಔಷಧ ಸೇವೆ ಒದಗಿಸುತ್ತಿರುವ ನಿಮ್ಹಾನ್ಸ್ ಸಂಸ್ಥೆ ದೇಶಕ್ಕೇ ಮಾದರಿಯಾಗಿದೆ. ಮಾನಸಿಕ ಆರೋಗ್ಯ ಮತ್ತು ಯೋಗಕ್ಷೇಮದ ಪ್ರಚಾರದಲ್ಲಿ ಯೋಗ ಮತ್ತು ಆಯುರ್ವೇದದ ಅಪ್ಲಿಕೇಶನ್ ಅನುಕರಣೆ ಯೋಗ್ಯವಾಗಿದೆ ಎಂದು ರಾಷ್ಟ್ರಪತಿ ಶ್ರೀಮತಿ ದ್ರೌಪದಿ ಮುರ್ಮು ಹೇಳಿದ್ದಾರೆ.

ನಿಮ್ಹಾನ್ಸ್ (ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಮೆಂಟಲ್ ಹೆಲ್ತ್ ಅಂಡ್ ನ್ಯೂರೋ ಸೈನ್ಸ್)ನ ಇಂಟಿಗ್ರೇಟಿವ್ ಮೆಡಿಸಿನ್ ಸೇವೆಗಳು ಮಾನಸಿಕ ಆರೋಗ್ಯ ಮತ್ತು ಯೋಗಕ್ಷೇಮದ ಪ್ರಚಾರದಲ್ಲಿ ಯೋಗ ಮತ್ತು ಆಯುರ್ವೇದದ ಅನ್ವಯಗಳನ್ನು ಪರೀಕ್ಷಿಸಲು ಮತ್ತು ಮನೋವೈದ್ಯಕೀಯ ಮತ್ತು ನರವೈಜ್ಞಾನಿಕ ಅಸ್ವಸ್ಥತೆಗಳ ಚಿಕಿತ್ಸೆಯಲ್ಲಿ ಎಲ್ಲರಿಗೂ ಮಾದರಿಯಾಗಿದೆ ಎಂದರು.

ಬೆಂಗಳೂರಿನಲ್ಲಿರುವ ನಿಮ್ಹಾನ್ಸ್ ಸಂಸ್ಥೆಯ ಸುವರ್ಣ ಮಹೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಅದಕ್ಕೂ ಮುನ್ನ ಸೈಕಿಯಾಟ್ರಿ ಸ್ಪೆಷಾಲಿಟಿ ಬ್ಲಾಕ್, ಸೆಂಟ್ರಲ್ ಲ್ಯಾಬೋರೇಟರಿ ಕಾಂಪ್ಲೆಕ್ಸ್ ಮತ್ತು ಭೀಮಾ ಹಾಸ್ಟೆಲ್ ಉದ್ಘಾಟಿಸಿದರು. ಅತ್ಯಾಧುನಿಕ ರೋಗ ನಿರ್ಣಯ ಸೌಲಭ್ಯಗಳನ್ನು ಸುಧಾರಿತ 3ಟಿ ಎಂಆರ್‌ಐ ಸ್ಕ್ಯಾನರ್ ಮತ್ತು ಡಿಎಸ್‌ಎ ವ್ಯವಸ್ಥೆಯನ್ನು ರಾಷ್ಟ್ರಕ್ಕೆ ಸಮರ್ಪಿಸಿದರು.

ಪ್ರಪಂಚದಲ್ಲಿ ನಾವು ಗ್ರಹಿಸುವ ಎಲ್ಲದರ ಮೂಲದಲ್ಲಿ ಮನಸ್ಸು ಇದೆ ಎಂದು ನಮ್ಮ ಧರ್ಮಗ್ರಂಥಗಳು ಹೇಳುತ್ತವೆ. ಮುಂದಿನ ವರ್ಷಗಳಲ್ಲಿ ಮಾನಸಿಕ ಆರೋಗ್ಯ ಪ್ರಚಾರಗಳ ಮೇಲೆ ಹೆಚ್ಚಿನ ಗಮನವು ಇನ್ನಷ್ಟು ಮಹತ್ವದ್ದಾಗಲಿದೆ ಎಂದು ಹೇಳಿದರು. ಹಿಂದಿನ ಕಾಲದಲ್ಲಿ ಸಮಾಜಗಳಲ್ಲಿ ಮಾನಸಿಕ ಆರೋಗ್ಯದ ಸಮಸ್ಯೆಗಳು ಮತ್ತು ಕಾಳಜಿಗಳು ಸಾಕಷ್ಟು ಗಮನವನ್ನು ಪಡೆದಿರಲಿಲ್ಲ. ಇತ್ತೀಚಿನ ದಿನಗಳಲ್ಲಿ ಮಾನಸಿಕ ಆರೋಗ್ಯದ ಬಗ್ಗೆ ಜಾಗೃತಿ ಮೂಡುತ್ತಿದೆ ಎಂದರು.

ಮಾನಸಿಕ ಕಾಯಿಲೆಗಳಿಗೆ ಸಂಬಂಧಿಸಿದ ಅವೈಜ್ಞಾನಿಕ ನಂಬಿಕೆ ಮತ್ತು ಕಳಂಕವು ಹಿಂದಿನ ವಿಷಯವಾಗಿದ್ದು, ವಿವಿಧ ಕಾಯಿಲೆಗಳಿಂದ ಬಳಲುತ್ತಿರುವವರಿಗೆ ಸಹಾಯ ಪಡೆಯಲು ಸುಲಭವಾಗುತ್ತದೆ ಎಂದರು. ಇದು ಸ್ವಾಗತಾರ್ಹ ಬೆಳವಣಿಗೆಯಾಗಿದೆ. ಏಕೆಂದರೆ ವಿವಿಧ ಮಾನಸಿಕ ಆರೋಗ್ಯ ಸಮಸ್ಯೆಗಳು ಪ್ರಪಂಚದಾದ್ಯಂತ ಸಾಂಕ್ರಾಮಿಕ ಪ್ರಮಾಣವನ್ನು ತೆಗೆದುಕೊಳ್ಳುತ್ತಿವೆ. ನಿರ್ದಿಷ್ಟವಾಗಿ ಕೋವಿಡ್ 19 ಸಾಂಕ್ರಾಮಿಕವು ಅಂತಹ ಕಾಳಜಿಗಳ ಹೆಚ್ಚಳಕ್ಕೆ ಕಾರಣವಾಯಿತು ಎಂದರು.

ಇಂದಿನ ವೃತ್ತಿಪರರು ಹೆಚ್ಚಿನ ಒತ್ತಡವನ್ನು ಎದುರಿಸುತ್ತಾರೆ. ಹೆಚ್ಚಿನ ಸಂಖ್ಯೆಯ ವೃದ್ಧರು ಸಾಮಾಜಿಕ ಸವಾಲುಗಳಿಂದ ಒಂಟಿತನದಿಂದ ಬಳಲುತ್ತಿದ್ದಾರೆ. ಮನೆಯ ಜವಾಬ್ದಾರಿಗಳು ಮತ್ತು ಕುಟುಂಬದ ಆರೈಕೆಯ ಹೊರೆಯನ್ನು ಹೊತ್ತಿರುವ ಮಹಿಳೆಯರು ಸಾಮಾನ್ಯವಾಗಿ ಹಲವಾರು ಮಾನಸಿಕ ಕಾಯಿಲೆಗಳಿಗೆ ಗುರಿಯಾಗುತ್ತಾರೆ. ಆದಾಗ್ಯೂ, ಹೆಚ್ಚುತ್ತಿರುವ ಜಾಗೃತಿಯು ರೋಗಿಗಳಿಗೆ ತೆರೆದುಕೊಳ್ಳಲು ಮತ್ತು ಹಂಚಿಕೊಳ್ಳಲು ಸಾಧ್ಯವಾಗುವಂತೆ ಮಾಡಿದೆ ಎಂಬುದನ್ನು ಗಮನಿಸುವುದು ನಿಜವಾಗಿಯೂ ಹರ್ಷದಾಯಕವಾಗಿದೆ ಎಂದರು.

ಅತ್ಯುತ್ತಮ ಆಸ್ಪತ್ರೆಗಳಲ್ಲಿ ಒಂದು: ಜಗತ್ತಿನ ಅತ್ಯುತ್ತಮ 200 ಆಸ್ಪತ್ರೆಗಳಲ್ಲಿ ನಿಮ್ಹಾನ್ಸ್ ಕೂಡ ಒಂದಾಗಿದೆ. ಈ ಆಸ್ಪತ್ರೆಯಲ್ಲಿ ವಾರ್ಷಿಕ 7 ಲಕ್ಷ ಜನ ಚಿಕಿತ್ಸೆ ಪಡೆಯುತ್ತಾರೆ. ಹೊಸದಾಗಿ ಸಹ ಕೆಲವು ಸೇವೆಗಳನ್ನು ಆಸ್ಪತ್ರೆಯಲ್ಲಿ ಆರಂಭಿಸಲಾಗಿದೆ ಎಂದು ನಿಮ್ಹಾನ್ಸ್ ಅಧ್ಯಕ್ಷರೂ ಆಗಿರುವ ಕೇಂದ್ರ ಸಚಿವ ಜೆ.ಪಿ. ನಡ್ಡಾ ಹೇಳಿದರು.

ನಮ್ಮ ಸರ್ಕಾರ ಹಲವು ಆರೋಗ್ಯ ಯೋಜನೆಗಳನ್ನು ಜಾರಿಗೆ ತಂದಿದೆ. ಆರೋಗ್ಯ ಸೇವೆಗಳಲ್ಲಿ ನಿಮ್ಹಾನ್ಸ್ ಸಂಸ್ಥೆ ತನಗೆ ತಾನೇ ಸಾಟಿಯಾಗಿದೆ. 50 ವರ್ಷದ ಈ ಸುದೀರ್ಘ ಯಾನ, ತ್ಯಾಗ, ಸೇವೆ ಸ್ಮರಣೀಯವಾಗಿದೆ. ಮುಂದಿನ 25 ವರ್ಷಕ್ಕೆ ನಿಮ್ಹಾನ್ಸ್ ಅಭಿವೃದ್ಧಿಯ ನಕ್ಷೆ ತಯಾರಿಸಿ ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಿಮ್ಹಾನ್ಸ್ ಕೊಡುಗೆ ಜಾಗತಿಕವಾಗಿ ಗುರುತಿಸಲ್ಪಟ್ಟಿದೆ: ಮಾನಸಿಕ ಆರೋಗ್ಯ ವಿಚಾರದಲ್ಲಿ ನಿಮ್ಹಾನ್ಸ್ ಕೊಡುಗೆಯನ್ನು ಜಾಗತಿಕವಾಗಿ ಗುರುತಿಸಲಾಗಿದೆ. ರಾಜ್ಯದಾದ್ಯಂತ ಮಾನಸಿಕ ಆರೋಗ್ಯ ಸೇವೆಯನ್ನು ಕಲ್ಪಿಸಲು ಸರ್ಕಾರ ನಿಮ್ಹಾನ್ಸ್ ನೊಂದಿಗೆ ಜೊತೆಗೂಡಿ ಕಾರ್ಯ ನಿರ್ವಹಿಸುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಟೆಲಿಮನಸ್ (ರಾಷ್ಟ್ರೀಯ ಟೆಲಿ ಮಾನಸಿಕ ಆರೋಗ್ಯ) ಕಾರ್ಯಕ್ರಮ ಅತ್ಯಂತ ಯಶಸ್ವಿಯಾಗಿದೆ. ರಾಜ್ಯದಲ್ಲಿ ಮಾನಸಿಕ ಆರೋಗ್ಯದ ಅಗತ್ಯವಿರುವ ಸುಮಾರು 17 ಲಕ್ಷ ಜನರು ಇದರ ಪ್ರಯೋಜನ ಪಡೆದಿದ್ದಾರೆ. ನಿಮ್ಹಾನ್ಸ್ ಸಂಸ್ಥೆಯ ಕಾರ್ಯ ನಿರ್ವಹಣೆಗಾಗಿ ಪ್ರತಿ ವರ್ಷ 137 ಕೋಟಿ ರೂಪಾಯಿಗಳನ್ನು ಒದಗಿಸುವ ಮೂಲಕ ರಾಜ್ಯ ಸರ್ಕಾರ ತನ್ನ ಬದ್ಧತೆಯನ್ನು ನಿರೂಪಿಸಿದೆ ಎಂದು ತಿಳಿಸಿದರು.

ರಾಷ್ಟ್ರೀಯ ಮಹತ್ವವನ್ನು ಹೊಂದಿರುವ ನಿಮ್ಹಾನ್ಸ್ ತನ್ನ ಐದು ದಶಕದ ಪಯಣದಲ್ಲಿ ಆರೈಕೆ, ಸಂಶೋಧನೆ ಮತ್ತು ಶಿಕ್ಷಣ ವಲಯದಲ್ಲಿ ವಿಶ್ವದ ಗಮನ ಸೆಳೆದಿದೆ. ಮಾನಸಿಕ ಆರೋಗ್ಯ ಕುರಿತಾದ ನೀತಿ ನಿರೂಪಣೆಯಲ್ಲಿ ನಿಮ್ಹಾನ್ಸ್ ಕೊಡುಗೆಯನ್ನು ಜಾಗತಿಕವಾಗಿ ಗುರುತಿಸಲಾಗಿರುವುದು ಹೆಮ್ಮೆಯ ಸಂಗತಿ ಎಂದು ಶ್ಲಾಘಿಸಿದರು.

ರಾಷ್ಟ್ರಕವಿ ಕುವೆಂಪು ಮೈಸೂರು ವಿಶ್ವವಿದ್ಯಾನಿಲಯದ ಅಸ್ಮಿತೆ

ಕುಲಪತಿ ಪ್ರೊ.ಲೋಕನಾಥ್ ಬಣ್ಣನೆ



ಮೈಸೂರಿನ ಮಾನಸ ಗಂಗೋತ್ರಿಯ ಮಹಾದ್ವಾರದ ಕುವೆಂಪು ಪ್ರತಿಮೆ ಬಳಿ ಶುಕ್ರವಾರ ರಾಷ್ಟ್ರಕವಿ ಕುವೆಂಪು ಜನ್ಮದಿನ ಕಾರ್ಯಕ್ರಮ ಆಯೋಜಿಸಲಾಗಿತ್ತು

ಮೈಸೂರು, ಜ.3(ಬಿಎಲ್‌ವೈ)– ಮಾನಸ ಗಂಗೋತ್ರಿ ಸ್ಥಾಪನೆಗೆ ಕಾರಣಕರ್ತರಾದ ರಾಷ್ಟ್ರಕವಿ ಕುವೆಂಪು ಅವರು ಮೈಸೂರು ವಿಶ್ವವಿದ್ಯಾನಿಲಯದ ಅಸ್ಮಿತೆ ಎಂದು ಕುಲಪತಿ ಪ್ರೊ.ಎನ್.ಕೆ. ಲೋಕನಾಥ್ ಅಭಿಪ್ರಾಯಪಟ್ಟರು.

ನಗರದ ಮಾನಸ ಗಂಗೋತ್ರಿ ಮಹಾದ್ವಾರದ ಕುವೆಂಪು ಪ್ರತಿಮೆ ಮುಂದೆ ಆಯೋಜಿಸಿದ್ದ ಕುವೆಂಪು ಜನ್ಮ ದಿನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಮಾನಸ ಗಂಗೋತ್ರಿ ಕ್ಯಾಂಪಸ್ ನಿರ್ಮಾಣವಾಗಲು ಕುವೆಂಪು ಅವರೇ ಕಾರಣಕರ್ತರು. ಈ ಹಿನ್ನೆಲೆಯಲ್ಲಿ ಕುವೆಂಪು ಅವರನ್ನು ಎಂದೂ ಮರೆಯಲು ಸಾಧ್ಯವಿಲ್ಲ. ಕುವೆಂಪು ಅವರು ಮೈಸೂರು ವಿಶ್ವವಿದ್ಯಾನಿಲಯದ ಅಸ್ಮಿತೆ ಎಂದು ಹೇಳಿದರು.

ಮಾಜಿ ಪ್ರಧಾನಿ ಡಾ.ಮನಮೋಹನ್ ಸಿಂಗ್ ಅವರ ನಿಧನದ ಹಿನ್ನೆಲೆಯಲ್ಲಿ ಡಿಸೆಂಬರ್ 26 ರಂದು ಕುವೆಂಪು ಅವರ ಜನ್ಮದಿನ ಕಾರ್ಯಕ್ರಮ ಆಯೋಜಿಸಲು ಸಾಧ್ಯವಾಗಲಿಲ್ಲ. ಈ ಹಿನ್ನೆಲೆಯಲ್ಲಿ ಜನವರಿ 8 ರಂದು ಮೈಸೂರು ವಿಶ್ವವಿದ್ಯಾನಿಲಯದ ವತಿಯಿಂದ ಕುವೆಂಪು ಜನ್ಮ ದಿನ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ತಿಳಿಸಿದರು.

ಕನ್ನಡ ಸಾಹಿತ್ಯಕ್ಕೆ ಕುವೆಂಪು ಅವರ ಕೊಡುಗೆ ಅಪಾರವಾಗಿದೆ. ಈ ಮೂಲಕ ಕನ್ನಡವನ್ನು ಎತ್ತರಕ್ಕೆ ಕೊಂಡೊಯ್ದು, ವಿಶ್ವಮಾನವ ಸಂದೇಶ ನೀಡಿದ್ದಾರೆ. ಇಂತಹ ಮಹನೀಯರ ಜನ್ಮ ದಿನವನ್ನು ಅರ್ಥಪೂರ್ಣವಾಗಿ ಆಚರಿಸಬೇಕು. ಕುವೆಂಪು ಅವರ ತತ್ವಾದರ್ಶ ಪಾಲಿಸುವ ಮೂಲಕ ಗೌರವ ಸಲ್ಲಿಸಬೇಕು ಎಂದು ಪ್ರೊ.ಲೋಕನಾಥ್ ಸಲಹೆ ನೀಡಿದರು.

ಈ ವೇಳೆ ಮಾತನಾಡಿದ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ಕುವೆಂಪು ಅವರು ಕರ್ನಾಟಕಕ್ಕೆ ಮಾತ್ರ ಸೀಮಿತವಾಗದೆ ಇಡೀ ವಿಶ್ವಕ್ಕೆ ಮಾದರಿಯಾದ ವಿಶ್ವಕವಿಯಾಗಿದ್ದಾರೆ. ತಮ್ಮ ಸಾಹಿತ್ಯದಲ್ಲಿ ಕುವೆಂಪು ಅವರು ವೈಚಾರಿಕತೆಯನ್ನು ಪ್ರತಿಪಾದಿಸಿದ್ದು, ಅವರ ಸಾಹಿತ್ಯ ಸರ್ವಕಾಲಕ್ಕೂ ಪ್ರಸ್ತುತವಾಗಿದೆ. ಯುವ ಜನಾಂಗ ಕುವೆಂಪು ಅವರ ವಿಚಾರಧಾರೆಗಳನ್ನು ಅನುಸರಿಸಬೇಕು ಎಂದು ಸಲಹೆ ನೀಡಿದರು.

ಕುವೆಂಪು ಇರದಿದ್ದರೆ ಕನ್ನಡ ಸಾಹಿತ್ಯ ಇಷ್ಟೊಂದು ಶ್ರೀಮಂತವಾಗುತ್ತಿರಲಿಲ್ಲ ಎಂದು ಸಿಂಡಿಕೇಟ್ ಸದಸ್ಯ ಡಾ.ಸಿ.ಬಸವರಾಜು ಅಭಿಪ್ರಾಯಪಟ್ಟರು. ಕಥೆ, ಕವನ, ಕಾದಂಬರಿ, ಮಹಾಕಾವ್ಯ, ನಾಟಕ ಹೀಗೆ ಎಲ್ಲಾ ಪ್ರಕಾರಗಳಲ್ಲೂ ಕುವೆಂಪು ಅವರು ಸಾಹಿತ್ಯ ಕೃಷಿ ಮಾಡಿದ್ದಾರೆ. ಇದರಿಂದ ದೇಶದ ಅತ್ಯುನ್ನತ ಪ್ರಶಸ್ತಿಗಳಿಗೆ ಕುವೆಂಪು ಅವರು ಭಾಜನರಾಗಿದ್ದಾರೆ ಎಂದು ಮತ್ತೊಬ್ಬ ಸಿಂಡಿಕೇಟ್ ಸದಸ್ಯೆ ಡಾ.ಜೆ.ಶಿಲ್ಪಾ ಹೇಳಿದರು.

ವಿಶ್ವಮಾನವ ಮೈಸೂರು ವಿಶ್ವವಿದ್ಯಾನಿಲಯದ ನೌಕರರ ವೇದಿಕೆ ಹಾಗೂ ನವ ವಿಶ್ವಮಾನವ ಟ್ರಸ್ಟ್ ಸಂಯುಕ್ತವಾಗಿ ಈ ಕಾರ್ಯಕ್ರಮ ಆಯೋಜಿಸಿತ್ತು ಸಿಂಡಿಕೇಟ್ ಸದಸ್ಯ ಕ್ಯಾತನಹಳ್ಳಿ ಸಿ.ನಾಗರಾಜು, ಶಬ್ಬೀರ್ ಮುಸ್ತಾಫ, ಕೆ.ಗೋಕುಲ್ ಗೋವರ್ಧನ್, ಪರೀಕ್ಷಾಂಗ ಕುಲಸಚಿವ ಪ್ರೊ.ಎನ್.ನಾಗರಾಜು, ಹಣಕಾಸು ಅಧಿಕಾರಿ ಕೆ.ಎಸ್.ರೇಖಾ, ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಇತರರು ಈ ವೇಳೆ ಹಾಜರಿದ್ದರು.

ಮಂಗಳೂರಿನಲ್ಲಿ ಇಂದು ರಾಜ್ಯ ಮಟ್ಟದ ವಚನ ಸಾಹಿತ್ಯ ಸಮ್ಮೇಳನ

ಮೈಸೂರು, ಜ.3– ಮಂಗಳೂರಿನ ಕುದ್ಮಲ್ ರಂಗರಾವ್ ಪುರಭವನದಲ್ಲಿ ಅಕ್ಕಮಹಾದೇವಿ ಮಹಿಳಾ ಸಂಘದ ವತಿಯಿಂದ ಜ.4ರಂದು ರಾಜ್ಯಮಟ್ಟದ ವಚನ ಸಾಹಿತ್ಯ ಸಮ್ಮೇಳನ ನಡೆಯಲಿದೆ.

ಬೆಂಗಳೂರು ಬಸವಸಮಿತಿ ಅಧ್ಯಕ್ಷರಾದ ಡಾ.ಅರವಿಂದಜತ್ತಿ ಸಮ್ಮೇಳನಾಧ್ಯಕ್ಷರಾಗಿದ್ದು, ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ಮತ್ತು ಉಡುಪಿ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಪಾದರು ದಿವ್ಯಸಾನ್ನಿಧ್ಯ ವಹಿಸಲಿದ್ದಾರೆ.

ಈ ಸಂದರ್ಭದಲ್ಲಿ ನಡೆಯುತ್ತಿರುವ ವಚನ ಸಾಹಿತ್ಯ ಅವಲೋಕನ ವಿಚಾರಗೋಷ್ಠಿಯಲ್ಲಿ ಕಲ್ಯಾಣಕ್ರಾಂತಿ ಕಥನ ಎಂಬ ವಿಷಯಕ್ಕೆ ಸಂಬಂಧಿಸಿದಂತೆ ಶರಣು ವಿಶ್ವವಚನ ಫೌಂಡೇಷನ್ ಸಂಸ್ಥಾಪಕ ವಚನ ಕುಮಾರಸ್ವಾಮಿ ವಿಚಾರ ಮಂಡಿಸಲಿದ್ದಾರೆ ಎಂದು ಮಂಗಳೂರಿನ ಅಕ್ಕಮಹಾದೇವಿ ವೀರಶೈವ ಮಹಾಸಂಘದ ಅಧ್ಯಕ್ಷೆ ಸುಮಾ ಅರುಣ್ ಮಾನ್ವಿ ತಿಳಿಸಿದ್ದಾರೆ.

ಮೈಸೂರಲ್ಲಿ ಜ.14ರಿಂದ 19ರವರೆಗೆ 'ಬಹುರೂಪಿ' ರಾಷ್ಟ್ರೀಯ ನಾಟಕೋತ್ಸವ

ಅಗತ್ಯ ವ್ಯವಸ್ಥೆಗಳ ಮಾಡಿಕೊಳ್ಳಲು ಪೂರ್ವ ಸಿದ್ಧತೆ ಸಭೆಯಲ್ಲಿ ಸಮಾಲೋಚನೆ



ಮೈಸೂರು, ಜ.3(ಆರ್‌ಕೆ)–ಜನವರಿ 14ರಿಂದ 19ರವರೆಗೆ ಮೈಸೂರಿನ ಕರ್ನಾಟಕ ಕಲಾ ಮಂದಿರದಲ್ಲಿ 'ಬಹುರೂಪಿ' ರಾಷ್ಟ್ರೀಯ ನಾಟಕೋತ್ಸವ ನಡೆಯಲಿದೆ.



ಮೈಸೂರು ಅಪರ ಜಿಲ್ಲಾಧಿಕಾರಿ ಡಾ. ಪಿ.ಶಿವರಾಜು ಅವರು ಇಂದು ತಮ್ಮ ಕಚೇರಿ ಸಭಾಂಗಣದಲ್ಲಿ ಬಹುರೂಪಿ ನಾಟಕೋತ್ಸವ ಕುರಿತಂತೆ ಪೂರ್ವಭಾವಿ ಸಿದ್ಧತಾ ಸಭೆ ನಡೆಸಿ, ಸಂಬಂಧಪಟ್ಟ ಅಧಿಕಾರಿಗಳು ಸೂಕ್ತ ವ್ಯವಸ್ಥೆ ಕಲ್ಪಿಸಿ, ನಾಟಕೋತ್ಸವವನ್ನು ಯಶಸ್ವಿಗೊಳಿಸಬೇಕೆಂದು ನಿರ್ದೇಶನ ನೀಡಿದರು.

ಮೈಸೂರಿನ ದಸರಾ ಮಹೋತ್ಸವದಂತೆ ಸಾಂಸ್ಕೃತಿಕ ನಗರಿಯಲ್ಲಿ ನಡೆಯುವ 'ಬಹುರೂಪಿ'ಯನ್ನು ಯಶಸ್ವಿಗೊಳಿಸಿ ಸರ್ಕಾರ, ಮೈಸೂರಿಗರಿಗೆ ಹೆಮ್ಮೆ ತರಬೇಕಾಗಿರುವುದು ನಮ್ಮ ಜವಾಬ್ದಾರಿಯಾಗಿದೆ. ಕಲಾ ಮಂದಿರ, ರಂಗಾಯಣದ ಸ್ವಚ್ಛತೆ ಕಾಪಾಡುವುದು, ಕುಡಿಯುವ ನೀರು ಪೂರೈಕೆ, ಮೊಬೈಲ್ ಶೌಚಾಲಯ ವ್ಯವಸ್ಥೆಯನ್ನು ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಮಾಡಬೇಕು ಎಂದು ಅವರು ತಿಳಿಸಿದರು.

ಮೈಸೂರಿನ ಪ್ರಮುಖ ಸ್ಥಳಗಳಲ್ಲಿ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳನ್ನು ಡಿಜಿಟಲ್ ಸ್ಕ್ರೀನ್‌ಗಳ ಮೂಲಕ ಪ್ರಚಾರ ಮಾಡುವುದು, ನಾಟಕೋತ್ಸವಕ್ಕೆ ವಿದ್ಯುತ್ ಕಡಿತವಾಗದಂತೆ ಎಚ್ಚರ ವಹಿಸುವುದು, ಸಂಜೆ 6 ರಿಂದ ರಾತ್ರಿ 10 ಗಂಟೆವರೆಗೆ ನಗರದ ವಿವಿಧ ಬಡಾ ವಣೆಗಳಿಗೆ ಬಸ್ ಸೌಲಭ್ಯ, ಶಾಲಾ–ಕಾಲೇಜು ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ವ್ಯವಸ್ಥೆ ಮಾಡಬೇಕೆಂದೂ ಅವರು ಇದೇ ಸಂದರ್ಭ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಭೆಯಲ್ಲಿ ಉಪಸ್ಥಿತರಿದ್ದ ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು ಅವರು ರಂಗಾಯಣ ನಡೆದು ಬಂದ ಹಾದಿಯನ್ನು ಅವಲೋಕಿಸಿ, ಕಳೆದ 35 ವರ್ಷಗಳಿಂದ ರಂಗ ಚಟುವಟಿಕೆ ನಡೆಸುತ್ತಾ ಬಂದಿರುವ ಸಂಸ್ಥೆಯು ಈ ಬಾರಿ 6 ದಿನಗಳಲ್ಲಿ 24 ನಾಟಕ ಪ್ರದರ್ಶನಕ್ಕೆ ಉದ್ದೇಶಿಸಿದೆ ಎಂದರು. ಬೇರೆ ಬೇರೆ ಭಾಷೆಯ ನಾಟಕಗಳು ಹಾಗೂ ಮಕ್ಕಳಿಗಾಗಿ ಏಕ ಕಾಲದಲ್ಲಿ ಮಕ್ಕಳ ನಾಟಕಗಳು ಪ್ರದರ್ಶನಗೊಳ್ಳಲಿವೆ ಯಾದ್ದರಿಂದ ಸಂಬಂಧಿಸಿದ ಎಲ್ಲಾ ಇಲಾಖೆ ಅಧಿಕಾರಿಗಳು ಸಹಕರಿಸಬೇಕೆಂದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ಸುದರ್ಶನ್ ಮಾತನಾಡಿ, ಬಹುರೂಪಿ ನಾಟಕೋತ್ಸವಕ್ಕೆ ಆಗಮಿಸುವ ಅತಿಥಿಗಳು, ಕಲಾತಂಡಗಳು ವಿದ್ವಾಂಸರನ್ನು ಕರೆತರಲು 4 ಮಿನಿ ಬಸ್‌ಗಳು ಹಾಗೂ 3 ಟಾಟಾ ಸುಮೊ ವಾಹನಗಳನ್ನು ಒದಗಿಸಬೇಕು. ಗಣ್ಯರ ವಾಸ್ತವ್ಯಕ್ಕಾಗಿ ವಸತಿ ಗೃಹಗಳ ವ್ಯವಸ್ಥೆ ಮಾಡಲಾಗುವುದು. ಹಾಗೆಯೇ ಪುಸ್ತಕ ಹಾಗೂ ಇತರೆ ಪದಾರ್ಥಗಳ ಮಾರಾಟಕ್ಕೆ ಮಳಿಗೆಗಳನ್ನು ತೆರೆಯಲಾಗುವುದು ಎಂದು ತಿಳಿಸಿದರು. ಸಭೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನಸ್ವಾಮಿ, ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಜವರೇಗೌಡ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಾಯಕ ನಿರ್ದೇಶಕ ಟಿ.ಕೆ.ಹರೀಶ್ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ದೇಶ - ವಿದೇಶ

ಕ್ಯಾಲಿಫೋರ್ನಿಯಾದಲ್ಲಿ ವಾಣಿಜ್ಯ ಕಟ್ಟಡಕ್ಕೆ ಲಘು ವಿಮಾನ ಡಿಕ್ಕಿ; ಇಬ್ಬರು ಸಾವು

ಕ್ಯಾಲಿಫೋರ್ನಿಯಾ: ದಕ್ಷಿಣ ಕ್ಯಾಲಿಫೋರ್ನಿಯಾದಲ್ಲಿನ ವಾಣಿಜ್ಯ ಕಟ್ಟಡವೊಂದಕ್ಕೆ ಲಘು ವಿಮಾನ ಡಿಕ್ಕಿಯಾಗಿ ಇಬ್ಬರು ಮೃತಪಟ್ಟು, 18 ಮಂದಿ ಗಾಯಗೊಂಡಿದ್ದಾರೆ.

ಲಾಸ್ ಏಂಜಲೀಸ್‌ನಿಂದ ಆಗ್ನೇಯಕ್ಕೆ ಸುಮಾರು 40 ಕಿ.ಮೀ ದೂರದಲ್ಲಿರುವ ಫುಲ್ಲೆರ್ಟನ್ ಮುನಿಸಿಪಲ್ ವಿಮಾನ ನಿಲ್ದಾಣದ ಸಮೀಪ ಗುರುವಾರ ಮಧ್ಯಾಹ್ನ 2ರ ಸುಮಾರಿಗೆ ವಿಮಾನವು ಕಟ್ಟಡಕ್ಕೆ ಡಿಕ್ಕಿಯಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಇದರಿಂದ ಪೀಠೋಪಕರಣ ತಯಾರಿಕಾ ಕಂಪನಿಯ ಕಟ್ಟಡಕ್ಕೆ ಭಾರೀ ಹಾನಿಯಾಗಿದೆ.

ಅಪಘಾತದ ಸಮಯದಲ್ಲಿ ಸುಮಾರು 200 ಜನರು ಪೀಠೋಪಕರಣ ತಯಾರಿಕಾ ಘಟಕದೊಳಗೆ ಕೆಲಸ ಮಾಡುತ್ತಿದ್ದರು ಎಂದು ಪೊಲೀಸ್ ಅಧಿಕಾರಿಗಳು ಮಾಹಿತಿ ಹಂಚಿಕೊಂಡಿದ್ದಾರೆ. ಸಣ್ಣ ವಿಮಾನವು ಈ ಬೃಹತ್ ಕಟ್ಟಡದ ಮೇಲ್ಛಾವಣಿಗೆ ಡಿಕ್ಕಿ ಹೊಡೆದು ಕನಿಷ್ಠ 18 ಜನರು ಗಾಯಗೊಂಡಿದ್ದಾರೆ. ಗಾಯಗೊಂಡವರಲ್ಲಿ ಹತ್ತು ಮಂದಿಯನ್ನು ಅಗತ್ಯ ಚಿಕಿತ್ಸೆಗಾಗಿ ಆಸ್ಪತ್ರೆಗೆ ರವಾನಿಸಲಾಗಿದೆ. ಉಳಿದ ಎಂಟು ಮಂದಿ ಅಪಘಾತ ಸ್ಥಳದಲ್ಲಿ ಚಿಕಿತ್ಸೆ ಪಡೆದು ಶೀಘ್ರದಲ್ಲೇ ಬಿಡುಗಡೆಗೊಂಡಿದ್ದಾರೆ.ಅಪಘಾತಕ್ಕೀಡಾದ ವಿಮಾನ 'Van's RV-10' ಎಂದು ತಿಳಿಸಿರುವ ಫೆಡರಲ್ ವಿಮಾನಯಾನ ಅಧಿಕಾರಿಗಳು, ಘಟನೆ ಕುರಿತು ರಾಷ್ಟ್ರೀಯ ಸಾರಿಗೆ ಸುರಕ್ಷತಾ ಮಂಡಳಿಯೊಂದಿಗೆ ತನಿಖೆ ನಡೆಸುವುದಾಗಿ ಹೇಳಿದೆ.

ಡಿಎಂಕೆ ಸಚಿವ ದುರೈ ಮುರುಗನ್ ನಿವಾಸ ಸೇರಿ ಹಲವು ಸ್ಥಳಗಳ ಮೇಲೆ ಇಡಿ ದಾಳಿ

ವೆಲ್ಲೂರು: ತಮಿಳು ನಾಡಿನ ಜಲಸಂಪನ್ಮೂಲ ಸಚಿವ ದುರೈ ಮುರುಗನ್ ಅವರ ಕಟಪಾಡಿಯ ಗಾಂಧಿನಗರದಲ್ಲಿರುವ ನಿವಾಸ ಸೇರಿದಂತೆ ವೆಲ್ಲೂರಿನ ನಾಲ್ಕು ಸ್ಥಳಗಳಲ್ಲಿ ಶುಕ್ರವಾರ ಜಾರಿ ನಿರ್ದೇಶನಾಲಯ ದಾಳಿ ನಡೆಸಿದೆ. ದುರೈ ಮುರುಗನ್ ಅವರ ಪುತ್ರ ವೆಲ್ಲೂರ್ ಸಂಸದ ಕತಿರ್ ಆನಂದ್ ಅಧ್ಯಕ್ಷತೆಯ ಕಿಂಗ್ಸ್ಟನ್ ಕಾಲೇಜು ಮತ್ತು ಪಲ್ಲಿಕೊಂಡನ್ ಮೂಲದ ಉದ್ಯಮಿ ಪೂಂಚೋಲೈ ಶ್ರೀನಿವಾಸನ್ ಮತ್ತು ಅವರ ಸಂಬಂಧಿಕರಿಗೆ ಸೇರಿದ ಆಸ್ತಿಗಳ ಮೇಲೂ ದಾಳಿ ನಡೆಸಲಾಗಿದೆ.



ಇಂದು ಮುಂಜಾನೆ ಆರಂಭವಾದ ದಾಳಿ ತನಿಖೆಯ ಭಾಗವಾಗಿದೆ. ತಪಾಸಣೆ ವೇಳೆ ಸಚಿವ ದುರೈ ಮುರುಗನ್ ಮತ್ತು ಸಂಸದ ಕತೀರ್ ಆನಂದ್ ಇಬ್ಬರೂ ವೆಲ್ಲೂರಿನಲ್ಲಿ ಇರಲಿಲ್ಲ ಎಂದು ಮೂಲಗಳು ಖಚಿತಪಡಿಸಿವೆ. ದುರೈ ಮುರುಗನ್ ಮತ್ತು ಅವರ ಕುಟುಂಬಕ್ಕೆ ಸಂಬಂಧಿಸಿದ ಆಸ್ತಿಗಳ ಮೇಲೆ ಇಡಿ ದಾಳಿ ನಡೆಸುತ್ತಿರುವುದು ಇದೇ ಮೊದಲಲ್ಲ. 2019ರ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ, ಡಿಎಂಕೆ ಪ್ರಧಾನ ಕಾರ್ಯದರ್ಶಿ ದುರೈ ಮುರುಗನ್ ಅವರ ಪುತ್ರ ಕತೀರ್ ಆನಂದ್ ಅವರು ವೆಲ್ಲೂರು ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಿದ್ದರು.

ಧಾರ್ಮಿಕ ಮೆರವಣಿಗೆಯೆಡೆಗೆ ನುಗ್ಗಿದ ಎಸ್‌ಯುವಿ ಕಾರು

ಜೈಪುರ: ರಾಜಸ್ಥಾನದ ಜೈಪುರದಲ್ಲಿ ಧಾರ್ಮಿಕ ಮೆರವಣಿಗೆ ನಡೆಯುತ್ತಿದ್ದ ಪ್ರದೇಶಕ್ಕೆ ಎಸ್‌ಯುವಿ ಕಾರು ನುಗ್ಗಿದ ಪರಿಣಾಮ ನಾಲ್ವರು ಗಾಯಗೊಂಡಿದ್ದಾರೆ. ಘಟನೆಯಿಂದ ಕೋಪಗೊಂಡ ಜನರು ವಾಹನವನ್ನು ಧ್ವಂಸಗೊಳಿಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ರಾಜಪಾರ್ಕ್ ಪ್ರದೇಶದ ಪಂಚವಟಿ ಸರ್ಕಲ್ ಬಳಿ ಗುರುವಾರ ರಾತ್ರಿ ಸಿಖ್ ಸಮುದಾಯದ ಸದಸ್ಯರು ಕೀರ್ತನೆ ನಡೆಸುತ್ತಿದ್ದಾಗ ಈ ಘಟನೆ ನಡೆದಿದ್ದು, ಅಪ್ರಾಪ್ತ ಚಾಲಕನನ್ನು ಪೊಲೀಸರು ಬಂಧಿಸಿದ್ದಾರೆ. ಪೊಲೀಸರ ಪ್ರಕಾರ, ಕಾರಿನ ವಿಂಡ್‌ಶೀಲ್ಡ್‌ನಲ್ಲಿ ಎಂಎಲ್‌ಎ ಸ್ಟಿಕ್ಕರ್ ಅಂಟಿಸಲಾಗಿದೆ, ಅದನ್ನು ಪರಿಶೀಲಿಸಲಾಗುತ್ತಿದೆ.

ಸ್ಥಳದಲ್ಲಿ ನಿಂತಿದ್ದ ಪೊಲೀಸರು ಎಸ್‌ಯುವಿಯನ್ನು ನಿಲ್ಲಿಸುವಂತೆ ಸೂಚಿಸಿದರು ಆದರೆ ಚಾಲಕ ವೇಗವನ್ನು ಹೆಚ್ಚಿಸಿದ ಎಂದು ಎಸಿಪಿ ಲಕ್ಷ್ಮಿ ಸುತಾರ್ ಹೇಳಿದ್ದಾರೆ. ಜನರಿಗೆ ಡಿಕ್ಕಿ ಹೊಡೆದರೂ ಚಾಲಕ ಕಾರನ್ನು ನಿಲ್ಲಿಸಲಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

ಜನಸಂದಣಿಯಿಂದ ಸುಮಾರು 100 ಮೀಟರ್ ಹಿಂದೆ ಕಾರನ್ನು ನಿಲ್ಲಿಸಲಾಯಿತು. ನಾಲ್ವರು ಹುಡುಗರು ಇಳಿದು ಓಡಲು ಪ್ರಾರಂಭಿಸಿದರು, ಆದರೆ ಜನರು ಚಾಲಕನನ್ನು ಹಿಡಿದರು. ಕಾರಿನಲ್ಲಿದ್ದ ಇತರ ಮೂವರು ಯುವಕರು ತಪ್ಪಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಮಕ್ಕಳು ಸೇರಿ 12 ಜನರನ್ನು ಕೊಂದು ತಲೆಗೆ ಗುಂಡು ಹಾರಿಸಿಕೊಂಡ ಬಂದೂಕುಧಾರಿ

ಪೊಡ್ಗೊರಿಕಾ: ಮಾಂಟೆನೆಗ್ರೊದಲ್ಲಿ ಇಬ್ಬರು ಮಕ್ಕಳು ಸೇರಿದಂತೆ ಕನಿಷ್ಠ 12 ಜನರನ್ನು ಭೀಕರವಾಗಿ ಗುಂಡಿಕ್ಕಿ ಕೊಂದ ನಂತರ ಆತ ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದು ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ.

ಪಶ್ಚಿಮ ಪಟ್ಟಣ ಸೆಟಿಂಜೆಯಲ್ಲಿ ಬುಧವಾರ ಬಾರ್‌ವೊಂದರಲ್ಲಿ ನಡೆದ ಜಗಳದ ನಂತರ ನಡೆದ ಈ ಗುಂಡಿನ ದಾಳಿಯಲ್ಲಿ ಕನಿಷ್ಠ ನಾಲ್ವರು ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಗುಂಡು ಹಾರಿಸಿದ ವ್ಯಕ್ತಿಯನ್ನು 45 ವರ್ಷದ ಅಕೊ ಮಾರ್ಟಿನೊವಿಕ್ ಎಂದು ಗುರುತಿಸಲಾಗಿದ್ದು, ಬಾರ್ ಮಾಲೀಕ, ಬಾರ್ ಮಾಲೀಕನ ಮಕ್ಕಳು ಮತ್ತು ಅವರ ಕುಟುಂಬ ಸದಸ್ಯರನ್ನು ಹತ್ಯೆ ಮಾಡಲಾಗಿದೆ ಎಂದು ಗೃಹ ಸಚಿವ ಡ್ಯಾನಿಲೊ ಸರಾನೊವಿಕ್ ತಿಳಿಸಿದ್ದಾರೆ.

ಹಿಂಸಾಚಾರದ ನಂತರ ಪರಾರಿಯಾಗಿದ್ದ ದಾಳಿಕೋರನನ್ನು ಪತ್ತೆ ಹಚ್ಚಿದ ಪೊಲೀಸರು ಆತನನ್ನು ಸುತ್ತುವರೆದಿದ್ದರು. ಈ ಸಂದರ್ಭದಲ್ಲಿ ಆತ ತಲೆಗೆ ಗುಂಡು ಹಾರಿಸಿಕೊಂಡು ಆತ ಮೃತಪಟ್ಟಿದ್ದಾನೆ ಎಂದು ಸರನೋವಿಕ್ ಹೇಳಿದರು. ಇಡೀ ದಿನ ಬಾರ್‌ನಲ್ಲಿದ್ದ ಮಾರ್ಟಿನೊವಿಕ್ ಅಲ್ಲಿ ಜಗಳ ಆರಂಭಿಸಿದ್ದ. ನಂತರ ಮನೆಗೆ ಹೋಗಿ ಬಂದೂಕು ತಂದು ಸಂಜೆ 5.30 ಸುಮಾರಿಗೆ ಗುಂಡು ಹಾರಿಸಿ ನಾಗರಿಕರನ್ನು ಹತ್ಯೆ ಮಾಡಿದ್ದಾನೆ ಎಂದು ಪೊಲೀಸ್ ಆಯುಕ್ತ ಲಾಜರ್ ಸೆಪನೊವಿಕ್ ಮಾಹಿತಿ ನೀಡಿದರು.

ದೆಹಲಿಯಲ್ಲಿ ದಟ್ಟವಾದ ಮಂಜು: 100ಕ್ಕೂ ಹೆಚ್ಚು ವಿಮಾನ ಹಾರಾಟ ವಿಳಂಬ

ನವದೆಹಲಿ: ಶುಕ್ರವಾರ ಬೆಳಗ್ಗೆ ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ದಟ್ಟವಾದ ಮಂಜು ಆವರಿಸಿದ್ದು, ನಗರವು ಶೀತ ಅಲೆಯಿಂದ ಕಂಗೆಟ್ಟಿದೆ. ದೆಹಲಿಯಲ್ಲಿ ಬೆಳಗ್ಗೆ 5.30 ಕ್ಕೆ ತಾಪಮಾನವು 9.6 ಡಿಗ್ರಿ ಸೆಲ್ಸಿಯಸ್‌ಗೆ ಇಳಿದಿದೆ ಎಂದು ಭಾರತೀಯ ಹವಾಮಾನ ಇಲಾಖೆ ವರದಿ ಮಾಡಿದೆ.

ಈಗಾಗಲೇ ದೆಹಲಿ ಮತ್ತು ಸುತ್ತಮುತ್ತ ಭಾಗಗಳಲ್ಲಿ ಗಾಳಿಯ ಗುಣಮಟ್ಟ ಮತ್ತಷ್ಟು ಹದಗೆಟ್ಟಿದೆ. ಕೇಂದ್ರೀಯ ಮಾಲಿನ್ಯ ನಿಯಂತ್ರಣ ಮಂಡಳಿಯ ಪ್ರಕಾರ ದೆಹಲಿಯ ವಾಯು ಗುಣಮಟ್ಟ ಸೂಚ್ಯಂಕವು ಬೆಳಗ್ಗೆ 6 ಗಂಟೆಗೆ 348 ಕ್ಕೆ ದಾಖಲಾಗಿದ್ದು, ಅದನ್ನು 'ಅತ್ಯಂತ ಕಳಪೆ' ವಿಭಾಗದಲ್ಲಿ ಇರಿಸಿದೆ.

ದಟ್ಟವಾದ ಮಂಜು ದೆಹಲಿ ವಿಮಾನ ಕಾರ್ಯಾಚರಣೆಗೆ ಅಡ್ಡಿಪಡಿಸಿದೆ. ಹವಾಮಾನ ವೈಪರೀತ್ಯದಿಂದಾಗಿ ಶುಕ್ರವಾರ ಬೆಳಗ್ಗೆ ದೆಹಲಿ ವಿಮಾನ ನಿಲ್ದಾಣದಲ್ಲಿ 100ಕ್ಕೂ ಹೆಚ್ಚು ವಿಮಾನಗಳು ವಿಳಂಬಗೊಂಡಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಇಂದಿರಾಗಾಂಧಿ ಅಂತರಾಷ್ಟ್ರೀಯ ವಿಮಾನ ನಿಲ್ದಾಣವು ಪ್ರತಿದಿನ ಸುಮಾರು 1,300 ವಿಮಾನ ಸಂಚಾರಗಳನ್ನು ನಿರ್ವಹಿಸುತ್ತದೆ. ಉತ್ತರ ಪ್ರದೇಶದ ರಾಜಧಾನಿ ಲಕ್ನೋದಲ್ಲಿ, ತಾಪಮಾನವು 3.30 ಕ್ಕೆ 8 ಡಿಗ್ರಿ ಸೆಲ್ಸಿಯಸ್‌ಗೆ ಕುಸಿಯಿತು, ಸ್ಥಳೀಯ ಆಡಳಿತವು ನಿರಾಶ್ರಿತರಿಗೆ ತಾತ್ಕಾಲಿಕ ಆಶ್ರಯವನ್ನು ಸ್ಥಾಪಿಸಿದೆ, ಅಲಿಗಢ್‌ನಲ್ಲಿ ಜನರು ಈ ಸೌಲಭ್ಯಗಳಲ್ಲಿ ಆಶ್ರಯ ಪಡೆಯುತ್ತಿದ್ದಾರೆ.

ಮೈಸೂರು ಮಿತ್ರ ಶನಿವಾರ 4 ಜನವರಿ 2025

ಅಧ್ಯಕ್ಷರಾಗಿ ಎನ್.ಅಯ್ಯಪ್ಪ, ಉಪಾಧ್ಯಕ್ಷರಾಗಿ ಮೊಣ್ಣಪ್ಪ ಆಯ್ಕೆ



ಕೆದಮುಳ್ಳೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಕರಿನೆರವಂಡ ಎನ್.ಅಯ್ಯಪ್ಪ ಹಾಗೂ ಉಪಾಧ್ಯಕ್ಷ ಪಟ್ರಪಂಡ ಪ್ರಿನ್ಸ್ ಮೊಣ್ಣಪ್ಪ ಅವರನ್ನು ಅಭಿನಂದಿಸಲಾಯಿತು.

ವಿರಾಜಪೇಟೆ: ಸಮೀಪದ ಕೆದಮುಳ್ಳೂರು ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಕರಿನೆರವಂಡ ಎನ್.ಅಯ್ಯಪ್ಪ ಹಾಗೂ ಉಪಾಧ್ಯಕ್ಷರಾಗಿ ಪಟ್ರಪಂಡ ಪ್ರಿನ್ಸ್ ಮೊಣ್ಣಪ್ಪ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ನಿರ್ದೇಶಕರಾಗಿ ಕೋಡಿರ ಚಂಗಪ್ಪ ಮಾಳೇಟಿರ ಎನ್.ಉತ್ತಪ್ಪ, ಮುದ್ದಯ್ಯ, ಕರಿನೆರವಂಡ ಎ.ರತಿ, ಚಂಗಚಂಡ ಸಿ.ಅಕ್ಕಣಿ, ಮೀತಲ ತಂಡ ವೈ.ಅಲಿ, ಮಾಳೇಟಿರ ಎಸ್.ಸುಬ್ಬಯ್ಯ, ಹೆಚ್.ಆರ್.ಉಮೇಶ್, ಎಂ.ಎಂ.ಪರಮೇಶ್ವರ, ಮಾತಂಡ ಎಸ್.ಚಂಗಪ್ಪ ಅವರು ಅವಿರೋಧವಾಗಿ ಆಯ್ಕೆಯಾದರು.

ಅಧ್ಯಕ್ಷ ಅಯ್ಯಪ್ಪ ಮಾತನಾಡಿ, ಸಂಘದ ಏಳಿಗೆಗಾಗಿ ಸರ್ವಸದಸ್ಯರು ಸಹಕರಿಸಬೇಕು. ಸಂಘವನ್ನು ಮತ್ತಷ್ಟು ಉತ್ತಮವಾಗಿ ನಡೆಸುವ ಮೂಲಕ ಮಾದರಿಯಾಗಿಸಲು ಶ್ರಮಿಸುವುದಾಗಿ ತಿಳಿಸಿದರು. ಇದೇ ವೇಳೆ ನಿರ್ದೇಶಕರಾದ ಮಾಳೇಟಿರ ಪ್ರಶಾಂತ್ ಉತ್ತಪ್ಪ ಕೋಡಿರ ಚಂಗಪ್ಪ ಎಂ.ಎಂ.ಪರಮೇಶ್ವರ ಮತ್ತಿತರರು ಅಧ್ಯಕ್ಷ ಹಾಗೂ ಉಪಾಧ್ಯಕ್ಷರಿಗೆ ಶುಭ ಕೋರಿದರು. ಚುನಾವಣಾಧಿಕಾರಿಯಾಗಿ ಆಶಾ ಕರ್ತವ್ಯ ನಿರ್ವಹಿಸಿದರು. ಈ ಸಂದರ್ಭ ಕೇಂದ್ರ ಜಿಲ್ಲಾ ಸಹಕಾರ ಬ್ಯಾಂಕ್‌ನ ಅಧಿಕಾರಿ ಕೀರ್ತನ್, ಸಂಘದ ಕಾರ್ಯನಿರ್ವಾಹಣಾಧಿಕಾರಿ ಗೌತಮ್ ಮತ್ತಿತರರು ಉಪಸ್ಥಿತರಿದ್ದರು.

3 ಕಳವು ಪ್ರಕರಣ ಭೇದಿಸಿದ ಪೊಲೀಸರು

ಓರ್ವನ ಬಂಧನ; 50 ಸಾವಿರ ರೂ., 87 ಗ್ರಾಂ ಚಿನ್ನಾಭರಣ ವಶ



ನಾಗರಾಜು

ಮಡಿಕೇರಿ, ಜ.3–ನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಇತ್ತೀಚೆಗೆ ನಡೆದಿದ್ದ 3 ಕಳವು ಪ್ರಕರಣಗಳನ್ನು ಭೇದಿಸಿರುವ ಪೊಲೀಸರು ಓರ್ವನನ್ನು ಬಂಧಿಸಿ, 50 ಸಾವಿರ ರೂ., 87 ಗ್ರಾಂ ಚಿನ್ನಾಭರಣ ಹಾಗೂ 2 ಬೆಳ್ಳಿ ಚೈನ್‌ಗಳನ್ನು ವಶಪಡಿಸಿಕೊಂಡಿದ್ದಾರೆ.

ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲೂಕಿನ ಕೊಳಗಿ ಗ್ರಾಮದ ನಿವಾಸಿ ನಾಗ ರಾಜು(37) ಬಂಧಿತ ಆರೋಪಿ. ನಗರದ ಜಿ.ಟಿ.ವೃತ್ತದ ನಿವಾಸಿ ರಜನಿ ಅವರು ಡಿ.5ರಂದು ಮಗಳ ಶಾಲೆಗೆ ಸಾಂಸ್ಕೃತಿಕ ಕಾರ್ಯಕ್ರಮ ನೋಡಲು ತೆರಳಿದ್ದರು. ರಾತ್ರಿ ಮನೆಗೆ ಬಂದು ನೋಡಿದಾಗ ಬೀರುವಿನಲ್ಲಿದ್ದ 87 ಗ್ರಾಂ ಚಿನ್ನಾಭರಣ ಕಳವು ಮಾಡಲಾಗಿತ್ತು.

ಇಲ್ಲಿನ ಶಾಂತಿನಿಕೇತನ ನಿವಾಸಿ ವೆಲೆರಿಯನ್ ಲೋಬೋ ಅವರ ದಿನಸಿ ಅಂಗಡಿಯಿಂದ ಕಳೆದ ಮೇ 10ರಂದು ಅಂದಾಜು 1.10 ಲಕ್ಷ ರೂ. ಕಳವು ಮಾಡಲಾಗಿತ್ತು. ಜುಲೈ 28ರಂದು ಚಾಮುಂಡೇಶ್ವರಿ ನಗರದ ನಿವಾಸಿ ರಾಜಮ್ಮ ಮಹದೇವ ಅವರ ಮನೆಯಲ್ಲಿ 12 ಗ್ರಾಂ ಚಿನ್ನಾಭರಣ, 3 ಜೊತೆ ಬೆಳ್ಳಿ ಚೈನ್ ಹಾಗೂ 10 ಸಾವಿರ ರೂ. ಕಳವು ಮಾಡಲಾಗಿತ್ತು. ಈ 3 ಘಟನೆಗಳ ಸಂಬಂಧ ಮಡಿಕೇರಿ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಕಾರ್ಯಾಚರಣೆಯಲ್ಲಿ ಮಡಿಕೇರಿ ಅಪರಾಧ ಕೃತ್ಯಕ್ಕೆ ಸಂಬಂಧಿಸಿದಂತೆ ಮಾಹಿತಿ ಹಾಗೂ ಸಾಕ್ಷ್ಯಾಧಾರ ಕಲೆ ಹಾಕಿದ ಪೊಲೀಸರು ನಾಗರಾಜುನನ್ನು ಬಂಧಿಸಿದ್ದಾರೆ. ವಿಚಾರಣೆ ಸಂದರ್ಭ 3 ಕಳವು ಪ್ರಕರಣಗಳು ಪತ್ತೆಯಾಗಿವೆ ಎಂದು ಪೊಲೀಸರು ತಿಳಿಸಿದ್ದಾರೆ.

ಡಿವೈಎಸ್‌ಪಿ ಮಹೇಶ್ ಕುಮಾರ್, ನಗರ ವೃತ್ತ ನಿರೀಕ್ಷಕ ಪಿ.ಕೆ.ರಾಜು, ಠಾಣಾಧಿಕಾರಿ ಲೋಕೇಶ್, ರಾಧಾ, ಡಿಸಿಆರ್‌ಬಿ ಸಿಬ್ಬಂದಿ ಪಾಲ್ಗೊಂಡಿದ್ದರು. ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿ ಪತ್ತೆ ಕಾರ್ಯವನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಶ್ಲಾಘಿಸಿದ್ದಾರೆ.

ಮಾಲ್ದಾರೆ ದೇವಸ್ಥಾನದಲ್ಲಿ ಹುಂಡಿಗಳ ಕಳ್ಳತನಕ್ಕೆ ಯತ್ನ



ಮಾಲ್ದಾರೆ ಮುತ್ತಪ್ಪ ಹಾಗೂ ಐಶ್ವರ್ಯ ಗಣಪತಿ ದೇವಸ್ಥಾನಕ್ಕೆ ಸಿದ್ದಾಪುರ ಠಾಣೆ ಪೊಲೀಸರು ಭೇಟಿ ನೀಡಿ, ಪರಿಶೀಲಿಸಿದರು.

ಸಿದ್ದಾಪುರ, ಜ.3–ವಿರಾಜಪೇಟೆ ತಾಲೂಕಿನ ಮಾಲ್ದಾರೆ ಶ್ರೀ ಮುತ್ತಪ್ಪ ಹಾಗೂ ಐಶ್ವರ್ಯ ಗಣಪತಿ ದೇವಸ್ಥಾನದಲ್ಲಿ ಗುರುವಾರ ಮಧ್ಯರಾತ್ರಿ ಕಳ್ಳರು ಹುಂಡಿ ಕಳ್ಳತನಕ್ಕೆ ಯತ್ನಿಸಿದ್ದಾರೆ.

ಮಧ್ಯ ರಾತ್ರಿ ಸುಮಾರು 1.45ರಲ್ಲಿ ದೇವಸ್ಥಾನ ಆವರಣಕ್ಕೆ ನುಗ್ಗಿದ ಕಳ್ಳರು ಎರಡೂ ದೇವಸ್ಥಾನಗಳ ಹುಂಡಿಗಳನ್ನು ಎತ್ತಿಕೊಂಡು ಹೋಗುತ್ತಿದ್ದರು. ಈ ವೇಳೆ ಸಮೀಪದ ಮನೆ ನಾಯಿ ಬೊಗಳಿದೆ. ಇದರಿಂದ ಮನೆಯವರು ಹೊರಗೆ ಬಂದಿದ್ದಾರೆ. ತಕ್ಷಣ ಕಳ್ಳರು ಹುಂಡಿಗಳನ್ನು ರಸ್ತೆಯಲ್ಲೇ ಎಸೆದು ಸಮೀಪದ ಅರಣ್ಯದೊಳಗೆ ಓಡಿ ಹೋಗಿದ್ದಾರೆ.

ಮುತ್ತಪ್ಪ ಹಾಗೂ ಐಶ್ವರ್ಯ ಗಣಪತಿ ದೇವಸ್ಥಾನ ಆಡಳಿತ ಮಂಡಳಿ ಅಧ್ಯಕ್ಷ ಬೆಳ್ಳಿ ಯಪ್ಪ ನೀಡಿದ ದೂರಿನ ಹಿನ್ನೆಲೆ ಸಿದ್ದಾಪುರ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಇತ್ತೀಚೆಗೆ ಮಾಲ್ದಾರೆ ಸುತ್ತಮುತ್ತ ಕಳ್ಳತನ ಪ್ರಕರಣಗಳು ಹೆಚ್ಚಾಗುತ್ತಿದ್ದು, ಕೂಡಲೇ ಕಳ್ಳರನ್ನು ಪತ್ತೆಹಚ್ಚಿ ಬಂಧಿಸಬೇಕು ಎಂದು ಗ್ರಾಮ ಪಂಚಾಯಿತಿ ಉಪಾಧ್ಯಕ್ಷ ಕುಂಞಣ್ಣ ಒತ್ತಾಯಿಸಿದ್ದಾರೆ.

ಕಾಡಾನೆ ದಾಳಿ: ಸಹೋದರರಿಗೆ ಗಾಯ



ಕಾಡಾನೆ ದಾಳಿಯಿಂದ ಗಾಯಗೊಂಡ ಸಹೋದರರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವುದು.

ಗೋಣಿಕೊಪ್ಪ, ಜ.3–ಬೈಕ್‌ನಲ್ಲಿ ತೆರಳುತ್ತಿದ್ದಾಗ ಕಾಡಾನೆ ದಾಳಿ ನಡೆಸಿದ ಪರಿಣಾಮ ಸಹೋದರರು ಗಾಯಗೊಂಡಿರುವ ಘಟನೆ ಪೊನ್ನಂಪೇಟೆ ತಾಲೂಕಿನ ಹಳ್ಳಿಗಟ್ಟು ಬಳಿ ಶುಕ್ರವಾರ ಮುಂಜಾನೆ ನಡೆದಿದೆ.

ಮೊಹಮ್ಮದ್ ಫೈಜನ್ ಹಾಗೂ ಅಬುರ್ ಉವೈಸ್ ಗಾಯಗೊಂಡ ಸಹೋದರರು. ಇವರಿಗೆ ಗೋಣಿಕೊಪ್ಪ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ನೀಡಲಾಯಿತು. ಸಣ್ಣಪುಟ್ಟ ಗಾಯದಿಂದ ಇಬ್ಬರು ಪಾರಾಗಿದ್ದಾರೆ.

ಕಾರ್ಯನಿಮಿತ್ತ ಇಬ್ಬರು ಬೈಕ್‌ನಲ್ಲಿ ಪೊನ್ನಂಪೇಟೆ ಹಳ್ಳಿಗಟ್ಟುವಿನ ಸಿಇಟಿ ಕಾಲೇಜು ಮಾರ್ಗವಾಗಿ ತೆರಳುತ್ತಿದ್ದರು. ಈ ವೇಳೆ ಏಕಾಏಕಿ ಕಾಡಾನೆ ಮೇಲೆ ದಾಳಿ ನಡೆಸಿ, ಕಾಫಿ ತೋಟದೊಳಗೆ ಮರೆಯಾಗಿದೆ. ರಾಜ್ಯ ವನ್ಯಜೀವಿ ಮಂಡಳಿ ಸದಸ್ಯ ಸಂಕೇತ್ ಪೂವಯ್ಯ ಗೋಣಿಕೊಪ್ಪ ಆಸ್ಪತ್ರೆಗೆ ತೆರಳಿ ಗಾಯಾಳುಗಳ ಆರೋಗ್ಯ ವಿಚಾರಿಸಿದರು.

ವೈಜ್ಞಾನಿಕವಾಗಿ ಸ್ಥಳಾಂತರ: ಇದೇ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಸಂಕೇತ್ ಪೂವಯ್ಯ, ಕಳೆದ 20 ವರ್ಷಗಳಿಂದಲೂ ಜಿಲ್ಲೆಯಲ್ಲಿ ಕಾಡಾನೆ ಸಮಸ್ಯೆ ಇದೆ. ಕಾಡಾನೆಗಳನ್ನು ಕಾಡಿಗಟ್ಟುವ ಕಾರ್ಯಾಚರಣೆ ನಡೆಯುತ್ತಿದೆ. ಕಾಡಾನೆ–ಮಾನವ ಸಂಘರ್ಷವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದ್ದು, ವೈಜ್ಞಾನಿಕವಾಗಿ ಕಾಡಾನೆಗಳನ್ನು ಸ್ಥಳಾಂತರಿಸಿ ಪುನರ್ವಸತಿ ಯೋಜನೆ ರೂಪಿಸಲಾಗುವುದು ಎಂದರು.


ಪುನರ್ವಸತಿ ಯೋಜನೆ ಜಾರಿಗೆ ಕನಿಷ್ಠ ಎರಡು ವರ್ಷ ಬೇಕಾಗಿದ್ದು, ಇದರಿಂದ ಕಾಡಾನೆ–ಮಾನವ ಸಂಘರ್ಷಕ್ಕೆ ಶಾಶ್ವತ ಪರಿಹಾರ ದೊರೆಯಬಹುದು. ಇದೀಗ ಕಾಡಾನೆ ದಾಳಿಯಿಂದ ಗಾಯಗೊಂಡವರಿಗೆ ಅರಣ್ಯ ಇಲಾಖೆ ಮೂಲಕ ಪರಿಹಾರ ನೀಡಲು ಕ್ರಮ ಕೈಗೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು.

ದ್ವೇಷದ ಸಂದೇಶ ಹರಿಬಿಟ್ಟವನ ಬಂಧನ

ಮಡಿಕೇರಿ, ಜ.3– ಸಾಮಾಜಿಕ ಜಾಲತಾಣದಲ್ಲಿ ಎರಡು ಜನಾಂಗಗಳ ನಡುವೆ ದ್ವೇಷ, ಅಸೂಯೆ ಬೆಳೆಸಿ ಸಾರ್ವಜನಿಕ ನೆಮ್ಮದಿಗೆ ಭಂಗ ತರುವಂತಹ ಸಂದೇಶ ಹರಿಬಿಟ್ಟಿದ್ದ ಆರೋಪಿಯನ್ನು ಭಾಗಮಂಡಲ ಠಾಣೆ ಪೊಲೀಸರು ಬಂಧಿಸಿದ್ದಾರೆ.

ದೊಡ್ಡ ಪುಲಿಕೋಟು ಗ್ರಾಮ ನಿವಾಸಿ ಕೆ.ಸರಸು ಪೆಮ್ಮಯ್ಯ (62) ಬಂಧಿತ ಆರೋಪಿ. ಸಾಮಾಜಿಕ ಜಾಲತಾಣದಲ್ಲಿ ದ್ವೇಷ, ನೆಮ್ಮದಿಗೆ ಭಂಗ ತರುವಂತಹ ಸಂದೇಶ ಹರಿಬಿಟ್ಟ ಕುರಿತು ಈತನ ವಿರುದ್ಧ ಭಾಗಮಂಡಲ ಪೊಲೀಸ್ ಠಾಣೆಯಲ್ಲಿ ಬಿಎನ್‌ಎಸ್ ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲಾಗಿದೆ.

ಗಣರಾಜ್ಯೋತ್ಸವಕ್ಕೆ ಕೊಡಗಿನ ಹೇಮಂತ್ ಆಯ್ಕೆ



ಎಂ.ಆರ್.ಹೇಮಂತ್

ಮಡಿಕೇರಿ, ಜ.3–ದೆಹಲಿಯಲ್ಲಿ ಜ.26ರಂದು ನಡೆಯಲಿರುವ ಗಣರಾಜ್ಯೋತ್ಸವ ಪಥಸಂಚಲನದಲ್ಲಿ ಭಾಗವಹಿಸಲು ಕರ್ನಾಟಕ 19ನೇ ಬೆಟಾಲಿಯನ್ ಆರ್ಮಿ ವಿಂಗ್‌ನಿಂದ ಕೊಡಗಿನ ಎಂ.ಆರ್. ಹೇಮಂತ್ ಆಯ್ಕೆಯಾಗಿದ್ದಾನೆ. ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜಿನಲ್ಲಿ ತೃತೀಯ ವರ್ಷದ ಬಿಸಿಎ ವ್ಯಾಸಂಗ ಮಾಡುತ್ತಿರುವ ಹೇಮಂತ್ ಕಾಟಕೇರಿ ಗ್ರಾಮದ ಮಜ್ಜೇಗೌಡನ ರಾಜೇಶ್ ಮತ್ತು ಪ್ರಮೀಳಾ ದಂಪತಿ ಪುತ್ರ.

ಅನು ಕಾರ್ಯಪ್ಪಗೆ ದತ್ತಿ ಪ್ರಶಸ್ತಿ



ಮಡಿಕೇರಿ, ಜ.3–ಕರ್ನಾಟಕ ಮಾಧ್ಯಮ ಅಕಾಡೆಮಿ ವತಿಯಿಂದ ನೀಡಲಾಗುವ ವಾರ್ಷಿಕ ದತ್ತಿ ಪ್ರಶಸ್ತಿಗೆ 'ರಿಪಬ್ಲಿಕ್' ವಾಹಿನಿಯ ಕೊಡಗು ಜಿಲ್ಲಾ ವರದಿಗಾರ ಬಾಚರಣಿಯಂಡ ಅನು ಕಾರ್ಯಪ್ಪ ಆಯ್ಕೆಯಾಗಿದ್ದಾರೆ. '6 ವರ್ಷಗಳಿಂದ ಪಿಂಚಣಿ ಬರದೆ ಪರದಾಟ' ಎಂಬ ವರದಿಗೆ ಮೈಸೂರು ದಿಗಂತ ದತ್ತಿ ಪ್ರಶಸ್ತಿ ಲಭಿಸಿದೆ.

ಮಗುಚಿ ಬಿದ್ದ ಲಾರಿ: ಚಾಲಕ ಸ್ಥಳದಲ್ಲೇ ಸಾವು



ಸುಂಕಣ್ಣ

ಮಡಿಕೇರಿ: ಆಂಧ್ರಪ್ರದೇಶದಿಂದ ಸೋಮವಾರಪೇಟೆ ಕಡೆಗೆ ಸಿಮೆಂಟ್ ಸಾಗಿಸುತ್ತಿದ್ದ ಲಾರಿ ಗುಡುಗಳಲೆ ಬಳಿ ನಿಯಂತ್ರಣ ತಪ್ಪಿ ರಸ್ತೆಬದಿಗೆ ಮಗುಚಿ ಬಿದ್ದು, ಚಾಲಕ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಲಾರಿ ಚಾಲಕ ಸುಂಕಣ್ಣ ಮೃತಪಟ್ಟಿದ್ದು, 16 ಚಕ್ರದ ಲಾರಿಯಲ್ಲಿ ಆಂಧ್ರದಿಂದ ಸೋಮವಾರಪೇಟೆ ಕಡೆಗೆ ಸಿಮೆಂಟ್ ಸಾಗಿಸಲಾಗುತ್ತಿತ್ತು. ಈ ವೇಳೆ ಸೋಮವಾರಪೇಟೆ ತಾಲೂಕಿನ ಗುಡುಗಳಲೆ ಬಳಿ ನಿಯಂತ್ರಣ ಕಳೆದುಕೊಂಡು ರಸ್ತೆಬದಿಗೆ ಲಾರಿ ಮಗುಚಿದೆ.

ಲಾರಿಯ ಹಿಂಬದಿ ಚಕ್ರ ಚಾಲಕ ಸುಂಕಣ್ಣ ತಲೆ ಮೇಲೆ ಹರಿದಿದ್ದು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಮತ್ತೋರ್ವ ಚಾಲಕ ನರೇನ್ ಸಣ್ಣಪುಟ್ಟ ಗಾಯಗಳಿಂದ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಸ್ಥಳಕ್ಕೆ ಶನಿವಾರಸಂತೆ ಠಾಣೆ ಪೊಲೀಸರು ಭೇಟಿ ನೀಡಿ, ಪರಿಶೀಲಿಸಿ ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಅಂಬೇಡ್ಕರ್ ಪ್ರತಿಮೆ ಸ್ಥಾಪನೆಗೆ ಒತ್ತಾಯಿಸಿ ಮನವಿ ಸಲ್ಲಿಕೆ



ಮಡಿಕೇರಿ ನಗರಸಭಾ ಪೌರಾಯುಕ್ತ ಹೆಚ್.ಆರ್.ರಮೇಶ್ ಅವರಿಗೆ ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಮೆ ನಿರ್ಮಾಣ ಸಮಿತಿ ವತಿಯಿಂದ ಮನವಿ ಸಲ್ಲಿಸಲಾಯಿತು.

ಮಡಿಕೇರಿ: ಕೊಡಗು ಜಿಲ್ಲಾ ಕೇಂದ್ರ ಮಡಿಕೇರಿಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಸ್ಥಾಪಿಸುವಂತೆ ಒತ್ತಾಯಿಸಿ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ನಿರ್ಮಾಣ ಸಮಿತಿ ವತಿಯಿಂದ ನಗರಸಭಾ ಪೌರಾಯುಕ್ತ ಹೆಚ್.ಆರ್.ರಮೇಶ್ ಅವರಿಗೆ ಮನವಿ ಸಲ್ಲಿಸಲಾಯಿತು.

ಇಡೀ ರಾಜ್ಯದಲ್ಲಿ ಅಂಬೇಡ್ಕರ್ ಪ್ರತಿಮೆ ಇಲ್ಲದ ಏಕೈಕ ಜಿಲ್ಲೆ ಕೊಡಗು. ಹಿಂದಿನಿಂದಲೂ ಪ್ರತಿಮೆ ಸ್ಥಾಪನೆಗೆ ಮನವಿ ಮಾಡಿದ್ದರು ಅದು ಫಲಪ್ರದವಾಗಿಲ್ಲ ಎಂದು ಸಮಿತಿ ಪದಾಧಿಕಾರಿಗಳು ಬೇಸರ ವ್ಯಕ್ತಪಡಿಸಿದರು.

ಸಮಿತಿ ಸದಸ್ಯ ಟಿ.ಈ.ಸುರೇಶ್ ಮಾತನಾಡಿ, ಜಿಲ್ಲಾ ಕೇಂದ್ರವಾದ ಮಡಿಕೇರಿ ಕಾವೇರಿ ಕಲಾಕ್ಷೇತ್ರದ ಪಕ್ಕದ ಉದ್ಯಾನದಲ್ಲಿ ಅಂಬೇಡ್ಕರ್ ಪ್ರತಿಮೆ ಸ್ಥಾಪನೆಗೆ ಅವಕಾಶವಿದೆ. ಜೊತೆಗೆ ಜಿಲ್ಲಾಧಿಕಾರಿ ಕಚೇರಿ ಬಳಿಯ ಉದ್ಯಾನ ಅಥವಾ ಸುದರ್ಶನ ವೃತ್ತದ ಬಳಿಯ ಉದ್ಯಾನದಲ್ಲಿ ಪ್ರತಿಮೆ ಸ್ಥಾಪಿಸಬಹುದು ಎಂದರು.

ಈ ಸಂದರ್ಭ ಜಿಲ್ಲಾ ಅಹಿಂದ ಸ್ಥಾಪಕಾಧ್ಯಕ್ಷ ಟಿ.ಪಿ.ರಮೇಶ್, ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ನಿರ್ಮಾಣ ಸಮಿತಿ ಸದಸ್ಯರಾದ ಮೋಹನ್ ಮೌರ್ಯ, ಗೌತಮ್ ಶಿವಪ್ಪ, ಆನಂದ್, ಈರಪ್ಪ, ಶೇಖರ್, ದೀಲಿಪ್, ಸಿ.ಪಿ.ಟಿ. ವಿನಯ್, ದೇವರಾಜು, ನಗರಸಭಾ ಸದಸ್ಯರಾದ ಹೆಚ್.ಸಿ.ಸತೀಶ್, ಮನ್ಸೂರ್ ಉಪಸ್ಥಿತರಿದ್ದರು.

ಸಾವಿತ್ರಿ ಬಾಯಿಪುಲೆ ಮಹಿಳೆಯರಿಗೆ ಸ್ಫೂರ್ತಿ

● ಶಾಸಕ ಸಿ.ಪುಟ್ಟರಂಗಶೆಟ್ಟಿ ಸ್ಮರಣೆ ● ಜಯಂತಿ, ನಿವೃತ್ತ ಶಿಕ್ಷಕರ ಸನ್ಮಾನ ಕಾರ್ಯಕ್ರಮ



ಚಾಮರಾಜನಗರದ ಅಂಬೇಡ್ಕರ್ ಭವನದಲ್ಲಿ ನಡೆದ ಜಯಂತಿ ಕಾರ್ಯಕ್ರಮದಲ್ಲಿ ಸಾವಿತ್ರಿಬಾಯಿಪುಲೆ ಅವರ ಭಾವಚಿತ್ರಕ್ಕೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಪುಷ್ಪಾರ್ಚನೆ ಮಾಡಿದರು.

ಚಾಮರಾಜನಗರ, ಜ.3–ಭಾರತದ ಮೊದಲ ಮಹಿಳಾ ಶಿಕ್ಷಕಿ ಸಾವಿತ್ರಿಬಾಯಿ ಪುಲೆ ಮಹಿಳಾ ಸಮುದಾಯಕ್ಕೆ ಸ್ಫೂರ್ತಿದಾಯಕ ಎಂದು ಶಾಸಕ ಸಿ.ಪುಟ್ಟರಂಗಶೆಟ್ಟಿ ಸ್ಮರಿಸಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಶುಕ್ರವಾರ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಚಾಮರಾಜನಗರ ತಾಲೂಕು ಘಟಕ ವತಿಯಿಂದ ನಡೆದ ಅಕ್ಷರ ಮಾತೆ ಸಾವಿತ್ರಿಬಾಯಿಪುಲೆ ಜಯಂತಿ, ಸಂಘದ 2025ನೇ ಸಾಲಿನ ಕ್ಯಾಲೆಂಡರ್ ಬಿಡುಗಡೆ, ನಿವೃತ್ತ ಶಿಕ್ಷಕರಿಗೆ ಸನ್ಮಾನ ಹಾಗೂ ಶೈಕ್ಷಣಿಕ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

ಮಹಿಳೆ ನಾಲ್ಕು ಗೋಡೆಗಳ ಮಧ್ಯದಲ್ಲಿ ಕಾಲ ಕಳೆಯುವ ಪರಿಸ್ಥಿತಿಯಲ್ಲಿ ಸಾಕಷ್ಟು ತೊಂದರೆಗಳ ನಡುವೆ ದೇಶದ ಮೊಟ್ಟ ಮೊದಲ ಶಿಕ್ಷಕಿಯಾಗಿ ಸಾವಿತ್ರಿಬಾಯಿಪುಲೆ ಮಹಿಳಾ ಶಿಕ್ಷಣಕ್ಕೆ ನಾಂದಿ ಹಾಡಿದ್ದಾರೆ. ಅಲ್ಲದೇ, ಶೋಷಿತ ಸಮುದಾಯದ ಮಹಿಳೆಯರಿಗೆ ಅಕ್ಷರ ಕಲಿಸಿ, ಶಾಲೆಗಳನ್ನು ತೆರೆದರು ಅಕ್ಷರದವ್ವ ಆಗಿ ಮಹಿಳೆಯರನ್ನು ಮೇಲೆತ್ತುವಲ್ಲಿ ಶ್ರಮಿಸಿದ್ದಾರೆ. ಜೊತೆಗೆ ಶಿಕ್ಷಕರಿಗೆ ಆದರ್ಶವಾಗಿದ್ದಾರೆ ಎಂದರು.

ಕಾಡಾ ಅಧ್ಯಕ್ಷ ಪಿ.ಮರಿಸ್ವಾಮಿ ಮಾತನಾಡಿ, ಆಧುನಿಕ ಇತಿಹಾಸದಲ್ಲಿ ಸಾವಿತ್ರಿಬಾಯಿ ಪುಲೆ ಅಪ್ಪಟ ಸ್ತ್ರೀವಾದಿ, ದೇಶದಲ್ಲಿ ಜಾತಿ ವ್ಯವಸ್ಥೆ ನಿರ್ಮೂಲನೆ ಮಾಡಲು ಶ್ರಮಿಸಿದ ಸಾಮಾಜಿಕ ಸುಧಾರಕಿಯಾಗಿದ್ದರು. ಸಾವಿತ್ರಿಬಾಯಿ ಪತಿ ಜ್ಯೋತಿಬಾ ಪುಲೆ ಅವರೊಂದಿಗೆ ಮಹಾರಾಷ್ಟ್ರದ ಪುಣೆಯಲ್ಲಿ ಬಾಲಕಿಯರ ಮೊದಲ ಶಾಲೆ ಪ್ರಾರಂಭಿಸುವ ಮೂಲಕ ಮಹಿಳೆಯರ ಸಬಲೀಕರಣಕ್ಕಾಗಿ ಶ್ರಮಿಸಿದರು ಎಂದು ಹೇಳಿದರು.

ಚುಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್ ಸಾವಿತ್ರಿಬಾಯಿಪುಲೆ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು. ಶಿವಮೊಗ್ಗ ಡಯಟ್ ಹಿರಿಯ ಉಪನ್ಯಾಸಕ ಡಾ.ಜಿ.ವಿ. ಹರಿಪ್ರಸಾದ್ ನಲಿಕಲಿ ಮರುಸಿಂಚನ ಮತ್ತು ಪ್ರಸ್ತುತ ಅನುಷ್ಠಾನಗೊಳ್ಳುತ್ತಿರುವ ಇಲಾಖೆ ಕಾರ್ಯಕ್ರಮಗಳ ಕುರಿತು ತಿಳಿಸಿದರು. ಸಂಘದ ರಾಜ್ಯ ಉಪಾಧ್ಯಕ್ಷ ಎಂ.ಡಿ.ಮಹದೇವಯ್ಯ ಮಾತನಾಡಿದರು.

ಪ್ರಶಸ್ತಿ ಪ್ರದಾನ: ಇದೇ ವೇಳೆ ಉತ್ತಮ ಶಿಕ್ಷಕರಿಗೆ ಸಾವಿತ್ರಿಬಾಯಿಪುಲೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ನಿವೃತ್ತ ಶಿಕ್ಷಕರನ್ನು ಸನ್ಮಾನಿಸಲಾಯಿತು.

ಡಯಟ್ ಉಪನಿರ್ದೇಶಕ ಎಂ.ಕಾಶಿನಾಥ್, ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ಹನುಮಶೆಟ್ಟಿ, ಕ್ಷೇತ್ರ ಸಂಪನ್ಮೂಲ ಸಮನ್ವಯ ಅಧಿಕಾರಿ ರಾಜೀವ್, ಸಂಘದ ತಾಲೂಕು ಅಧ್ಯಕ್ಷ ಸಿ.ಕೆ.ರಾಮಸ್ವಾಮಿ, ಕಾರ್ಯದರ್ಶಿ ಎನ್.ಸುಧಾ, ಗೌರವಾಧ್ಯಕ್ಷ ರಾಜು, ಖಜಾಂಚಿ ಕೃಷ್ಣಮೂರ್ತಿ, ಪ್ರೌಢಶಾಲಾ ಸಂಘದ ಪ್ರಧಾನ ಕಾರ್ಯದರ್ಶಿ ಕಿರಣ್ ರಾಜ್, ನಿರ್ದೇಶಕ ಮಹದೇವಸ್ವಾಮಿ ಹಾಗೂ ಸಂಘದ ಪದಾಧಿಕಾರಿಗಳು ಕಾರ್ಯಕ್ರಮದಲ್ಲಿ ಹಾಜರಿದ್ದರು.

ಹಾಲಹಳ್ಳಿಯಲ್ಲಿ ಮಹದೇವಪ್ರಸಾದ್ ಪುಣ್ಯಾರಾಧನೆ



ಹಾಲಹಳ್ಳಿ ಗ್ರಾಮದ ಹೆಚ್.ಎಸ್.ಮಹದೇವಪ್ರಸಾದ್ ಸಮಾಧಿಗೆ ಕುಟುಂಬದವರು ಪೂಜೆ ಸಲ್ಲಿಸಿದರು.

ಗುಂಡ್ಲುಪೇಟೆ: ತಾಲೂಕಿನ ಹಾಲಹಳ್ಳಿ ಗ್ರಾಮದಲ್ಲಿ ಮಾಜಿ ಸಚಿವ ಹೆಚ್.ಎಸ್.ಮಹದೇವ ಪ್ರಸಾದ್ ಅವರ 8ನೇ ವರ್ಷದ ಪುಣ್ಯಾರಾಧನೆ ಕಾರ್ಯಕ್ರಮ ಶುಕ್ರವಾರ ನಡೆಯಿತು.

ಪುಣ್ಯಾರಾಧನೆ ಕಾರ್ಯಕ್ರಮದಲ್ಲಿ ಪತ್ನಿ, ಮಾಜಿ ಸಚಿವೆ ಡಾ.ಗೀತಾ ಮಹದೇವ ಪ್ರಸಾದ್, ಪುತ್ರ ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್, ವಿದ್ಯಾ ಗಣೇಶ್, ಸಹೋದರ ಹೆಚ್.ಎಂ.ನಂಜುಂಡಪ್ರಸಾದ್, ರೂಪಾ ನಂಜುಂಡಪ್ರಸಾದ್, ಸಹೋದರಿ ಪ್ರೇಮಾ ಡಾ.ಚಂದ್ರಚೂಡ ಹಾಗೂ ಕುಟುಂಬದವರು ಗ್ರಾಮದ ಹೊರವಲಯದ ಬೊಗ್ಗನಪುರ ಫಾರಂನಲ್ಲಿರುವ ಮಹದೇವ ಪ್ರಸಾದ್ ಅವರ ಸಮಾಧಿಗೆ ಪೂಜೆ ಸಲ್ಲಿಸಿ, ಪುಷ್ಪ ನಮನ ಸಲ್ಲಿಸಿದರು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಶಾಸಕ ಗಣೇಶ್ ಪ್ರಸಾದ್, ನಮ್ಮ ತಂದೆ ಮಹದೇವಪ್ರಸಾದ್ ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರವನ್ನು 25 ವರ್ಷಕ್ಕೂ ಹೆಚ್ಚು ಕಾಲ ಶಾಸಕರಾಗಿ ಅಭಿವೃದ್ಧಿ ಪಡಿಸಿದ್ದಾರೆ. ಮಹದೇವಪ್ರಸಾದ್ ಅವರು ಶಿಕ್ಷಣ, ಆರೋಗ್ಯ ಹಾಗೂ ಮೂಲಸೌಕರ್ಯ ಕಲ್ಪಿಸಿರುವುದನ್ನು ಕ್ಷೇತ್ರದ ಜನತೆ ಇಂದಿಗೂ ಮರೆತಿಲ್ಲ. ಆ ಕಾರಣಕ್ಕಾಗಿ ಸಹಸ್ರಾರು ಅಭಿಮಾನಿಗಳು ಅವರ ಪುಣ್ಯಾರಾಧನೆಯಲ್ಲಿ ಪಾಲ್ಗೊಂಡಿದ್ದಾರೆ ಎಂದರು.

ಇದೇ ವೇಳೆ ವಿವಿಧ ಮಠಾಧೀಶರು, ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಹಾಗೂ ಅಭಿಮಾನಿಗಳು ಸಮಾಧಿಗೆ ಭೇಟಿ ನೀಡಿ ನಮನ ಸಲ್ಲಿಸಿದರು. ಗ್ರಾಮದ ಹೆಚ್‌ಎನ್‌ಎಸ್ ಸಮುದಾಯ ಭವನದಲ್ಲಿ ಅಭಿಮಾನಿಗಳು ಹಾಗೂ ಕಾರ್ಯಕರ್ತರಿಗೆ ಊಟದ ವ್ಯವಸ್ಥೆ ಮಾಡಲಾಗಿತ್ತು.

ಚಾಮರಾಜನಗರ ವಿವಿಗೆ ಅಂಬೇಡ್ಕರ್ ಹೆಸರಿಡಿ

ಡಿಸಿ ಶಿಲ್ಪನಾಗ್‌ಗೆ ಜಿಲ್ಲಾ ಜನಹಿತಾಶಕ್ತಿ ಹೋರಾಟ ವೇದಿಕೆಯಿಂದ ಮನವಿ ಸಲ್ಲಿಕೆ

ಚಾಮರಾಜನಗರ, ಜ.3–ಚಾಮರಾಜನಗರ ವಿಶ್ವವಿದ್ಯಾನಿಲಯಕ್ಕೆ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಹೆಸರನ್ನು ನಾಮಕರಣ ಮಾಡಬೇಕು ಎಂದು ಜಿಲ್ಲಾ ಜನಹಿತಾಶಕ್ತಿ ಹೋರಾಟ ವೇದಿಕೆ ವತಿಯಿಂದ ಜಿಲ್ಲಾಧಿಕಾರಿ ಸಿ.ಟಿ.ಶಿಲ್ಪನಾಗ್ ಅವರಿಗೆ ಮನವಿ ಸಲ್ಲಿಸಲಾಯಿತು.

2010–11ನೇ ಸಾಲಿನಲ್ಲಿ ಮೈಸೂರು ವಿವಿಯ ಉಪಕೇಂದ್ರವಾಗಿ ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರ ಹೆಸರಿನಲ್ಲಿ ಆರಂಭಿಸಲಾಯಿತು. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರ 43 ಎಕರೆ ವಿಸ್ತೀರ್ಣ ಹೊಂದಿದ್ದು, ವಿಶಾಲವಾದ ಸುಸಜ್ಜಿತ ಕ್ಯಾಂಪಸ್ ಹೊಂದಿದೆ. ಈಗಾಗಲೇ ಕೇಂದ್ರದಲ್ಲಿ ಕನ್ನಡ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ರಸಾಯನ, ಭೌತ, ಜಾನಪದ, ಗ್ರಂಥಾಲಯ ವಿಜ್ಞಾನ, ಗಣಕ ಯಂತ್ರ, ಬಿಎಎಂಎ ಎಂಸಿಎ, ಎಂಕಾಂ ಸೇರಿದಂತೆ 13 ವಿಷಯಗಳನ್ನು ಬೋಧಿಸಲಾಗುತ್ತಿದೆ. 2023ರ ಮಾ.28ರಂದು ರಾಜ್ಯ ಸರ್ಕಾರ ಚಾಮರಾಜನಗರಕ್ಕೆ ಪ್ರತ್ಯೇಕ ವಿಶ್ವವಿದ್ಯಾನಿಲಯ ಮಂಜೂರು ಮಾಡಿದೆ. ಆದ್ದರಿಂದ ಚಾ.ನಗರ ವಿಶ್ವವಿದ್ಯಾನಿಲಯಕ್ಕೆ ಅಂಬೇಡ್ಕರ್ ಹೆಸರಿಡಬೇಕು ಎಂದು ಒತ್ತಾಯಿಸಲಾಗಿದೆ. ವೇದಿಕೆ ಅಧ್ಯಕ್ಷ ರಾಮಸಮುದ್ರ ಸುರೇಶ್, ಪ್ರಧಾನ ಕಾರ್ಯದರ್ಶಿ ಕಾಡಹಳ್ಳಿ ನಾಗ ರಾಜು, ಡಿಎಸ್‌ಎಸ್ ಜಿಲ್ಲಾ ಸಂಚಾಲಕ ಯರಿಯೂರು ರಾಜಣ್ಣ, ಸಾಹಿತಿ ಸೋಮಶೇಖರ್ ಬಿಸಲ್ವಾಡಿ ಹಾಜರಿದ್ದರು.



ಚಾಮರಾಜನಗರ ವಿವಿಗೆ ಅಂಬೇಡ್ಕರ್ ಹೆಸರಿಡಬೇಕು ಎಂದು ಜಿಲ್ಲಾ ಜನಹಿತಾಶಕ್ತಿ ಹೋರಾಟ ವೇದಿಕೆ ವತಿಯಿಂದ ಜಿಲ್ಲಾಧಿಕಾರಿ ಸಿ.ಟಿ.ಶಿಲ್ಪನಾಗ್ ಅವರಿಗೆ ಮನವಿ ಸಲ್ಲಿಸಲಾಯಿತು.

ಬೆಂಕಿ ಬಿದ್ದು ಟ್ರ್ಯಾಕ್ಟರ್, ಕೃಷಿ ಸಲಕರಣೆ ಹಾನಿ



ಅಗತಗೌಡನಹಳ್ಳಿ ಗ್ರಾಮದಲ್ಲಿ ಟ್ರ್ಯಾಕ್ಟರ್ ಬೆಂಕಿಗೆ ಆಹುತಿಯಾಗಿರುವುದು.

ಬೇಗೂರು, ಜ.3–ಶೆಡ್‌ಗೆ ಬೆಂಕಿ ಬಿದ್ದು ಟ್ರ್ಯಾಕ್ಟರ್, ಕೃಷಿ ಸಲಕರಣೆ ಹಾನಿಯಾಗಿರುವ ಘಟನೆ ಸಮೀಪದ ಅಗತಗೌಡನಹಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ರೈತ ಮಹದೇವಪ್ರಸಾದ್‌ಗೆ ಸೇರಿದ ಟ್ರ್ಯಾಕ್ಟರ್, ಪೈಪ್, ಸ್ಪ್ರಿಂಕ್ಲರ್ ಇನ್ನಿತರ ಕೃಷಿ ಪರಿಕರಗಳು ಬೆಂಕಿಗೆ ಸುಟ್ಟು ಹೋಗಿವೆ.

ಜ.1ರಂದು ನಾನು ಹಾಗೂ ರವಿರಾಜ್ ಮನೆ ಮುಂಭಾಗ ಮಾತನಾಡುತ್ತಾ ನಿಂತಿದ್ದವು. ಈ ವೇಳೆ ರವಿರಾಜ್ ಪತ್ನಿ ಮೌನ ಅಲ್ಲಿಗೆ ಬಂದು ನನ್ನನ್ನು ಬೈದು ನಿನ್ನ ಟ್ರ್ಯಾಕ್ಟರ್ ಸುಟ್ಟು ಹಾಕುತ್ತೇನೆ ಎಂದು ಹೋಗಿದ್ದರು. ಆದರೆ, ಗುರುವಾರ ಮುಂಜಾನೆ ಟ್ರ್ಯಾಕ್ಟರ್, ಶೆಡ್ ಹಾಗೂ ಕೃಷಿ ಸಲಕರಣೆಗಳಿಗೆ ಬೆಂಕಿ ಬಿದ್ದಿದೆ. ಬೆಂಕಿ ಬಿದ್ದ ಸ್ಥಳದಲ್ಲಿ ಮೌನಾ ಅವರ ಮೊಬೈಲ್ ಸಿಕ್ಕಿದೆ. ಆದ್ದರಿಂದ ಅನುಮಾನ ವ್ಯಕ್ತವಾಗಿದೆ ಎಂದು ಬೇಗೂರು ಪೊಲೀಸ್ ಠಾಣೆಗೆ ಮಹದೇವಪ್ರಸಾದ್ ದೂರು ನೀಡಿದ್ದಾರೆ.

ಸಂವಿಧಾನ ಓದುವುದೇ ಹೆಮ್ಮೆ: ಟಿ.ಎನ್.ಸೀತಾರಾಂ



ಕೊಳ್ಳೇಗಾಲ ಮಾನಸ ವಿದ್ಯಾಸಂಸ್ಥೆಯಲ್ಲಿ ನಡೆದ ಮಾನಸೋತ್ಸವ ಕಾರ್ಯಕ್ರಮದಲ್ಲಿ ಟಿ.ಎನ್.ಸೀತಾರಾಂ ಅವರಿಗೆ ಮಾನಸ ಪ್ರಶಸ್ತಿ ನೀಡಲಾಯಿತು.

ಕೊಳ್ಳೇಗಾಲ: ಡಾ.ಬಿ.ಆರ್.ಅಂಬೇಡ್ಕರ್ ಅವರು ರಚಿಸಿರುವ ಸಂವಿಧಾನವನ್ನು ಓದುವುದೇ ಹೆಮ್ಮೆ ಎಂದು ಚಲನಚಿತ್ರ ನಿರ್ದೇಶಕ ಟಿ.ಎನ್.ಸೀತಾರಾಂ ಹೇಳಿದರು.

ಪಟ್ಟಣದ ಮಾನಸ ವಿದ್ಯಾಸಂಸ್ಥೆಯಲ್ಲಿ ನಡೆದ ಮಾನಸೋತ್ಸವ ಕಾರ್ಯಕ್ರದಲ್ಲಿ ಮಾನಸ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಅವರು, ಸಂವಿಧಾನದ ಮೂಲ ಆಶಯ ಸಮಾಜದಲ್ಲಿ ಎಲ್ಲರೂ ಸಮಾನರು ಎಂಬುದಾಗಿದೆ. ಕೊಳ್ಳೇಗಾಲದ ಜನರು ಅಪರೂಪದವರು. ಇಲ್ಲಿನ ಜನರ ಶ್ರದ್ಧೆ, ಬದುಕಿನ ಕಾಳಜಿ ಅನನ್ಯವಾದದು. ಧಾರಾವಾಹಿಗಳ ವೀಕ್ಷಣೆಯಿಂದ ಸಮಯ ವ್ಯರ್ಥ ಎಂಬ ಭಾವನೆ ಅಂದಿತ್ತು ಆದರೆ, ಇಂದಿನ ಧಾರಾವಾಹಿಗಳು ಅದನ್ನು ದೂರ ಮಾಡಿವೆ ಎಂದರು.

ಶಾಸಕ ಎ.ಆರ್.ಕೃಷ್ಣಮೂರ್ತಿ ಮಾತನಾಡಿ, ಚಲನಚಿತ್ರ ಮತ್ತು ಧಾರಾವಾಹಿಗಳಲ್ಲಿ ಟಿ.ಎನ್.ಸೀತಾರಾಂ ಅವರ ಸಾಧನೆ ಅನನ್ಯ. ಮಾನಸ ಶಿಕ್ಷಣ ಸಂಸ್ಥೆ ಅಗಾಧವಾಗಿ ಬೆಳೆದು ಗ್ರಾಮೀಣ ವಿದ್ಯಾರ್ಥಿಗಳಿಗೆ ಮೌಲ್ಯಯುತ ಶಿಕ್ಷಣ ನೀಡುತ್ತಿರುವುದು ಹೆಮ್ಮೆಯ ಸಂಗತಿ. ಸಂಸ್ಥೆ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಸಮಾಜಕ್ಕೆ ಕೊಡುಗೆ ನೀಡುತ್ತಿರುವುದು ಪ್ರಶಂಸನೀಯ ಎಂದು ತಿಳಿಸಿದರು.

ಖ್ಯಾತ ಚಲನಚಿತ್ರ ನಿರ್ದೇಶಕ ಪಿ.ಶೇಷಾದ್ರಿ ಮಾತನಾಡಿ, ಚಾ.ನಗರ ಜಿಲ್ಲೆಯ ವರನಟ ಡಾ.ರಾಜ್‌ಕುಮಾರ್ ಕನ್ನಡ ಭಾಷೆ, ಕನ್ನಡ ಚಲನಚಿತ್ರಕ್ಕೆ ಕೊಡುಗೆ ನೀಡಿದ್ದಾರೆ. ಅದೇ ರೀತಿ ಟಿ.ಎನ್.ಸೀತಾರಾಂ ಟೆಲಿವಿಷನ್ ಕ್ಷೇತ್ರದಲ್ಲಿ ಅವರ ಸಾಧನೆ ಅಪ್ರತಿಮವಾದದು ಎಂದರು.

ಸಿದ್ಧಗಂಗಾ ಮಠದ ಕಿರಿಯ ಶ್ರೀ ಶಿವಸಿದ್ದೇಶ್ವರ ಸ್ವಾಮೀಜಿ ಸಾನಿಧ್ಯ ವಹಿಸಿದ್ದರು. ಖ್ಯಾತ ವಿಜ್ಞಾನಿ ಎ.ಎಸ್.ಕಿರಣ್ ಕುಮಾರ್, ಪ್ರೊ.ಡಾ.ಶಿವರಾಜಪ್ಪ, ಗುಂಡೇಗಾಲ ಮಠಾಧ್ಯಕ್ಷರಾದ ಶ್ರೀ ಕಾಂತಬುದ್ಧಿ ಸ್ವಾಮೀಜಿ, ಸಂಸ್ಥೆಯ ಸಂಸ್ಥಾಪಕ ಕಾರ್ಯದರ್ಶಿ ಡಾ.ದತ್ತೇಶ್ ಕುಮಾರ್, ಅಧ್ಯಕ್ಷ ನಾಗರಾಜು, ಉಪಾಧ್ಯಕ್ಷೆ ರೂಪಾ, ಸಂಯೋಜನಾಧಿಕಾರಿ ನಾಗಭೂಷಣ್ ಇನ್ನಿತರಿದ್ದರು.

ಕ್ಯಾಲೆಂಡರ್ ಬಿಡುಗಡೆ...



ಚಾ.ನಗರದಲ್ಲಿ ರಾಜ್ಯ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘದ ಕ್ಯಾಲೆಂಡರ್ ಹಾಗೂ ಡೈರಿ ಬಿಡುಗಡೆಗೊಳಿಸಲಾಯಿತು. ಸಂಘದ ಜಿಲ್ಲಾಧ್ಯಕ್ಷ ಜಿ.ಎಂ.ಸುರೇಶ್, ಉಪಾಧ್ಯಕ್ಷರಾದ ನಾಗೇಂದ್ರ, ಅನ್ಸರ್ ಅಲಿ ಖಾನ್, ಕಾರ್ಯದರ್ಶಿ ಎಸ್.ಭಾನುಪ್ರಕಾಶ್, ಖಜಾಂಚಿ ಎಂ.ಎನ್.ಸಂಪತ್ ಕುಮಾರ್, ಸಂಘಟನಾ ಕಾರ್ಯದರ್ಶಿ ರವಿ, ಪಿಆರ್‌ಓ ಮಹದೇವ್, ಸದಸ್ಯ ಉಮ್ಮತ್ತೂರು ಚಂದ್ರು, ಮಾಜಿ ಸದಸ್ಯ ಹೊಸೂರು ಜಗದೀಶ್, ಪುಟ್ಟಸ್ವಾಮಿ, ಗಂಗಾಧರ್, ನಾಗೇಶ್, ನಾಗರಾಜು ಇದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಬೇಕಾಗಿದ್ದಾರೆ
ವಿಜಯನಗರದಲ್ಲಿರುವ ದ್ವಾರಕಾಮಯಿ ಕಾಫಿ ಕೆಫೆಯಲ್ಲಿ ಕೆಲಸ ಮಾಡಲು ಮಹಿಳಾ ಅಭ್ಯರ್ಥಿ ಬೇಕಾಗಿದ್ದಾರೆ. ವಯಸ್ಸಿನ ಮಿತಿ 20 ರಿಂದ 35 ವರ್ಷ.
9900190319, 9845025118

ಪ್ರವಾಸ
ಗುಜರಾತ್ ಪ್ರವಾಸ 8 ದಿನಗಳು ದಿನಾಂಕ: 18–01–2025
ನೇಪಾಳ ಪ್ರವಾಸ 9 ದಿನಗಳು ದಿನಾಂಕ: 18–01–2025
ಪೂರಿ ಜಗನ್ನಾಥ ಪ್ರವಾಸ 4 ದಿನಗಳು ದಿನಾಂಕ: 21–01–2025
ಶಿರಡಿ ಪ್ರವಾಸ 3 ದಿನಗಳು ದಿನಾಂಕ: 23–01–2025
ಶ್ರೀಲಂಕಾ ಪ್ರವಾಸ 8 ದಿನಗಳು ದಿನಾಂಕ: 18–01–2025
6360146483,9480843945

MEGA NEW YEAR OFFER

1, KVA, SW, UPS, 150 AH Battery : 15,999/-
1.2, KVA SW, UPS, 200AH Battery: 21,499/-
S.R.Enterprises Ramavilas Road, Mysuru-04
7676899663

WANTED
Lady Sales Girls and Office work must Kannada, English & Hindi. @Hinkal. Contact:
9480930786 / 9980040125

ಬೇಕಾಗಿದ್ದಾರೆ
ಹೋಟೆಲ್ ಕೆಲಸಕ್ಕೆ ಕುಕ್ ಬೇಕಾಗಿದ್ದಾರೆ. ತಂದೂರಿ ಹಾಗೂ ಚೈನೀಸ್ ಕುಕ್ ALROUND COOK
6366725494, 9901618261

ಬೇಕಾಗಿದ್ದಾರೆ
MARKETING AND COLLECTION AGENT
ಸಂಪರ್ಕಿಸಿ: 8494908024
ವಿ.ಎಸ್. ಮೈಸೂರು ಚಿಟ್ಸ್ ಪ್ರೈ.ಲಿ. #196, 1ನೇ ಮಹಡಿ, ಎಸ್.ಬಿ.ಐ. ಮುಖ್ಯ ರಸ್ತೆ, ಚಾಮುಂಡೇಶ್ವರಿ ದೇವಸ್ಥಾನದ ಹತ್ತಿರ, ಹೆಬ್ಬಾಳು ಮೊದಲನೇ ಹಂತ.

WE ARE HIRING
Qualification - PUC or Degree
Male / Female
Age-Between 18 to 40 Years
Able to Communicate
Able to work Together with Team
9844184349

ಬಸವಮಾರ್ಗ ಫೌಂಡೇಶನ್ ಸರಸ್ವತಿಪುರಂ, ಮೈಸೂರು.
ಅಡುಗೆ ಮತ್ತು ಮನೆ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ. ಇಎಸ್ಐ, ಪಿಎಫ್ ಸೌಲಭ್ಯ ಇದೆ. ಅಡುಗೆ ಮಾಡುವವರಿಗೆ 15 ಸಾವಿರ ರೂ. ಹಾಗೂ ಮನೆ ಕೆಲಸದವರಿಗೆ 9 ಸಾವಿರ ರೂ.ಮಾಸಿಕ ಸಂಬಳ ನೀಡಲಾಗುತ್ತದೆ.
88849-51621

ಬಸವಮಾರ್ಗ ವ್ಯಸನಮುಕ್ತ ಕೇಂದ್ರ, ಹೆಬ್ಬಾಳ್, ಮೈಸೂರು
ಅನುಭವಿ ಕೌನ್ಸಲರ್ ಹಾಗೂ ಬ್ರದರ್ ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ : ಕೌನ್ಸಲರ್ ಗಳಿಗೆ ಎಂಎಸ್ಸಿ, ಸೈಕಾಲಜಿ, ಬ್ರದರ್‌ಗಳಿಗೆ : ಫಾರ್ಮಸಿ ಇಎಸ್ಐ ಪಿಎಫ್ ಸೌಲಭ್ಯ ಆಕರ್ಷಕ ಸಂಬಳ
88849-51621

ಪ್ರವಾಸ
ಕಾಶಿ-ರಾಮೇಶ್ವರ-ಕನ್ಯಾಕುಮಾರಿ
ವಿಶಿಷ್ಟ ಪ್ಯಾಕೇಜ್ - 9ದಿನಗಳು
ದಿನಾಂಕ : 29, ಜನವರಿ 2025
DUBAI - 5N/ 6 days
On 8th Feb. 2025
SINGAPORE - 7N/ 8 days MALASIA
On 29th march. 2025
Call - 8660051998

ಹೊಸ ಮನೆ ಮಾರಾಟಕ್ಕಿದೆ
3 BHK, East Face
MUDA APPROVED
Near St. Joseph School, Yelwala, Huyilalu.
Mob: 8217851695

ವೃದ್ಧಾಶ್ರಮ
ಹಿರಿಯ ಜೀವಗಳಿಗೆ, ಹಾಸಿಗೆ ಹಿಡಿದ ವೃದ್ಧರನ್ನು, ಪಾರ್ಶ್ವವಾಯು ಪೀಡಿತರು, ಹಾಗೂ ಕೈಲಾಗದ ವಯೋ ವೃದ್ಧರನ್ನು ಮನೆಯಂತೆಯೇ ನೋಡಿ ಕೊಳ್ಳುತ್ತಿರುವ ಸಂಸ್ಥೆ ನಮ್ಮ ಮೈಸೂರಿನಲ್ಲಿ ಊಟ, ವಸತಿ, ವೈದ್ಯಕೀಯ ಸೌಲಭ್ಯದೊಂದಿಗೆ ಇಚ್ಛೆವುಳ್ಳವರು ಸಂಪರ್ಕಿಸಿ
9110455297|9591557126

V GUARD

10 ವರ್ಷಗಳ ವ್ಯಾರಂಟಿ
Solar Water Heater SALES & SERVICE
BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 6360485921

HOUSE FOR SALE
3BHK
(East & North Corner)
2 covered Car Parking & Vasthu Behind Rostratthana Vidya Kendra Vijayanagar IV Stage
9986014168
(Broker's Excuse)

WANTED
ಕುವೆಂಪುನಗರದ ಫ್ಯಾನ್ಸಿ ಸ್ಟೋರ್‌ನಲ್ಲಿ ಕೆಲಸ ಮಾಡಲು ಮಹಿಳೆಯರು ಬೇಕಾಗಿದ್ದಾರೆ.
ಸಂಬಳ: 10000/–
Timing - 10.30-7PM
9845646800

WANTED
We are Hiring
1. HR /Admin personnel-1 No- 3yrs experience, Plan, Co-ordinate and manage the administrative functions of an office
2. Loan / Debt Recovery Executives
Telecallers-5 Nos.
Field Executives-5 Nos.
9482676099
9591425134

ಜಮೀನು ಮಾರಾಟಕ್ಕಿದೆ
ಮೈಸೂರಿನ ಕುವೆಂಪು ನಗರದಿಂದ ಕೇವಲ 6 ಕಿಲೋಮೀಟರ್ ದೂರದಲ್ಲಿರುವ ಪೆರಿಫೆರಲ್ ರಿಂಗ್ ರೋಡ್‌ಗೆ ಹೊಂದಿಕೊಂಡಿರುವ ಲೇಔಟ್‌ಗೆ ಸೂಕ್ತವಾದ 8.5 ಎಕರೆ ಜಮೀನು ಮಾರಾಟಕ್ಕಿದೆ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ
ಸಂಪರ್ಕಿಸಿ: ಡಾ.ಗುರುಪ್ರಸಾದ್
9036284426

ಬೇಕಾಗಿದ್ದಾರೆ
ಮೈಸೂರಿನ ವಿಜಯನಗರ 2ನೇ ಹಂತದಲ್ಲಿರುವ ವೆಜ್ ರೆಸ್ಟೋರೆಂಟ್‌ನಲ್ಲಿ ಕೆಲಸಗಾರರು ಬೇಕಾಗಿದ್ದಾರೆ. ಸೌತ್‌ಭಟ್ಟರು–1, ಸಪ್ಲೈಯರ್–2 (ಮಹಿಳೆಯರು) ಕ್ಯಾಷಿಯರ್–1 (ಮಹಿಳೆ)
8892088999

ಅಲೈನ್‌ಮೆಂಟ್ ಹಾಗೂ ಬ್ಯಾಲೆನ್ಸ್
ಎಲ್ಲಾ ರೀತಿ (Yellow Board) ಕಾರುಗಳು ಟೆಂಪೋಟ್ರಾವೆಲ್ಸ್ ವಾಹನಗಳಿಗೆ ರಿಯಾಯಿತಿ ದರದಲ್ಲಿ ಮಾಡಿಕೊಡಲಾಗುವುದು. (ಷರತ್ತುಗಳು ಅನ್ವಯಿಸುತ್ತದೆ.)
9480481000

ಮನೆ ಮಾರಾಟಕ್ಕಿದೆ
ಲಾಲ್ ಬಹದ್ದೂರು ಶಾಸ್ತ್ರಿ ನಗರ, ಮನೆ ನಂಬರ್ 1293, ಗ್ರೌಂಡ್ 1ನೇ ಮತ್ತು 2ನೇ ಅಂತಸ್ತು
9880729299

SITE FOR SALE
40X60 WEST DATTAGALLI KANAKADASA NAGAR
9880273834

ವಧು–ವರಾನ್ವೇಷಣೆ
ಒಕ್ಕಲಿಗ/ಕುರುಬ/ ಲಿಂಗಾಯತ/ನಾಯಕ/ SC & ಎಲ್ಲ ಜಾತಿಯ ವಧು–ವರರಿಗಾಗಿ ಕೂಡಲೇ ಸಂಪರ್ಕಿಸಿ: (II Marriages Also)
9343175000

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7204494854

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೂರೆ ನಾಲ್ವರ ದೈವ ಚೌಡಪ್ಪ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ: ಸಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳಕೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8296341145

ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು
Famous Astrologer
ಪಂಡಿತ್ ಸಂತೋಷ್. 9741250896
ಕಾಣತೂರ್ ನಾಲ್ವರ ದೈವ, ಕಲ್ಲುಟಿ ಭಗವತಿ ಶಕ್ತಿಯಿಂದ ದಾಂಪತ್ಯ ಸಮಸ್ಯೆ, ಲೈಂಗಿಕ ಸಮಸ್ಯೆ, ಸ್ತ್ರೀ ಪುರುಷ ಪ್ರೇಮ ವಿಚಾರ, ಶತ್ರು ಬಾಧೆ, ಹಣಕಾಸಿನ ತೊಂದರೆ, ಮಾನಸಿಕ ಚಿಂತೆ, ಪ್ರೇತ ಬಾಧೆ, ವಿದೇಶ ಪ್ರಯಾಣ ಇನ್ನೂ ಮುಂತಾದ ಯಾವುದೇ ಕಠಿಣ ಸಮಸ್ಯೆಗಳಿಗೆ 3 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ವಿನಯ ಮಾರ್ಗ ರಸ್ತೆ, ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಎದುರು, ಬ್ಯಾಂಕ್ ಆಫ್ ಬರೋಡ ಪಕ್ಕ, ಸಿದ್ಧಾರ್ಥ ನಗರ, ಮೈಸೂರು

WANTED
Healthcare Sales Executive & Manager at Mysore / Mandya / Hassan / need Healthcare Business Development Executive & Manager / fresh or having sales & supply experience in / health-care / surgical / pharma or medical devices is an added advantage part time person can also apply.
Contact No 888-464-5218, send cv to myfamilycustomercare@gmail.com

ಜಮೀನು ಮಾರಾಟಕ್ಕಿದೆ
1.5 ಎಕರೆ ಜಮೀನು ಹುಲ್ಲಹಳ್ಳಿ ಇಂದ 5 ಕಿ.ಮೀ ದೂರದಲ್ಲಿ 80 ಲಕ್ಷಗಳಿಗೆ ಮತ್ತು 10 ಗುಂಟೆ ಜಮೀನು ಶ್ರೀರಾಂಪುರ ರಿಂಗ್ ರಸ್ತೆಯಿಂದ 15 ಕಿ ಮೀ ದೂರದಲ್ಲಿ 13 ಲಕ್ಷಗಳಿಗೆ ಮಾರಾಟಕ್ಕಿದೆ. (Owner)
7411110087

ನಿವೇಶನ ಬೇಕಾಗಿದೆ
ಮೈಸೂರಿನ ರಾಮಕೃಷ್ಣನಗರದಲ್ಲಿ 40x60 ಅಳತೆಯಿರುವ ನಿವೇಶನ ಬೇಕಾಗಿದೆ. ಮಾಲೀಕರು ನೇರವಾಗಿ ಸಂಪರ್ಕಿಸಿ:
9986299481
9164434726

SITES FOR SALE
20x30, 30x40
(Bank loan available)
Srirampura Ring Road, Mysuru.
Mob: 8050345574

ಸಂಪು ಟ್ಯಾಂಕ್ ಕ್ಲೀನಿಂಗ್
New Year offer Rs. 999
Mob: 7760810381

DOCUMENT LOST
Shahin Taj, No. 878, Beedi Colony, Azeez Sait Nagar, Mysore, I lost my posession letter and intimation of allotment Property No. 878 on 27-12-2024.
Finders please contact:
Mob: 8722834960

WANTED
School office & teaching staff
* Wanted office and teaching staff for school with any Degree.
* Candidates with fluency in English communication can apply.
School: Wisdom School.
Place: K.R. Nagar.
Mob: 8792952652

Premium Site for Sale
30x40 W/F & S/W Corner in Lakshmipuram, Vasan Eye Care backside.
8792207164, 9986300002

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಹೆಸರಾಂತ ಕಂಪನಿಯಲ್ಲಿ EX-Service Gun man, Security Gaurd ಬೇಕಾಗಿದ್ದಾರೆ.
ವೇತನ: Gun man - 35000/- 26 Days
Security Gaurd-18000/- 26 Days
ESI, PF & Bonus ಸೌಲಭ್ಯವಿರುತ್ತದೆ
9741300222
9880116412

ಹೊಸ ಮನೆ ಮಾರಾಟಕ್ಕಿದೆ
30x40, 3BHK ಡ್ಯೂಪ್ಲೆಕ್ಸ್ ಈಸ್ಟ್ ಫೇಸ್ All ಟೀಕ್, ಗ್ರ್ಯಾನೈಟ್ಸ್–ಜಾಗ್ವಾರ್ ಫಿಟಿಂಗ್, V–ಗಾರ್ಡ್‌ವೈರಿಂಗ್ Build Area 2500 Sqft ಬೆಲೆ 85 ಲಕ್ಷ, ಸಾತಗಳ್ಳಿ VTU ಕಾಲೇಜು ಹತ್ತಿರ
SBR 9900840025

CAR FOR SALE
Hansani Sunny model No. 2018, yellow board automatic, one hand drive CNG also only 85,000 kilometre run, approximate paid showroom 11 Lakhs. Now 5 Lakhs.
9769898402, 9819808094

JOB OPENING FOR FEMALE (DAY SHIFT)
Position: 1) Data Entry Operator, (2) Telecalling.
Salary: Upto Rs. 16,000 plus incentives. Location: Hebbal 1st Stage, Mysore.
Mob: 7338224174

ತಕ್ಷಣ ಬೇಕಾಗಿದ್ದಾರೆ
ಮಸಾಲಪುಡಿ ತಯಾರಿಸುವ ಕಂಪನಿಗೆ ಮಸಾಲ ಪದಾರ್ಥಗಳನ್ನು ಉರಿದು ಪುಡಿ ಮಾಡಲು ಅನುಭವವಿರುವ 30 ರಿಂದ 50 ವಯಸ್ಸಿನ ಮಹಿಳಾ ಕೆಲಸಗಾರರು ಬೇಕಾಗಿದ್ದಾರೆ.
ಸಂಪರ್ಕಿಸಿರಿ
7019012485

INVESTOR ಬೇಕಾಗಿದ್ದಾರೆ
Leading Food Products Business ಅಭಿವೃದ್ಧಿ ಪಡಿಸಲು 50 ಲಕ್ಷಗಳವರೆಗೆ Funds ಬೇಕಾಗಿದೆ. 20% ಡಿವಿಡೆಂಡ್ & ಸೂಕ್ತ ಭದ್ರತೆಯೊಂದಿಗೆ ಕನಿಷ್ಠ 2 ಲಕ್ಷದಿಂದ 5 ಲಕ್ಷದವರೆಗೆ Invest ಮಾಡುವವರು
ಸಂಪರ್ಕಿಸಿರಿ
7019012485

CARAVAN FOR SALE
Brand New Condition, 2018 Model, 3800 km Run KA Registration
Call: 99000 50006

ಮನೆ ಮಾರಾಟಕ್ಕಿದೆ
50x25 ಉತ್ತರ ದಿಕ್ಕು
G/F 2 BHK, F/F 1BHK,
ನಮೂನೆ 3 ಖಾತೆ ಹೊಸಹುಂಡಿ ಗೇಟ್, ರಿಂಗ್ ರೋಡ್ ಹತ್ತಿರ, ಬೆಲೆ 58 ಲಕ್ಷ
ಸಂಪರ್ಕಿಸಿ:
9686066940, 6366679711

ಕಳೆದಿದೆ
ಎಸ್.ರಾಮಲಿಂಗು (ಆಧಾರ್ ನಂ.771362683662) ನಂ.42/2, ಸುಭಾಷ್‌ನಗರ, ಕುಂಬಾರಕೊಪ್ಪಲು, ಮೇಟಗಳ್ಳಿ ಅಂಚೆ, ದೇವರಾಜ ಮೊಹಲ್ಲಾ, ಮೈಸೂರು–570016ನಲ್ಲಿ ವಾಸವಿದ್ದು, ನನಗೆ ಸೇರಿದ ನಂ.32 ಡಿ–6, 1ನೇ ಮುಖ್ಯರಸ್ತೆ, ಕುಂಬಾರಕೊಪ್ಪಲು, ದೇವರಾಜಮೊಹಲ್ಲಾ, ಮೈಸೂರು ಈ ಸ್ವತ್ತಿನ ನೋಂದಾಯಿತ ವಿಭಾಗ ಪತ್ರವು ಕಳೆದಿದ್ದು, ಸಿಕ್ಕಿದವರು ಸಂಪರ್ಕಿಸಿ
8660748749

ಸಂಪು, ಟ್ಯಾಂಕ್ ಮತ್ತು ಸೋಲಾರ್ ಕ್ಲೀನಿಂಗ್. ಸಂಪರ್ಕಿಸಿ
8197383645, 9008711654

ಅಂಜನ ಶಾಸ್ತ್ರದ ಮೂಲಕ ಪರಿಹಾರ ಶ್ರೀ ಅಂಜನ ದೇವಿ ಆರಾಧಕರು ಪಂ॥ ಶ್ರೀನಿವಾಸ್ ಆಚಾರ್ಯ
ಮೈಸೂರಿನಲ್ಲಿ ಬಹು ವರ್ಷದಿಂದ ಖಾಯಂ ಆಗಿ ನೆಲೆಸಿರುತ್ತಾರೆ. ಅನೇಕ ಜನರು ಇವರಲ್ಲಿ ಪರಿಹಾರ ಪಡೆದಿರುತ್ತಾರೆ. ಇವರು ವಂಶಪಾರಂಪರ್ಯ ಜ್ಯೋತಿಷ್ಯರು. ಇವರಲ್ಲಿ ಜ್ಯೋತಿಷ್ಯ ಕೇಳಿದರೆ ನಿರಾಸೆ ಆಗುವ ಮಾತೆ ಇಲ್ಲ. ಫೋನಿನ ಮೂಲಕ ಪರಿಹಾರ.
Mob: 9663466548

ಬೇಕಾಗಿದ್ದಾರೆ
MARUTHI SUZUKI ARENA AND TATA MOTORS CAR SHOWROOM ಗಳಿಗೆ ಮತ್ತು ಆಫೀಸ್ ಕೆಲಸದ ಉದ್ಯೋಗಗಳಿಗೆ ತಕ್ಷಣ ಯುವಕ ಯುವತಿಯರು ಬೇಕಾಗಿದ್ದಾರೆ ಯಾವುದೇ ಸಂದರ್ಶನ ಇರುವುದಿಲ್ಲ ಪ್ರಸಿದ್ಧ ಕಂಪನಿಗಳಲ್ಲಿ, ಅಕೌಂಟೆಂಟ್, ಡೇಟಾ ಆಪರೇಟರ್, ಟೆಲಿಕಾಲರ್, ಕ್ಯಾಶಿಯರ್, ಆಫೀಸ್ ಬಾಯ್, ಮತ್ತು ಮ್ಯಾನುಫ್ಯಾಕ್ಚರಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ, ಶಿಕ್ಷಣ 4ನೇ ತರಗತಿ ಇಂದ ಯಾವುದೇ ಪದವೀಧರರು, (*ಸಂಬಳ: 18000rs ಇಂದ 30000rs + ಇನ್ಸೆಂಟಿವ್ಸ್*) ಹೆಚ್ಚಿನ ಮಾಹಿತಿಗಾಗಿ ಇಂದೇ ಸಂಪರ್ಕಿಸಿ.
9535849148, 7411273440

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7996497954

SITE FOR SALE
40x40 Corner
Vishwa Manava Enclave, Vijayanagar 4th Stage.
Mob: 8050821108

SITE FOR SALE
30X40 SITE @ ROOPA NAGARA
9880273834

ವೆರಿಟಾಸ್ ಫೈನಾನ್ಸ್ ಪ್ರೈ.ಲಿ.
ಗ್ರಾಮ ಪಂಚಾಯಿತಿಯ 9 & 11A, 11B ಈಸ್ವತ್ತುಗಳಿಗೆ ಮನೆ ಕಟ್ಟಲು RCC, ಹೆಂಚಿನ ಹಾಗೂ ಶೀಟಿನ ಮನೆಗಳಿಗೆ ಅಡಮಾನ ಸಾಲ ದೊರೆಯುತ್ತದೆ. Upto 90 kms ವರೆಗೆ
9880254324
9986180101

WANTED
North - West Corner Site in Mysore City
8123387555

GREAT OPPORTUNITY
Sales Specialist (M/F) 3Nos.
Experienced in Real Estate Industry Only.
(if required accommodation will be provided)
Mahendra Developers
8088063609

R S CONSTRUCTION
ENGINEERS & CONTRACTORS
ನಿಮ್ಮ ಕನಸಿನ ಮನೆಯನ್ನು, ಉತ್ಕೃಷ್ಟ ಗುಣಮಟ್ಟದಲ್ಲಿ ಅತ್ಯಂತ ಕಡಿಮೆ ಬೆಲೆಯಲ್ಲಿ ನಾವು ನಿರ್ಮಿಸಿ ಕೊಡುತ್ತೇವೆ.
ದರ 1,80,000/– ಪ್ರತಿ ಚದರ
ಉಚಿತ ಪ್ಲಾನ್ ಕೂಡ ಮಾಡಿಕೊಡಲಾಗುತ್ತದೆ. ಇಂದೇ ಸಂಪರ್ಕಿಸಿ
9538575009
7019151884

WANTED
1. Site Engineer with exp 2Nos.
2. Cook (F) with exp (Food and accommodation will be provided)
Mahendra Developers
8088063609

SITES FOR SALE
Madhuvana site 30x40
30x50 site for sale
30x40 house for sale
20x30 house for sale
20x40 house for sale.
40x50 site for sale.
Mob: 9008711654

ವಾಸ್ತುಪ್ರಕಾರ ಆಲ್ಟ್ರೇಷನ್ ಕೆಲಸ ಮಾಡಿಕೊಡಲಾಗುತ್ತದೆ
ಹಳೆ ಮನೆ ಕೆಲಸ ಮತ್ತು ಬಣ್ಣದ ಕೆಲಸ ಗಾರೆ ರಿಪೇರಿ ಮತ್ತು ತಾರಸಿ ಸೋರುವಿಕೆ ಸರಿಪಡಿಸಿಕೊಡಲಾಗುತ್ತದೆ.
9880813586
6360884930

ಖಾಲಿ ಜಾಗ 5000 ಅಡಿ ಬಾಡಿಗೆಗೆ ದೊರೆಯುತ್ತದೆ
1ನೇ ಹಂತ, ವಿಜಯನಗರ ವಾಟರ ಟ್ಯಾಂಕ್ ಪಕ್ಕ
9448978383

100% NEEM WOOD PLYWOOD & DOORS
@ FACTORY DEPOT RATES
NEEM BOND PLATINUM ® 10yrs WARRANTY
ISO 9001:2015 Certified Depot
CALL 99012 91267
98454 26862

FOR SALE
1. Sites @ Bogadi Near Rainbow School
Including @ Registration 20L
2. 30x40 Sites @ JnanaBharathi Layout, JP Nagar
3. 40x60 West Facing Site @ Sharada Layout JP Nagar.
4. 30x40, Sites Attach to Brahmins Layout, Just 5 Kms from Ring Road@Just 20 Lakh
PRAKRUTHI PROPERTIES
95386 90359, 90359 90359

ಉದ್ಯೋಗ ಅವಕಾಶ
ಬಿಂದ ಬಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI / PF ಸೌಲಭ್ಯ ಊಟ, ವಸತಿಯೊಂದಿಗೆ ಸಂಬಳ – [illegible]
7337645977, 7892046990

ಪ್ರಮಾಣ ಪತ್ರ
ಮೈಸೂರು ಜಿಲ್ಲೆ, ತಿ. ನರಸೀಪುರ ತಾಲ್ಲೂಕು, ಬನ್ನೂರು ಹೋಬಳಿ, ಹನುಮನಾಳು ಗ್ರಾಮದಲ್ಲಿ ವಾಸವಾಗಿರುವ ಗೌರಮ್ಮ ಕೋಂ ಜೆ. ಚನ್ನಸ್ವಾಮಿ ಆದ ನಾನು ಪ್ರಮಾಣೀಕರಿಸುವುದೇನೆಂದರೆ, ಆಧಾರ್ ಕಾರ್ಡ್‌ನಲ್ಲಿ (252098637356) ಮತ್ತು ಇತರೆ ದಾಖಲಾತಿಗಳಲ್ಲಿ ನನ್ನ ಹೆಸರು ಗೌರಮ್ಮ ಎಂದು ಇರುತ್ತದೆ. ಆದರೆ ನನ್ನ ಹೆಸರಿನಲ್ಲಿ ಬನ್ನೂರು ಶಾಖೆಯ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಬ್ಯಾಂಕ್‌ನಲ್ಲಿ ಸದರಿ ಖಾತೆ 42709217407 ರಲ್ಲಿ ನನ್ನ ಹೆಸರು ಪುಟ್ಟಗೌರಮ್ಮ ಎಂದು ನಮೂದಾಗಿರುತ್ತದೆ. ಬ್ಯಾಂಕಿನ ಖಾತೆಯಲ್ಲಿ ನಮೂದಾಗಿರುವ ನನ್ನ ಹೆಸರು ಪುಟ್ಟಗೌರಮ್ಮ ಎಂಬುದನ್ನು ತೆಗೆದು, ನನ್ನ ಆಧಾರ್ ಕಾರ್ಡ್‌ನಂತೆ ಗೌರಮ್ಮ ಎಂದು ತಿದ್ದುಪಡಿ ಮಾಡಿಸಿಕೊಳ್ಳಲು ನೋಟರಿ ಉದಯಕುಮಾರ್‌ರವರ ಎದುರು ಪ್ರಮಾಣೀಕರಿಸುತ್ತಿದ್ದೇನೆ.
ಸಹಿ/– ಗೌರಮ್ಮ

ಸೈಟು ಮಾರಾಟಕ್ಕಿದೆ
30x50 N/F
ಸರ್ಕಾರಿ ನೌಕರರ ಬಡಾವಣೆ
ಇಲವಾಲ
ಸಂಪರ್ಕಿಸಿ: 7338445412

ಬೇಕಾಗಿದ್ದಾರೆ
ನಗರದ ಹೋಟೆಲ್‌ಗೆ ಚೈನೀಸ್ ಅಡುಗೆ ಭಟ್ಟರು/ ಸಹಾಯಕರು ಬೇಕಾಗಿದ್ದಾರೆ
ವೇತನ: 20,000 ರೂ.
9591255667

ಮೆನ್ ಸೆಲ್ಯೂನ್‌ಗೆ ಕೆಲಸಕ್ಕೆ ಬೇಕಾಗಿದ್ದಾರೆ
ನುರಿತ ಯುವ ಕೆಲಸಗಾರರು ಸಂಪರ್ಕಿಸಿ:
9035200302

MUDA KHATA SITE SALE
East Facing Corner Site
8.7 Mtrs x 12 Mtrs
(Totally 1124 Sqft)
Direct Owner
Rs.3500 per Sqft
(Slightly Negotiable)
9342123373

ಬೇಕಾಗಿದ್ದಾರೆ
ಕುವೆಂಪುನಗರ ಸುತ್ತಮುತ್ತ ಇರುವ 30 ರಿಂದ 40 ವರ್ಷದವರು ಸ್ಯಾಂಡ್‌ವಿಚ್ ಜ್ಯೂಸ್, ಮಿಲ್ಕ್‌ಶೇಕ್ ಮಾಡಲು ಬೇಕಾಗಿದ್ದಾರೆ.
ಲಸ್ಸಿ ಶಾಪ್ ಭಾನವಿ ಆಸ್ಪತ್ರೆ ಎದುರು, ಅನಿಕೇತನ ರಸ್ತೆ, ಮೈಸೂರು
89046-17400
94480-54151

SC ಆದಿ ಕರ್ನಾಟಕ (ಬಲಗೈ)
ಸ್ಥಾಪನೆ 2010
MBBS, MD, MS, BE, M.Tech, BAMS, MSc, MBA, MCA, M.Com, MA Phd, BSc, B.com, BCA, BA, BEd
ವಧುವರರಿಗೆ ಸಂಪರ್ಕಿಸಿ
ನವಿಲೂರು ರಂಗಸ್ವಾಮಿ
ಮೈಸೂರು ಸಿಟಿ ವಧುವರರ ಮಾಹಿತಿ ಕೇಂದ್ರ, ಎನ್.ಆರ್.ಮೊಹಲ್ಲಾ, ಮೈಸೂರು
8711974172

Wanted Urgently
FOR COMPANY
a) Project Managers (Construction field)
b) Site Supervisor
c) Junior Civil Engineers
d) Post construction supervisor
e) Office Assistant. *Contact:*
Mob: 7022354141

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:
6361056646, 7676844160

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನ ಅಡಕನಹಳ್ಳಿ ಏರಿಯಾದಲ್ಲಿ ಕೆಲಸ ಮಾಡಲು ಅನುಭವವುಳ್ಳ ಹಾಗೂ ಕಂಪ್ಯೂಟರ್ ಅನುಭವವುಳ್ಳ ಸೆಕ್ಯೂರಿಟಿ ಸೂಪರ್‌ವೈಸರ್ ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC & ಮೇಲ್ಪಟ್ಟು
ಸಂಬಳ: 27000 W/o (12 hours)
ಸಂಪರ್ಕಿಸಬೇಕಾದ ಸಂಖ್ಯೆಗಳು
9620667819
9620777819

ತಕ್ಷಣ ಬೇಕಾಗಿದ್ದಾರೆ
ಹೆಬ್ಬಾಳದ ಕ್ಯೂಬರ್ ಸುತ್ತಮುತ್ತ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ : PUC
ಸಂಬಳ: 21500 W/o (8 hours)
ಊಟ ತಿಂಡಿ ಸೌಲಭ್ಯವಿರುತ್ತದೆ
9880727819
9620777819

SK CONSTRUCTION
ಹೊಸ ಮನೆ ಕಟ್ಟಬೇಕೆ ಚಿಂತೆ ಬೇಡ... ನಿಮ್ಮ ಕೈಗೆಟುಕುವ ಬೆಲೆಯಲ್ಲಿ ಅತಿ ಉತ್ತಮ ಗುಣಮಟ್ಟದಲ್ಲಿ Engineer Plan, 3D Elevation ಸಹಿತ ನಾವೆ ಲೋನ್ ಮಾಡಿ ನಿಮ್ಮ ಕನಸಿನ ಮನೆ ಕಟ್ಟಿ ಕೊಡುತ್ತೇವೆ.
9620528490

ಕುರುಬ ವಧು ಬೇಕಾಗಿದೆ
ಎಂಎ, ಬಿಎಡ್ ಮಾಡಿ ಖಾಸಗಿ ಶಾಲೆಯಲ್ಲಿ ಟೀಚರ್ ಆಗಿರುವ 28 ವರ್ಷದ ವರನಿಗೆ ವಧು ಬೇಕಾಗಿದೆ.
9035200302
9844544458

ಮೈಸೂರು ಮಿತ್ರ — ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ
ರೂ. 630 ಮಾತ್ರ

ಮತ್ತಷ್ಟು ವರ್ಗೀಕೃತ ಜಾಹೀರಾತು
ಪುಟ 10 ರಲ್ಲಿ

ತಿ.ನರಸೀಪುರ ತಾಲೂಕು ಕೃಷಿಕ ಸಮಾಜದ ಚುನಾವಣೆ

ಶಿವಮಲ್ಲಪ್ಪ ಅಧ್ಯಕ್ಷ, ನಾಗರಾಜು ಉಪಾಧ್ಯಕ್ಷ



ಕೃಷಿಕ ಸಮಾಜದ ಅಧ್ಯಕ್ಷರಾಗಿ ಬಿ.ಎಂ.ಶಿವಮಲ್ಲಪ್ಪ, ಉಪಾಧ್ಯಕ್ಷರಾಗಿ ನಾಗರಾಜು ಅವಿರೋಧವಾಗಿ ಆಯ್ಕೆಯಾದರು.

ತಿ.ನರಸೀಪುರ, ಜ.3– ತಾಲೂಕು ಕೃಷಿಕ ಸಮಾಜದ ಅಧ್ಯಕ್ಷರಾಗಿ ಸತತ 4ನೇ ಬಾರಿಗೆ ಬೆನಕನಹಳ್ಳಿ ಬಿ.ಎಂ.ಶಿವಮಲ್ಲಪ್ಪ, ಉಪಾಧ್ಯಕ್ಷರಾಗಿ ಆಲಗೂಡು ನಾಗರಾಜು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಪಟ್ಟಣದ ಕೃಷಿ ಇಲಾಖೆ ಕಚೇರಿಯಲ್ಲಿ ಮುಂದಿನ 5 ವರ್ಷಗಳ ಅವಧಿಗೆ ಪದಾಧಿಕಾರಿಗಳನ್ನು ಆಯ್ಕೆ ಮಾಡುವ ಸಂಬಂಧ ಶುಕ್ರವಾರ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಬಿ.ಎಂ.ಶಿವಮಲ್ಲಪ್ಪ, ಉಪಾಧ್ಯಕ್ಷ ಸ್ಥಾನಕ್ಕೆ ಆಲಗೂಡು ನಾಗರಾಜು ನಾಮಪತ್ರ ಸಲ್ಲಿಸಿ ಅವಿರೋಧವಾಗಿ ಆಯ್ಕೆಯಾದರು. ಈ ಚುನಾವಣೆಯಲ್ಲಿ ಈ ಇಬ್ಬರೂ ಅವಿರೋಧವಾಗಿ ಆಯ್ಕೆಯಾಗುವ ಮೂಲಕ ಸತತ 4ನೇ ಬಾರಿಗೆ (20 ವರ್ಷ) ಅಧ್ಯಕ್ಷ, ಉಪಾಧ್ಯಕ್ಷರಾದ ದಾಖಲೆಗೆ ಪಾತ್ರರಾದರು.

ಕಳೆದ ಡಿಸೆಂಬರ್‌ನಲ್ಲಿ ಕೃಷಿಕ ಸಮಾಜದ ನಿರ್ದೇಶಕರ ಆಯ್ಕೆಗಾಗಿ ಚುನಾವಣೆ ನಡೆದು ವಿದ್ಯೋದಯ ಶಿಕ್ಷಣ ಸಂಸ್ಥೆ ಗೌರವ ಕಾರ್ಯದರ್ಶಿ ಕೆ.ಪಿ.ಮಹದೇವಸ್ವಾಮಿ ಬಣದ 15 ಮಂದಿ ಬೆನಕನಹಳ್ಳಿ ಶಿವಮಲ್ಲಪ್ಪ ನೇತೃತ್ವದಲ್ಲಿ ಭರ್ಜರಿ ಜಯ ಸಾಧಿಸಿದ್ದರು. ಎದುರಾಳಿ ಪುಟ್ಟಬುದ್ಧಿ ತಂಡದ ಯಾರೊಬ್ಬರೂ ಗೆಲುವು ಸಾಧಿಸಲು ವಿಫಲರಾಗಿ ಸೋಲು ಅನುಭವಿಸಿದ್ದರು.

ಇದೇ ವೇಳೆ ಪ್ರಧಾನ ಕಾರ್ಯದರ್ಶಿಯಾಗಿ ರಾಜಗೋಪಾಲ್, ಖಜಾಂಚಿಯಾಗಿ ನಂಜುಂಡಸ್ವಾಮಿ ಹಾಗೂ ಜಿಲ್ಲಾ ಪ್ರತಿನಿಧಿಯಾಗಿ ಕೆ.ಜೆ.ಚಿಕ್ಕ ಜವರಪ್ಪ ಆಯ್ಕೆಯಾದರು. ಕೃಷಿ ಇಲಾಖೆ ಸಹಾಯಕ ನಿರ್ದೇಶಕಿ ಕೆ.ಎನ್.ಸುಹಾಸಿನಿ ಹಾಗೂ ಸಹಾಯಕ ಚುನಾವಣಾಧಿಕಾರಿಯಾಗಿ ರಾಘವೇಂದ್ರ ಕಾರ್ಯ ನಿರ್ವಹಿಸಿದರು.

ನೂತನ ಅಧ್ಯಕ್ಷ ಬಿ.ಎಂ.ಶಿವಮಲ್ಲಪ್ಪ ಮಾತನಾಡಿ, ಕೃಷಿಕ ಸಮಾಜದ ಅಧ್ಯಕ್ಷನಾಗಿ ಕಳೆದ 3 ಅವಧಿಗೆ ಕೆಲಸ ಮಾಡಿದ್ದೇನೆ. ಹೈಕೋರ್ಟ್‌ನಲ್ಲಿ ಚುನಾವಣೆ ಸಂಬಂಧ ತಡೆಯಾಜ್ಞೆ ಇದ್ದ ಹಿನ್ನೆಲೆಯಲ್ಲಿ ಸಮಾಜದ ಕಾರ್ಯ ಚಟುವಟಿಕೆ ಕುಂಠಿತವಾಗಿತ್ತು. ಇದೀಗ ಸಮಿತಿ ನಿರ್ದೇಶಕರು ಮತ್ತೊಂದು ಅವಧಿಗೆ ಸೇವೆ ಮಾಡಲು ಅವಕಾಶ ಕಲ್ಪಿಸಿಕೊಟ್ಟಿದ್ದಾರೆ. ಎಲ್ಲರಿಗೂ ಕೃತಜ್ಞತೆ ಸಲ್ಲಿಸುತ್ತೇನೆ ಎಂದರು.

ಕೃಷಿ ಇಲಾಖೆ ಹಾಗೂ ಸರ್ಕಾರದಿಂದ ದೊರಕುವ ಸವಲತ್ತುಗಳನ್ನು ಕೃಷಿಕರಿಗೆ ದೊರಕಿಸಿಕೊಡಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಜಿಲ್ಲಾ ಮತ್ತು ರಾಜ್ಯ ಕಮಿಟಿಯೊಂದಿಗೆ ಸಂಪರ್ಕ ಸಾಧಿಸಿ ಎಲ್ಲರನ್ನೂ ಒಗ್ಗೂಡಿಸಿ ತಾಲೂಕು ಕೃಷಿಕ ಸಮಾಜವನ್ನು ಮಾದರಿ ಮಾಡಲು ನಿರಂತರ ಪ್ರಯತ್ನದೊಂದಿಗೆ ಸಾಧಿಸುವ ಗುರಿ ಹೊಂದಿದ್ದೇನೆ. ನನ್ನ ಪರಿಶ್ರಮದೊಂದಿಗೆ ಬೆಂಗಾವಲಾಗಿ ಸದಸ್ಯರ ಸಹಕಾರ ಬಯಸುತ್ತೇನೆ ಎಂದು ಮನವಿ ಮಾಡಿದರು.

ಚುನಾವಣೆ ನಂತರ ವಿಜೇತ ತಂಡ ಪಟ್ಟಣದ ವಿದ್ಯೋದಯ ಶಿಕ್ಷಣ ಸಂಸ್ಥೆಗೆ ಭೇಟಿ ನೀಡಿ ಗೌರವ ಕಾರ್ಯದರ್ಶಿ ಕೆ.ಪಿ.ಮಹದೇವಸ್ವಾಮಿ ಅವರನ್ನು ಅಭಿನಂದಿಸಿತು. ಈ ವೇಳೆ ಕೃಷಿಕ ಸಮಾಜದ ನಿರ್ದೇಶಕರಾದ ಕೆ.ಜಿ.ವೀರಣ್ಣ, ಬಿ.ಕುಮಾರ, ಪಿ.ವಿರೂಪಾಕ್ಷ, ಶಿವಸ್ವಾಮಿ, ಎಂ.ಸ್ವಾಮಿ, ಪಿ.ನಾಗರಾಜು, ಪಿ.ಶಶಿಧರ, ಬಿ.ಆರ್.ಪುರುಷೋತ್ತಮ, ಮುಖಂಡರಾದ ದೊಡ್ಡನ ಹುಂಡಿ ನಂಜುಂಡಸ್ವಾಮಿ, ಉಪನ್ಯಾಸಕ ಕುಮಾರಸ್ವಾಮಿ, ಪುರಸಭೆ ಸದಸ್ಯ ಎಸ್.ಕೆ.ಕಿರಣ್, ಪರಮೇಶ್ ಪಟೇಲ್, ಶಾಂತರಾಜು, ಆಲಗೂಡು ಕೃಷ್ಣ ಸೇರಿದಂತೆ ಮತ್ತಿತರಿದ್ದರು.

> 4ನೇ ಬಾರಿಗೆ ಕೃಷಿಕ ಸಮಾಜದ ಉಪಾಧ್ಯಕ್ಷನಾಗಿ ಆಯ್ಕೆಯಾಗಿದ್ದೇನೆ. ಈಗ ನಮ್ಮ ಮುಂದಿರುವ ಗುರಿ ತಾಲೂಕು ಕೃಷಿಕ ಭವನ ನಿರ್ಮಾಣ ಮಾಡಬೇಕೆಂಬುದಾಗಿದೆ. ಈಗಾಗಲೇ ರಾಜ್ಯ ಸರ್ಕಾರ 5 ಲಕ್ಷ ರೂ. ಅನುದಾನ ನೀಡಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವ ಡಾ. ಹೆಚ್.ಸಿ.ಮಹದೇವಪ್ಪ, ಸಂಸದ ಸುನೀಲ್ ಬೋಸ್ ಹಾಗೂ ಎಂಎಲ್‌ಸಿ ಡಾ. ಯತೀಂದ್ರ ಅವರಿಂದ ಅನುದಾನ ಪಡೆದು 35 ಲಕ್ಷ ರೂ. ವೆಚ್ಚದಲ್ಲಿ ಮಿನಿ ಕೃಷಿಕ ಭವನ ನಿರ್ಮಾಣ ಮಾಡಲಾಗುತ್ತದೆ.
>
> – **ಆಲಗೂಡು ನಾಗರಾಜು,** ಉಪಾಧ್ಯಕ್ಷರು ತಾಲೂಕು ಕೃಷಿಕ ಸಮಾಜ.

ಪಿಎಸ್‌ಐ ಹುದ್ದೆಗೆ ಆಯ್ಕೆ



ನಂಜನಗೂಡು, ಜ.3– ತಾಲೂಕಿನ ಯಡಹಳ್ಳಿ ಗ್ರಾಮದ ಎಸ್.ವಿದ್ಯಾಶ್ರೀ ಅವರು ಪಿಎಸ್‌ಐ ಹುದ್ದೆಗಾಗಿ ನಡೆದ ಪರೀಕ್ಷೆಯಲ್ಲಿ 16ನೇ ರ್‍ಯಾಂಕ್ ಪಡೆದಿದ್ದಾರೆ. ಇದಕ್ಕೂ ಮುನ್ನಾ ಇವರು 2024ರಲ್ಲಿ ಕಮರ್ಷಿಯಲ್ ಟ್ಯಾಕ್ಸ್ ಇನ್ಸ್‌ಪೆಕ್ಟರ್, ವಿಎ ಹಾಗೂ ಕೆಎಸ್‌ಟಿ ಹುದ್ದೆಗೂ ಸಹ ಆಯ್ಕೆಯಾಗಿದ್ದರು. ಈಕೆ ಯಡಹಳ್ಳಿ ಗ್ರಾಮದ ರೈತ ಸುರೇಶ್, ಭಾಗ್ಯಮ್ಮ ದಂಪತಿ ಪುತ್ರಿ. ಈಕೆಯ ಸಾಧನೆಗೆ ಪೋಷಕರು ಹರ್ಷ ವ್ಯಕ್ತಪಡಿಸಿದ್ದಾರೆ.

ಜ.19ಕ್ಕೆ ಪಿಎಲ್‌ಡಿ ಬ್ಯಾಂಕ್ ಚುನಾವಣೆ

ಕೆ.ಆರ್.ನಗರ, ಜ.3– ತಾಲೂಕು ಪಿಎಲ್‌ಡಿ ಬ್ಯಾಂಕ್ ಆಡಳಿತ ಮಂಡಳಿ ನಿರ್ದೇಶಕರ ಸ್ಥಾನಕ್ಕೆ ಜ.19 ರಂದು ನಡೆಯಲಿದ್ದು, ಜ.5ರಿಂದ 11 ರವರೆಗೆ ಬೆಳಗ್ಗೆ 11 ರಿಂದ ಮಧ್ಯಾಹ್ನ 3 ಗಂಟೆ ಒಳಗೆ ನಾಮಪತ್ರ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ ಎಂದು ಚುನಾವಣಾಧಿಕಾರಿ, ಹುಣಸೂರು ಉಪ ವಿಭಾಗದ ಸಹಕಾರ ಸಂಘಗಳ ಸಹಾಯಕ ನಿಬಂಧಕಿ ಅನುಸೂಯ ತಿಳಿಸಿದ್ದಾರೆ.

ಜ.12ರಂದು ಬೆಳಗ್ಗೆ 11.30ಕ್ಕೆ ಬ್ಯಾಂಕಿನಲ್ಲಿ ನಾಮಪತ್ರ ಪರಿಶೀಲನೆ ನಡೆಯಲಿದ್ದು, ವಾಪಸ್ ಪಡೆಯಲು ಜ.13 ಕೊನೆ ದಿನ. ಜ.14ರಂದು ಚುನಾವಣೆಗೆ ಸ್ಪರ್ಧಿಸಿರುವವರ ಅಂತಿಮ ಪಟ್ಟಿಯನ್ನು ಪ್ರಕಟಿಸಲಿದ್ದು, ಜ.19 ರಂದು ಬೆಳಗ್ಗೆ 9ರಿಂದ ಸಂಜೆ 4 ಗಂಟೆವರೆಗೆ ಪಟ್ಟಣದ ಬನ್ನಿಮಂಟಪ ಬಡಾವಣೆಯಲ್ಲಿರುವ ಪಿಎಲ್‌ಡಿ ಬ್ಯಾಂಕ್ ರೈತ ಸಮುದಾಯ ಭವನದಲ್ಲಿ ಮತದಾನ ನಡೆಯಲಿದ್ದು, ನಂತರ ಮತ ಎಣಿಕೆ ನಡೆಸಿ ಫಲಿತಾಂಶ ಪ್ರಕಟಿಸಲಾಗುತ್ತದೆ ಎಂದು ತಿಳಿಸಿದ್ದಾರೆ. ಆಕಾಂಕ್ಷಿಗಳು ಮತ್ತು ಮತದಾರರು ಹೆಚ್ಚಿನ ಮಾಹಿತಿಗಾಗಿ ಚುನಾವಣಾ ಕಾರ್ಯ ನಡೆಯುವ ದಿನಗಳಂದು ಕಚೇರಿ ಸಮಯದಲ್ಲಿ ಸಂಪರ್ಕಿಸಬಹುದು ಎಂದು ಮಾಹಿತಿ ನೀಡಿದ್ದಾರೆ.

ಹೆಡಿಯಾಲದಲ್ಲಿ ಪಿಡಿಓ ವಿರುದ್ಧ ಸದಸ್ಯರ ಪ್ರತಿಭಟನೆ



ಪಿಡಿಓ, ಜಿಪಂ ಸಿಇಓ ವಿರುದ್ಧ ಹೆಡಿಯಾಲ ಗ್ರಾಪಂ ಸದಸ್ಯರು ಪ್ರತಿಭಟನೆ ನಡೆಸಿದರು.

ಮಲ್ಕುಂಡಿ, ಜ.3– ಕಳೆದ 1 ವರ್ಷದಿಂದ ಗ್ರಾಪಂ ವ್ಯಾಪ್ತಿಯಲ್ಲಿ ಯಾವುದೇ ಅಭಿವೃದ್ಧಿ ಕಾರ್ಯ ನಡೆದಿಲ್ಲ ಎಂದು ಆರೋಪಿಸಿ ಪಿಡಿಓ ಮತ್ತು ಜಿಪಂ ಸಿಇಓ ವಿರುದ್ಧ ನಂಜನಗೂಡು ತಾಲೂಕಿನ ಹೆಡಿಯಾಲ ಗ್ರಾಪಂ ಸದಸ್ಯರು ಪ್ರತಿಭಟನೆ ನಡೆಸಿದರು.

ಗ್ರಾಪಂ ಆವರಣದಲ್ಲಿ ಜಮಾಯಿಸಿದ ಸದಸ್ಯರು ಪಿಡಿಓ ನಾಗರಾಜು ಮತ್ತು ಜಿಪಂ ಸಿಇಓ ವಿರುದ್ಧ ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು. ಅಧ್ಯಕ್ಷರು ಅನಾರೋಗ್ಯದಿಂದ ಪಂಚಾಯಿತಿಗೆ ಬರುತ್ತಿಲ್ಲ. ಇಲ್ಲಿವರೆಗೆ ಯಾವುದೇ ಸಭೆ ನಡೆದಿಲ್ಲ. ಪಿಡಿಓ ನಾಗರಾಜು ಕೂಡ ಸಮಯಕ್ಕೆ ಸರಿಯಾಗಿ ಗ್ರಾಪಂಗೆ ಬರುತ್ತಿಲ್ಲ. 3 ವರ್ಷಗಳಿಂದ ನರೇಗಾ ಯೋಜನೆಯಡಿ ಯಾವುದೇ ಕಾಮಗಾರಿ ನಡೆಯದೇ ಅಭಿವೃದ್ಧಿ ಕಾಮಗಾರಿ ಕುಂಠಿತವಾಗಿದೆ. ಕಂದಾಯ ವಸೂಲಿಯಲ್ಲಿ ಮುಂದಿದ್ದರೂ ಅಭಿವೃದ್ಧಿ ಕಾರ್ಯ ನಡೆಸಲು ಅಧಿಕಾರಿಗಳಿಲ್ಲದಿರುವುದು ದುರಂತ ಎಂದರು.

ಈ ಬಗ್ಗೆ ಜಿಪಂ ಸಿಇಓಗೆ ಹಲವು ಬಾರಿ ಮನವಿ ಸಲ್ಲಿಸಿದರೂ ಯಾವುದೇ ಪ್ರಯೋಜನವಾಗಿಲ್ಲ. ಬದಲಿಗೆ ಬೇಜವಾಬ್ದಾರಿಯಿಂದ ವರ್ತಿಸುತ್ತಾರೆ ಎಂದು ಆರೋಪಿಸಿದ ಗ್ರಾಪಂ ಸದಸ್ಯರು ಗ್ರಾಪಂ ವ್ಯಾಪ್ತಿಯ ಗ್ರಾಮಗಳಲ್ಲಿ ಶೌಚಾಲಯ ನಿರ್ಮಿಸಿರುವ ಫಲಾನುಭವಿಗಳಿಗೆ ಹಣ ಪಾವತಿಸಿಲ್ಲ. ಇದರಿಂದ ಬೇಸತ್ತ ಸಾರ್ವಜನಿಕರು ಅಧಿಕಾರಿಗಳಿಗೆ ಹಿಡಿಶಾಪ ಹಾಕುತ್ತಿದ್ದಾರೆ. ಸಣ್ಣಪುಟ್ಟ ಕೆಲಸಗಳಿಗೂ ನಿತ್ಯ ಸಾರ್ವಜನಿಕರು ಪಂಚಾಯಿತಿಗೆ ಅಲೆದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಇ–ಸ್ವತ್ತು ಮಾಡಿಸಿಕೊಳ್ಳಲು 20 ರಿಂದ 30 ಸಾವಿರ ಕೊಡಬೇಕಿದೆ. ತಕ್ಷಣ ನಮ್ಮ ಪಂಚಾಯಿತಿಗೆ ಬೇರೆ ಪಿಡಿಓ ನೇಮಕ ಮಾಡದಿದ್ದರೇ ಜಿಪಂ ಎದುರು ಪ್ರತಿಭಟನೆ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು.

ಗ್ರಾಪಂ ಉಪಾಧ್ಯಕ್ಷ ನಾಗೇಶ್, ಸದಸ್ಯರಾದ ಗೋವಿಂದರಾಜು, ಸತೀಶ್, ನೆಹಮತ್ ಉಲ್ಲಾಖಾನ್, ಅಶ್ರಫ್ ಅಲಿ, ಮಂಜುಳ, ಅನುಪಮ, ಚನ್ನಪ್ಪ, ಕೃಷ್ಣ, ಭಾಗ್ಯ, ಬಂಗಾರಿ, ರಾಣಿ, ನೀಲಮ್ಮ, ಚಿಕ್ಕಮ್ಮ, ಮಹೇಂದ್ರ, ಶಿವರತ್ನ, ರಾಜಮ್ಮ, ಮಂಜು ಪ್ರತಿಭಟನೆಯಲ್ಲಿದ್ದರು.

ಪತ್ರಕರ್ತರ ಜೀವ ವಿಮಾ ಯೋಜನೆ ಜಾರಿ ತೃಪ್ತಿ ತಂದಿದೆ



ಕಾರ್ಯಕ್ರಮದಲ್ಲಿ ಕ್ಯಾಲೆಂಡರ್ ಬಿಡುಗಡೆಗೊಳಿಸಲಾಯಿತು.

ಹುಣಸೂರು, ಜ.3– ಪತ್ರಕರ್ತರ ಜೀವ ವಿಮಾ ಯೋಜನೆಯನ್ನು ಕಳೆದ ವರ್ಷದಿಂದ ಜಾರಿಗೊಳಿಸಿ ಸಾಮಾಜಿಕ ಭದ್ರತೆ ನೀಡುವಲ್ಲಿ ಕಾರ್ಯೋನ್ಮುಖವಾಗಿರುವುದು ತೃಪ್ತಿ ತಂದಿದೆ ಎಂದು ಶಾಸಕ ಜಿ.ಡಿ.ಹರೀಶ್‌ಗೌಡ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಪಾಲಿಸಿ ವಿತರಣೆ ಮತ್ತು ಕ್ಯಾಲೆಂಡರ್ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಮಾಹಿತಿ ಮತ್ತು ತಂತ್ರಜ್ಞಾನ ಅತೀ ವೇಗವಾಗಿ ಬೆಳೆಯುತ್ತಿದ್ದು, ಮಾಧ್ಯಮ ಲೋಕದಲ್ಲಿ ಡಿಜಿಟಲ್ ವಾಹಿನಿಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗಿದೆ. ಇದರಿಂದ ಮುದ್ರಣ ಮಾಧ್ಯಮಗಳು ಅಳಿವು ಉಳಿವಿನ ನಡುವೆ ಹೋರಾಟ ನಡೆಸುವ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಸಂಕಷ್ಟದಲ್ಲಿ ವಿಶೇಷವಾಗಿ ಗ್ರಾಮಾಂತರ ಪ್ರದೇಶದ ಪತ್ರಕರ್ತರು ಪತ್ರಿಕೆ ಅವಲಂಬಿಸಿ ಬದುಕು ಕಟ್ಟಿಕೊಳ್ಳುವುದು ಕಷ್ಟ ಸಾಧ್ಯವಾಗಿದೆ ಎಂದರು.

ಭವನಕ್ಕೆ ಅನುದಾನ: ನಗರದಲ್ಲಿ ನಿವೇಶನ ಖರೀದಿಸಿದಲ್ಲಿ ಭವನ ನಿರ್ಮಾಣಕ್ಕೆ ಅನುದಾನ ನೀಡಲು ಬದ್ಧ. ಈಗಾಗಲೇ ಹುಡಾದಿಂದ ನಿವೇಶನ ಗುರುತಿಸಲಾಗಿದೆ ಎಂದು ಸಂಘದ ಅಧ್ಯಕ್ಷರು ತಿಳಿಸಿದ್ದು, ಶೀಘ್ರ ನಿವೇಶನ ಸಂಘದ ಹೆಸರಿಗೆ ಪಡೆದಲ್ಲಿ ಅನುದಾನ ನೀಡಲಾಗುವುದು ಎಂದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ದೀಪಕ್, ಉದ್ಯಮಿ ರಾಜು ಶಿವರಾಜೇಗೌಡ, ಹುಣಸೂರು ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಕೃಷ್ಣಕುಮಾರ್ ಮಾತನಾಡಿದರು. ವೇದಿಕೆಯಲ್ಲಿ ಜಿಲ್ಲಾ ಸಂಘದ ಪ್ರಧಾನ ಕಾರ್ಯದರ್ಶಿ ನಾರಾಯಣ್, ದಾ.ರಾ.ಮಹೇಶ್, ಚೆಲುವರಾಜ್, ಮಹದೇವ್, ನಟರಾಜ್, ಪತ್ರ ಬರಹಗಾರ ಜಗದೀಶ್ ಇದ್ದರು.

ನಾಯಕ ಸಮುದಾಯದ ಶೈಕ್ಷಣಿಕ ಪ್ರಗತಿಗೆ ಒತ್ತು ನೀಡಿ

ಬಿಜೆಪಿ ರಾಜ್ಯ ಮುಖಂಡ ಸುಬ್ಬಣ್ಣ



ಕಾರ್ಯಕ್ರಮದಲ್ಲಿ ನಿವೃತ್ತ ನೌಕರರನ್ನು ಸನ್ಮಾನಿಸಲಾಯಿತು.

ನಂಜನಗೂಡು, ಜ.3– ಸರ್ಕಾರಿ ನೌಕರರು ನಾಯಕ ಸಮುದಾಯದ ಮಕ್ಕಳ ವಿದ್ಯಾಭ್ಯಾಸಕ್ಕೆ ನೆರವು ನೀಡುವಂತಹ ಕಾರ್ಯಕ್ರಮಗಳನ್ನು ರೂಪಿಸಿ, ಸಮುದಾಯದ ಶೈಕ್ಷಣಿಕ ಪ್ರಗತಿಗೆ ಒತ್ತು ನೀಡಬೇಕು ಎಂದು ಬಿಜೆಪಿ ರಾಜ್ಯ ಮುಖಂಡ ಕುಂಬರಹಳ್ಳಿ ಸುಬ್ಬಣ್ಣ ತಿಳಿಸಿದರು.

ನಗರದ ನಾಯಕರ ಸಮುದಾಯ ಭವನದಲ್ಲಿ ತಾಲೂಕು ನಾಯಕ ನೌಕರರ ಕ್ಷೇಮಾಭಿವೃದ್ಧಿ ಸಂಘದಿಂದ ಏರ್ಪಡಿಸಿದ್ದ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಪಡೆದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪುರಸ್ಕಾರ ಮತ್ತು ನಿವೃತ್ತ ನೌಕರರಿಗೆ ಸನ್ಮಾನ, ಕ್ಯಾಲೆಂಡರ್ ಬಿಡುಗಡೆ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರತಿಯೊಂದು ಸಮಾಜದ ಏಳಿಗೆ ಶಿಕ್ಷಣದಿಂದ ಮಾತ್ರ ಸಾಧ್ಯ. ಜನಾಂಗವು ಶೈಕ್ಷಣಿಕವಾಗಿ ಬಹಳ ಹಿಂದೆ ಉಳಿದಿದೆ. ಜೊತೆಗೆ ಸಂಘಟನೆ ಕೊರತೆಯಿಂದಾಗಿ ನಮ್ಮ ಸಮುದಾಯಕ್ಕೆ ರಾಜಕೀಯ ಸವಲತ್ತು ಮತ್ತು ಅವಕಾಶಗಳು ಕಡಿಮೆಯಾಗಿವೆ. ನಮ್ಮ ಹಕ್ಕುಗಳನ್ನು ಪಡೆಯಲು ಸಂಘಟನೆ ಮತ್ತು ಶಿಕ್ಷಣ ಒಂದೇ ದಾರಿ. ಆದ್ದರಿಂದ ಸರ್ಕಾರಿ ನೌಕರರು ಸಮುದಾಯದ ಮಕ್ಕಳ ಶಿಕ್ಷಣಕ್ಕೆ ನೆರವಾಗುವ ಕಾರ್ಯಕ್ರಮ ರೂಪಿಸಬೇಕು. ವಿದ್ಯಾರ್ಥಿಗಳ ಪ್ರತಿಭೆ ಪ್ರೋತ್ಸಾಹಿಸಿ ಜೊತೆಗೆ ಐಎಎಸ್, ಕೆಎಎಸ್, ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ನೆರವಾಗುವಂತಹ ತರಬೇತಿ ಕೇಂದ್ರ ತೆರೆದು ನೆರವು ನೀಡಬೇಕು. ಅಲ್ಲದೆ ಸಂಘಟನೆಗೆ ಒತ್ತು ನೀಡುವ ಮೂಲಕ ತಾಲೂಕಿನಲ್ಲಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘವನ್ನು ಸ್ಥಾಪಿಸಿ ನೌಕರರಿಗೆ ವಸತಿ ಸೌಕರ್ಯ ಒದಗಿಸಲು ಮುಂದಾಗಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಗಳಲ್ಲಿ ಅತೀ ಹೆಚ್ಚು ಅಂಕ ಪಡೆದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ, ಹಾಗೂ ನಿವೃತ್ತ ನೌಕರ ರನ್ನು ಸನ್ಮಾನಿಸಲಾಯಿತು. ಸಮಾರಂಭ ದಲ್ಲಿ ತಾಲೂಕು ನಾಯಕರ ಸಂಘದ ಅಧ್ಯಕ್ಷ ಬಂಗಾರಸ್ವಾಮಿ, ತಾಲೂಕು ನಾಯಕ ನೌಕರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಹನುಮಂತನಾಯಕ, ಪುರಸಭೆ ಮಾಜಿ ಅಧ್ಯಕ್ಷ ಶ್ರೀನಿವಾಸ್, ತಾಪಂ ಮಾಜಿ ಸದಸ್ಯ ಮಹದೇವನಾಯಕ, ಮುಖಂಡ ರಾದ ದೊರೆಸ್ವಾಮಿನಾಯಕ, ನಿವೃತ್ತ ತಹಸೀಲ್ದಾರ್ ಸಿದ್ದಪ್ಪ, ಸಿದ್ದರಾಜು, ಮಂಜುನಾಥ್, ಗಣೇಶನಾಯಕ, ಹೊಣಕಾರ ನಾಯಕ, ಬಸವನಾಯಕ, ಶಿವಪ್ರಕಾಶ್ ಸೇರಿದಂತೆ ನೌಕರರ ಸಂಘದ ಸದಸ್ಯರು, ಇತರರಿದ್ದರು.

ಉತ್ತಮ ವ್ಯಕ್ತಿಗಳಾಗಿಸುವಲ್ಲಿ ಜೆಎಸ್‌ಎಸ್ ಶಾಲೆ ಮಾದರಿ



ಪಪಂ ಮುಖ್ಯಾಧಿಕಾರಿ ಸಂತೋಷ್ ಅವರನ್ನು ಸನ್ಮಾನಿಸಲಾಯಿತು.

ಸರಗೂರು, ಜ.3– ಮಕ್ಕಳನ್ನು ಉತ್ತಮ ವ್ಯಕ್ತಿಗಳಾಗಿ ರೂಪಿಸುವಲ್ಲಿ ಜೆಎಸ್‌ಎಸ್ ಶಾಲೆ ಮಾದರಿಯಾಗಿದೆ ಎಂದು ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಸಂತೋಷ್ ತಿಳಿಸಿದರು.

ಪಟ್ಟಣದ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಶಾಲಾ ವಾರ್ಷಿಕೋತ್ಸವ ಉದ್ಘಾಟಿಸಿ ಮಾತನಾಡಿದ ಅವರು, ಮಕ್ಕಳಿಗೆ ಯಾವ ರೀತಿಯ ಮೌಲ್ಯಗಳನ್ನು ನೀಡಬೇಕು. ಅವರಲ್ಲಿ ನಾಯಕತ್ವದ ಗುಣಗಳನ್ನು ಬಿತ್ತಿ ಸಮಾಜದಲ್ಲಿ ಉತ್ತಮ ವ್ಯಕ್ತಿಗಳಾಗಿ ರೂಪಿಸುವಲ್ಲಿ ಜೆಎಸ್‌ಎಸ್ ಶಾಲೆ ಮಾದರಿಯಾಗಿದೆ. ನಾನೂ ಕೂಡ ಇದೇ ಶಾಲೆಯಲ್ಲಿ ಎಲ್‌ಕೆಜಿಯಿಂದ 10ನೇ ತರಗತಿವರೆಗೆ ವ್ಯಾಸಂಗ ಮಾಡಿ ಇದೀಗ ಸರಗೂರಿನ ಪಪಂನ ಮುಖ್ಯಾಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದೇನೆ. ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳೂ ಮುಖ್ಯ. ಆದ್ದರಿಂದ ಇವೆರಡನ್ನು ಸಮಾನವಾಗಿ ಅನುಸರಿಸಿದರೆ ಮಕ್ಕಳ ಭವಿಷ್ಯ ಉಜ್ವಲಗೊಳ್ಳಲಿದೆ ಎಂದರು. ಸಮಾರಂಭದ ಅಧ್ಯಕ್ಷತೆ ವಹಿಸಿ ಶಾಲೆಯ ಮುಖ್ಯ ಶಿಕ್ಷಕ ಮಹಮದ್ ಅಂಜುಮ್ ಪಾಷ ಮಾತನಾಡಿ, ಮಕ್ಕಳ ಪ್ರತಿಭೆ ಅನಾವರಣಕ್ಕೆ ಶಾಲಾ ವಾರ್ಷಿಕೋತ್ಸವ ಉತ್ತಮ ವೇದಿಕೆ. ಮಕ್ಕಳ ಪ್ರತಿಭೆ ಹೇಗಿರಬೇಕೆಂದರೆ ಮಕ್ಕಳಿಂದ ಅವರ ಪೋಷಕರು ಗುರುತಿಸಿಕೊಳ್ಳುವಂತಿರಬೇಕು. ಪ್ರತಿ ಮಗು ಶ್ರೇಷ್ಠತೆಯಿಂದ ಕೂಡಿರಬೇಕು. ಎಲ್ಲಾ ಚಟುವಟಿಕೆಗಳಲ್ಲೂ ಭಾಗವಹಿಸುವುದರಿಂದ ಭೂತಿ ಪುರುಷರು ವಿಭೂತಿ ಪುರುಷರಾಗುತ್ತಾರೆ. ಭೂತಿ ಎಂದರೆ ಇದ್ದಹಾಗೆ ಇರುವುದು. ವಿಭೂತಿ ಪುರುಷರೆಂದರೆ ಶ್ರೇಷ್ಠತೆಯಿಂದ ಕೂಡಿರುವುದು. ಹಾಗಾಗಿ ಎಲ್ಲಾ ಮಕ್ಕಳು ಇದನ್ನು ಪಾಲಿಸಬೇಕು ಎಂದರು.

ಇದೇ ವೇಳೆ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ವಿತರಿಸಲಾಯಿತು. ಅಲ್ಲದೇ ಮುಖ್ಯಾಧಿಕಾರಿ ಸಂತೋಷ್ ಅವರನ್ನು ಸನ್ಮಾನಿಸಲಾಯಿತು. ಪ್ರಾಂಶುಪಾಲ ಮಹದೇವಸ್ವಾಮಿ, ಮುಖ್ಯ ಶಿಕ್ಷಕ ಶ್ರೀನಿವಾಸಮೂರ್ತಿ ಮಾತನಾಡಿದರು. ಶಿಕ್ಷಕಿ ನಾಗರತ್ನ, ನಂದಿನಿ, ನಟೇಶ್, ಉಮಾ, ರಂಜಿನಿ, ಅಶೋಕ್, ಕೃಷ್ಣಮೂರ್ತಿ, ಪೋಷಕರು, ಮಕ್ಕಳು ಪಾಲ್ಗೊಂಡಿದ್ದರು.

ದೇಶದ ಮೊದಲ ಮಹಿಳಾ ಶಿಕ್ಷಕಿ ಸಾವಿತ್ರಿಬಾಯಿ ಫುಲೆ

ದಸಂಸ ಜಿಲ್ಲಾ ಸಂಚಾಲಕ ಆಲಗೂಡು ಶಿವಕುಮಾರ್



ತಲಕಾಡು ಗ್ರಾಮದಲ್ಲಿ ಸಾವಿತ್ರಿ ಬಾಯಿಫುಲೆ ಜಯಂತಿ ನಡೆಯಿತು.

ತಿ.ನರಸೀಪುರ, ಜ.3– ಸ್ವಾತಂತ್ರ್ಯ ಪೂರ್ವದಲ್ಲೇ ದೇಶದ ದಲಿತರು ಹಾಗೂ ಹಿಂದುಳಿದ ವರ್ಗಗಳ ಜನರಿಗೆ ನಿರ್ಬಂಧವಿದ್ದರೂ ಶಿಕ್ಷಣ ನೀಡಿದ ದೇಶದ ಮೊದಲ ಮಹಿಳಾ ಶಿಕ್ಷಕಿ ಸಾವಿತ್ರಿಬಾಯಿ ಫುಲೆ ಎಂದು ದಸಂಸ ಜಿಲ್ಲಾ ಸಂಚಾಲಕ ಆಲಗೂಡು ಶಿವಕುಮಾರ್ ಬಣ್ಣಿಸಿದರು.

ತಾಲೂಕಿನ ತಲಕಾಡು ಗ್ರಾಮದ ಲೋಕೋಪಯೋಗಿ ಅತಿಥಿ ಗೃಹದಲ್ಲಿ ಶುಕ್ರವಾರ ದಲಿತ ಸಂಘರ್ಷ ಸಮಿತಿಯಿಂದ ಆಯೋಜಿಸಿದ್ದ ಸಾವಿತ್ರಿ ಬಾಯಿ ಫುಲೆ ಅವರ 194ನೇ ಜಯಂತಿಯನ್ನು ಪುಷ್ಪಾರ್ಚನೆ ಮಾಡುವ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ಬ್ರಾಹ್ಮಣ ಮಹಿಳೆಯರು ಒಳಗೊಂಡು ಶಿಕ್ಷಣದಿಂದ ವಂಚಿತರಾಗಿದ್ದ ಶೂದ್ರ ಮತ್ತು ಅಸ್ಪೃಶ್ಯ ಮಹಿಳೆಯರಿಗೆ 19ನೇ ಶತಮಾನ ದಲ್ಲಿ ಹತ್ತಾರು ಶಾಲೆಗಳನ್ನು ತೆರೆದು ಶಿಕ್ಷಣ ನೀಡಿದ ಸಾವಿತ್ರಿಬಾಯಿ ಫುಲೆ ಅವರ ಜನ್ಮದಿನವನ್ನು ಸರ್ಕಾರ ಶಿಕ್ಷಣ ದಿನವನ್ನಾಗಿ ಆಚರಿಸಬೇಕು ಎಂದು ಒತ್ತಾಯಿಸಿದರು.

ಫುಲೆ ದಂಪತಿಗಳು ಬ್ರಿಟಿಷ್ ಸರ್ಕಾರದ ಸಹಕಾರದಿಂದ ಅಕ್ಷರ ಜ್ಞಾನ ನೀಡುವ ಜೊತೆಗೆ ಸತ್ಯಶೋಧಕ ಸಮಾಜ ಸ್ಥಾಪಿಸಿ, ಆ ಮೂಲಕ ಜನರಲ್ಲಿ ಮೌಢ್ಯದ ವಿರುದ್ಧ ಜಾಗೃತಿ ಮೂಡಿಸುವ ಕೆಲಸ ಮಾಡುತ್ತಿದ್ದರು. ಸಾವಿತ್ರಿಬಾಯಿ ಫುಲೆ ಅವರು ಶಿಕ್ಷಣದ ಜೊತೆಗೆ ಸಾಮಾಜಿಕ ಜಾಗೃತಿ ಮೂಡಿಸುವ ಕಾರ್ಯಕ್ಕೆ ಮುನ್ನುಡಿಯಾಗಿದ್ದರು ಎಂದರು.

ತಲಕಾಡಿನಲ್ಲಿ ಬೃಹತ್ ಪ್ರತಿಭಟನೆ: ಕಾರ್ಯಕ್ರಮದ ಬಳಿಕ ನಡೆದ ದಸಂಸ ಹೋಬಳಿ ಮಟ್ಟದ ಕಾರ್ಯಕರ್ತರ ಸಭೆಯಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಕುರಿತು ಅವಹೇಳನಕಾರಿಯಾಗಿ ಮಾತನಾಡಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಸಚಿವ ಸ್ಥಾನದಿಂದ ವಜಾಗೊಳಿಸಿ, ದೇಶದ್ರೋಹ ಕಾಯ್ದೆಯಡಿ ಬಂಧನಕ್ಕೆ ಆಗ್ರಹಿಸಿ, ಜ.8 ರಂದು ಬೆಳಗ್ಗೆ 11 ಗಂಟೆಗೆ ತಲಕಾಡು ಗ್ರಾಮದಲ್ಲಿ ಬೃಹತ್ ಪ್ರತಿಭಟನೆ ನಡೆಸಲು ನಿರ್ಧರಿಸಲಾಯಿತು.

ಈ ವೇಳೆ ದಸಂಸ ತಾಲೂಕು ಸಂಚಾಲಕ ಕುಕ್ಕೂರು ರಾಜು, ಯಾಚೇನಹಳ್ಳಿ ಸೋಮಶೇಖರ್, ಸಂಘಟನಾ ಸಂಚಾಲಕರಾದ ಕಿರಗಸೂರು ರಜನಿ, ಹಿರಿಯೂರು ಸೋಮಣ್ಣ, ತಲಕಾಡು ಗ್ರಾಪಂ ಉಪಾಧ್ಯಕ್ಷ ನಾಗರಾಜ ಮೂರ್ತಿ, ಹೊಳೆಸಾಲು ಗ್ರಾಪಂ ಮಾಜಿ ಅಧ್ಯಕ್ಷ ಪರಮೇಶ್, ಗ್ರಾಪಂ ಸದಸ್ಯರಾದ ಸುಂದರ್ ನಾಯಕ, ಸುಬ್ಬನಾಯಕ, ಬಣವೆ ಶಶಿ, ಪಿಎಲ್‌ಡಿ ಬ್ಯಾಂಕ್ ಉಪಾಧ್ಯಕ್ಷ ಬಿ.ಎಂ.ಲಿಂಗರಾಜು, ಮುಖಂಡರಾದ ಸಿದ್ದರಾಜು, ಮಾವಿನಹಳ್ಳಿ ಕುಮಾರ್, ಎಂ.ಬಿ.ಲಿಂಗರಾಜು, ವಡೆಯಾಂಡಹಳ್ಳಿ ಗಣೇಶ, ಮಹದೇವ, ಚಂದಹಳ್ಳಿ ಮಲ್ಲೇಶ್, ಹೆಮ್ಮಿಗೆ ಜವರಯ್ಯ, ತೊಟ್ಟವಾಡಿ ಉಮೇಶ್, ಕಾಳಿಹುಂಡಿ ಶಿವಕುಮಾರ್, ಆಲಗೂಡು ನಾಗರಾಜಮೂರ್ತಿ, ತುರುಗನೂರು ಲಕ್ಷ್ಮಣ್ ಇತರರಿದ್ದರು.

ಮಹಿಳೆಯೊಂದಿಗೆ ಅಸಭ್ಯ ವರ್ತನೆ: ಯುವಕನಿಗೆ ಧರ್ಮದೇಟು



ನಂಜನಗೂಡು, ಜ.3– ಕಳ್ಳತನ ಮಾಡಲು ಮನೆಗೆ ನುಗ್ಗಿ ಮಹಿಳೆಯೊಂದಿಗೆ ಅಸಭ್ಯವಾಗಿ ವರ್ತಿಸಿದ ಯುವಕನನ್ನು ಗ್ರಾಮಸ್ಥರೇ ಹಿಡಿದು ಕಂಬಕ್ಕೆ ಕಟ್ಟಿ ಧರ್ಮದೇಟು ನೀಡಿರುವ ಘಟನೆ ತಾಲೂಕಿನ ಬೊಕ್ಕಹಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ವೆಂಕಟಚಲ ಅವರ ಪುತ್ರ ಹರ್ಷ ಕಳ್ಳತನಕ್ಕೆ ಯತ್ನಿಸಿ ಮಹಿಳೆಯೊಂದಿಗೆ ಅಸಭ್ಯವಾಗಿ ವರ್ತಿಸಿದ ಯುವಕ. ಗ್ರಾಮದ ಮಹಿಳೆಯೊಬ್ಬರು ಕಳೆದ 4 ತಿಂಗಳ ಹಿಂದೆ ತಮ್ಮ ಪತಿಯನ್ನು ಕಳೆದುಕೊಂಡಿದ್ದರು. ಜೀವನೋಪಾಯಕ್ಕಾಗಿ ಮೈಸೂರಿನ ಬಿಸಿಎಂ ಹಾಸ್ಟೆಲ್‌ನಲ್ಲಿ ಅಡುಗೆ ಕೆಲಸ ಮಾಡಿಕೊಂಡಿದ್ದರು. ಈಕೆ ತಮ್ಮ 1 ಎಕರೆ ಜಮೀನನ್ನು ಭೋಗ್ಯಕ್ಕೆ ಹಾಕಿ ಮನೆಯಲ್ಲಿದ್ದ 3 ಲಕ್ಷ ರೂ. ಬಗ್ಗೆ ತಿಳಿದಿದ್ದ ಹರ್ಷ ಜ.1 ರಂದು ಮಧ್ಯರಾತ್ರಿ ಮಹಿಳೆ ಮನೆಗೆ ನುಗ್ಗಿದ್ದಾನೆ. ಈ ವೇಳೆ ಶಬ್ದವಾದ ಪರಿಣಾಮ ಆಕೆ ಎಚ್ಚರಗೊಂಡು ಪರಿಶೀಲಿಸಿದಾಗ ಮಂಚದ ಕೆಳಗೆ ಹರ್ಷ ಅವಿತುಕೊಂಡಿರುವುದು ತಿಳಿದು ಬಂದಿದೆ. ಈ ವೇಳೆ ಹರ್ಷ ಆಕೆಯೊಂದಿಗೆ ಅಸಭ್ಯವಾಗಿ ವರ್ತಿಸಿ ಪರಾರಿಯಾಗಿದ್ದ ಎನ್ನಲಾಗಿದೆ. ಬಳಿಕ ಮಹಿಳೆ ಈ ವಿಚಾರವನ್ನು ಗ್ರಾಮಸ್ಥರಿಗೆ ತಿಳಿಸಿ ಹರ್ಷನನ್ನು ಪತ್ತೆ ಹಚ್ಚಿ ಕಂಬಕ್ಕೆ ಕಟ್ಟಿಹಾಕಿ ಧರ್ಮದೇಟು ನೀಡಿ ಪೊಲೀಸರಿಗೆ ಒಪ್ಪಿಸಿದ್ದಾರೆ. ಈ ವೇಳೆ ಹಣ ಕಳ್ಳತನ ಮಾಡಲು ಮನೆಗೆ ನುಗ್ಗಿದ್ದಾಗಿ ಹರ್ಷ ತಪ್ಪೊಪ್ಪಿಕೊಂಡಿದ್ದಾನೆ. ಈ ಸಂಬಂಧ ನಂಜನಗೂಡು ಗ್ರಾಮಾಂತರ ಠಾಣೆಯಲ್ಲಿ ದೂರು ದಾಖಲಾಗಿದೆ.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 9ರಲ್ಲಿ

ಸಿದ್ದರಾಮಯ್ಯರ ಪತ್ನಿ ಪಾರ್ವತಿಯವರಿಂದ ಮುಡಾಗೆ 14 ನಿವೇಶನ ವಾಪಾಸ್ ನೀಡಿಕೆ

ಮನೆಯಲ್ಲೇ ಕ್ರಯ ಪತ್ರ ರದ್ದು ನೋಂದಣಿ

ಸಮಗ್ರ ತನಿಖೆಗೆ ಸ್ನೇಹಮಯಿ ಕೃಷ್ಣ ಆಗ್ರಹ

ಮೈಸೂರು, ಜ.3(ಬಿಎಲ್‌ಯು)– ಮುಖ್ಯಮಂತ್ರಿ ಸಿದ್ದರಾಮಯ್ಯರ ಪತ್ನಿ ಪಾರ್ವತಿ ಅವರಿಗೆ ಮುಡಾದಿಂದ ಮಂಜೂರಾಗಿದ್ದ 14 ನಿವೇಶನಗಳ ಸರ್ಕಾರಕ್ಕೆ ವಾಪಾಸ್ ನೀಡಿದ ಕ್ರಯ ಪತ್ರ ರದ್ದು ನೋಂದಣಿಯಲ್ಲಿ ಬಹಳಷ್ಟು ಅನುಮಾನಗಳಿದ್ದು, ಈ ಬಗ್ಗೆ ಸಮಗ್ರ ತನಿಖೆ ನಡೆಸಬೇಕು ಎಂದು ದೂರುದಾರರೂ ಆದ ಆರ್‌ಟಿಐ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಲೋಕಾಯುಕ್ತಕ್ಕೆ ಮನವಿ ಮಾಡಿದ್ದಾರೆ.

ಮೈಸೂರಿನ ದಿವಾನ್ಸ್ ರಸ್ತೆಯ ಲೋಕಾಯುಕ್ತ ಕಚೇರಿಗೆ ಇಂದು ಆಗಮಿಸಿದ ಸ್ನೇಹಮಯಿ ಕೃಷ್ಣ, ತನಿಖೆಗೆ ಆಗ್ರಹಿಸಿ ಲೋಕಾಯುಕ್ತ ಎಸ್ಪಿ ಟಿ.ಜೆ.ಉದೇಶ್ ಅವರಿಗೆ ಲಿಖಿತ ಮನವಿ ಸಲ್ಲಿಸಿದರು.

ಮೈಸೂರಿನ ವಿಜಯನಗರದಲ್ಲಿ ಅಕ್ರಮವಾಗಿ ಮಂಜೂರಾಗಿದ್ದ 14 ನಿವೇಶನಗಳನ್ನು ಸರ್ಕಾರಕ್ಕೆ ವಾಪಾಸ್ ನೀಡುವ ಸಂಬಂಧ ಸಿದ್ದರಾಮಯ್ಯ ಪತ್ನಿ ಪಾರ್ವತಿ ಅವರು ಅಕ್ಟೋಬರ್ 1 ರಂದು ನೋಂದಣಿ ಮಾಡಿದ್ದಾರೆ. ತೊಣಚಿಕೊಪ್ಪಲ್‌ನ ಅವರ ಮನೆಗೆ ಭೇಟಿ ನೀಡಿದ್ದ ಹೆಚ್ಚುವರಿ ಜಿಲ್ಲಾ ನೋಂದಣಾಧಿಕಾರಿಗಳು ಕ್ರಯ ಪತ್ರ ನೋಂದಣಿ ಪ್ರಕ್ರಿಯೆ ನಡೆಸಿದ್ದು, ಇದರಲ್ಲಿ ಬಹಳಷ್ಟು ಅನುಮಾನಗಳಿವೆ ಎಂದು ಆರೋಪಿಸಿದ್ದಾರೆ.



ಅನಾರೋಗ್ಯಕ್ಕೆ ಒಳಗಾದವರಿಗೆ, ವೃದ್ಧರಿಗೆ, ಜೈಲಿನಲ್ಲಿರುವ ಕೈದಿಗಳಿಗೆ ಹಾಗೂ ಅತೀ ಗಣ್ಯರ ಮನೆಗೆ ಹೋಗಿ ನೋಂದಣಿ ಮಾಡಲು ಅವಕಾಶವಿದೆ. ಆದರೆ ಪಾರ್ವತಿ ಅವರು ಈ ಯಾವುದೇ ವರ್ಗಕ್ಕೂ ಸೇರದಿದ್ದರೂ ಅವರ ಮನೆಗೆ ಹೋಗಿ ಉಪ ನೋಂದಣಾಧಿಕಾರಿಗಳು ನೋಂದಣಿ ಮಾಡಿದ್ದೇಗೆ ಎಂದು ಪ್ರಶ್ನಿಸಿದ್ದಾರೆ.

ಅದೂ ಅಲ್ಲದೆ ಅಕ್ಟೋಬರ್ 1 ರಂದು ಸಂಜೆ 5.42 ಗಂಟೆ ಸಮಯದಲ್ಲಿ ಮುಡಾದ ಉಪ ನೋಂದಣಾಧಿಕಾರಿ ಕಚೇರಿಯಲ್ಲಿ ಕ್ರಯ ಪತ್ರ ನೋಂದಣಿಯ ಪ್ರಕ್ರಿಯೆ ಪೂರ್ಣಗೊಳಿಸಿ 6.30 ಗಂಟೆಗೆ ತೊಣಚಿಕೊಪ್ಪಲ್ ನಲ್ಲಿರುವ ಅವರ ಮನೆಯಲ್ಲಿ ನೋಂದಣಿ ಮಾಡಿಸಿದ್ದಾರೆ. ಕೇವಲ 45 ನಿಮಿಷದಲ್ಲಿ ಮುಡಾದಿಂದ ತೊಣಚಿಕೊಪ್ಪಲ್‌ಗೆ ಹೋಗಿ ನೋಂದಣಿ, ಸಾಕ್ಷ್ಯಾಧಾರ ಸಹಿ ಸೇರಿದಂತೆ ಇತರೆ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಲು ಸಾಧ್ಯವೇ ಎಂದು ಸ್ನೇಹಮಯಿ ಕೃಷ್ಣ ಅನುಮಾನ ವ್ಯಕ್ತಪಡಿಸಿದ್ದಾರೆ.

ಪಾರ್ವತಿ ಅವರು ನೋಂದಣಾಧಿಕಾರಿ ಕಚೇರಿಗೆ ಹೋಗದೆ ಹೆಚ್ಚುವರಿ ಜಿಲ್ಲಾ ನೋಂದಣಾಧಿಕಾರಿಗಳನ್ನು ತಮ್ಮ ಮನೆಗೆ ಕರೆಸಿಕೊಂಡು ನೋಂದಣಿ ಮಾಡಿಸಲು ಕಾರಣವೇನು, ಆಧಾರ್ ಕಾರ್ಡ್‌ನಲ್ಲಿರುವ ಖಾಯಂ ನಿವಾಸ ಬಿಟ್ಟು ಮುಖ್ಯಮಂತ್ರಿಗಳ ಅಧಿಕೃತ ನಿವಾಸ ಕಾವೇರಿ ವಿಳಾಸವನ್ನು ನಮೂದು ಮಾಡಿದ್ದೇಕೆ ಎಂದು ಪ್ರಶ್ನಿಸಿದ್ದಾರೆ.

ಕ್ರಯ ಪತ್ರ ನೋಂದಣಿ ಪ್ರಕಿಯೆಗಳನ್ನು ನೋಡಿದರೆ ಪಾರ್ವತಿ ಅವರು ತೊಣಚಿಕೊಪ್ಪಲ್ ಮನೆಗೆ ಕೂಡ ಬಂದಿಲ್ಲ ಎಂಬುದು ಸ್ಪಷ್ಟವಾಗಿದೆ. ಬೇರೆಲ್ಲೋ ಕುಳಿತು ತೊಣಚಿಕೊಪ್ಪಲ್ ಮನೆ ಎಂದು ನಮೂದಿಸಿದ್ದಾರೆ. ಇದರಿಂದ ಕ್ರಯ ಪತ್ರ ನೋಂದಣಿ ಕಾನೂನು ಬದ್ಧವಾಗಿ ಆಗಿಲ್ಲ. ಈ ಹಿನ್ನೆಲೆಯಲ್ಲಿ ಸಮಗ್ರ ತನಿಖೆ ಆಗಬೇಕು ಎಂದು ಸ್ನೇಹಮಯಿ ಕೃಷ್ಣ ಲೋಕಾಯುಕ್ತ ಎಸ್ಪಿ ಉದೇಶ್ ಅವರನ್ನು ಕೋರಿದ್ದಾರೆ.

ಸುಳ್ಳು ದಾಖಲೆ ಸೃಷ್ಟಿಸಿ 10 ನಿವೇಶನ ಕಬಳಿಕೆ

ಸುಳ್ಳು ದಾಖಲಾತಿ ಸೃಷ್ಟಿಸಿ ಶೇಕಡ 50:50 ಅನುಪಾತದಲ್ಲಿ ಮುಡಾದಿಂದ ಅಕ್ರಮವಾಗಿ 10 ನಿವೇಶನಗಳನ್ನು ಪಡೆದಿರುವ ಪ್ರಕರಣದ ಬಗ್ಗೆ ತನಿಖೆ ನಡೆಸುವಂತೆ ಲೋಕಾಯುಕ್ತ ಎಸ್ಪಿ ಉದೇಶ್ ಅವರಿಗೆ ಸ್ನೇಹಮಯಿ ಕೃಷ್ಣ ಮನವಿ ಮಾಡಿದ್ದಾರೆ.

ಮೈಸೂರು ತಾಲೂಕು ದೇವನೂರು ಗ್ರಾಮದ ಸರ್ವೆ ನಂಬರ್ 72 ರ 1.25 ಎಕರೆಗೆ ಸಂಬಂಧಿಸಿದಂತೆ ಸುರೇಶಮ್ಮ ಎಂಬುವರ ಹೆಸರಿನಲ್ಲಿ 10 ನಿವೇಶನ ಪಡೆಯಲಾಗಿದೆ ಎಂದು ದೂರಿದ್ದಾರೆ. ನೈಜ ದಾಖಲಾತಿಗಳನ್ನು ನಾಶಪಡಿಸಿ ಸುಳ್ಳು ದಾಖಲೆ ಸೃಷ್ಟಿಸಿ ಶೇಕಡ 50:50 ಅನುಪಾತದಲ್ಲಿ ಮುಡಾದಿಂದ 10 ನಿವೇಶನಗಳನ್ನು ಪಡೆಯಲಾಗಿದೆ. ಅಕ್ರಮ ಮಂಜೂರಾತಿ ಆಗಿರುವ 928 ನಿವೇಶನಗಳ ಪಟ್ಟಿಯಲ್ಲಿ ಸುರೇಶಮ್ಮ ಪಡೆದಿರುವ ನಿವೇಶನಗಳಿದ್ದು, ಈ ಬಗ್ಗೆ ಸಮಗ್ರ ತನಿಖೆ ನಡೆಸಬೇಕು ಎಂದು ಸ್ನೇಹಮಯಿ ಕೃಷ್ಣ ಕೋರಿದ್ದಾರೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಐಡೆಂಟಿಟಿ (ತ) + ಐಡೆಂಟಿಟಿ (ಮ)	2+2 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಯುಐ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ವನವಾಸ್ (ಹಿಂ)	3 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಗನ ಅಂಡ್ ರೋಜಸ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಯುಐ (ಕ)	4 ಪ್ರದರ್ಶನಗಳು
ರಾಜಕಮಲ್	
ವಿಡುದಲೈ–2(ತ)	4 ಪ್ರದರ್ಶನಗಳು
ಸಂಗಂ	
ಮ್ಯಾಕ್ಸ್(ಕ)	4 ಪ್ರದರ್ಶನಗಳು
ಲಿಡೋ	
ಲಕ್ಕಿ ಭಾಸ್ಕರ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಬೇಬಿಜಾನ್ (ಹಿ)	4 ಪ್ರದರ್ಶನಗಳು
ಪ್ರಭಾ	
ಗನ್ ಅಂಡ್ ರೋಜಸ್(ಕ) + ಪುಷ್ಪ–2 (ಕ)	2+2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಆಫ್ಟರ್ ದಿ ಬ್ರೇಕಪ್ (ಕ): ಬೆ.9.40ಕ್ಕೆ, ಮುಫಾಸ ದಿ ಲಯನ್ ಕಿಂಗ್ (3ಡಿ)(ಇಂ): ಮ.12.10ಕ್ಕೆ, ಸಂ.5.20ಕ್ಕೆ, ರಾ.7.45ಕ್ಕೆ, ಯುಐ (2024) (ಕ): ಮ.2.35ಕ್ಕೆ, ರಾ.10.10ಕ್ಕೆ.
ಸ್ಕ್ರೀನ್ 2	ಸೋನಿಕ್ ದಿ ಹೆಡ್ಜಾಗ್ 3(ಇಂ): ಬೆ.11.25ಕ್ಕೆ, ಸಂ.4.30ಕ್ಕೆ, ದೇಶಕ್ಕಾರನ್ (ಮ): ಮ.1.55ಕ್ಕೆ, ಮಾರ್ಕೊ (ಹಿಂ): ರಾ.7ಕ್ಕೆ, ಮಾರ್ಕೊ (ಮ): ರಾ.10.10ಕ್ಕೆ.
ಸ್ಕ್ರೀನ್ 3	ಹರಿದಾಸರ ದಿನಚರಿ (ಕ): ಬೆ.10.30ಕ್ಕೆ, ಕ್ರಾವೆನ್ ದಿ ಹಂಟರ್ (ಇಂ): ಮ.1.40ಕ್ಕೆ, ಸಂ.4.30ಕ್ಕೆ, ಎ ಲೆಜೆಂಡ್ (ಇಂ): ರಾ.7.20ಕ್ಕೆ, ಐಡೆಂಟಿಟಿ (ಮ): ರಾ.10.05ಕ್ಕೆ.
ಸ್ಕ್ರೀನ್ 4	ಮ್ಯಾಕ್ಸ್ (ಕ): ಬೆ.10.20ಕ್ಕೆ, ಮ.1.15ಕ್ಕೆ, ಸಂ.4.10ಕ್ಕೆ, ರಾ.7.05ಕ್ಕೆ, ರಾ.10ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಪುಷ್ಪಾ 2 (ಕ): ಮ.1ಕ್ಕೆ, ಸ್ವೇಚ್ಛಾ (ಕ): ಸಂ.4.40ಕ್ಕೆ, ಯುಐ (ಕ): ಸಂ.6.55ಕ್ಕೆ, ದೇಶಕ್ಕಾರನ್ (ಮ): ರಾ.9.25ಕ್ಕೆ.
ಸ್ಕ್ರೀನ್ 2	ಮ್ಯಾಕ್ಸ್ (ಕ): ಮ.1.10ಕ್ಕೆ, ಮ.3.50ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 3	ಮುಫಾಸ ದಿ ಲಯನ್ ಕಿಂಗ್ (3ಡಿ)(ಇಂ): ಬೆ.11.25ಕ್ಕೆ, ಯುಐ (ಕ): ಮ.1.45ಕ್ಕೆ, ಮ್ಯಾಕ್ಸ್ (ಕ): ಸಂ.6.25ಕ್ಕೆ.
ಸ್ಕ್ರೀನ್ 4	ಮ್ಯಾಕ್ಸ್ (ಕ): ಬೆ.11ಕ್ಕೆ, ಮುಫಾಸ ದಿ ಲಯನ್ ಕಿಂಗ್ (3ಡಿ)(ಇಂ): ಮ.1.45ಕ್ಕೆ, ಸಂ.6.55ಕ್ಕೆ, ಕ್ರಾವೆನ್ ದಿ ಹಂಟರ್ (ಇಂ): ಸಂ.4.25ಕ್ಕೆ, ರಾ.9.15ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ಸಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಇಂದು ಪೊಲೀಸ್ ಶೀಲ್ಡ್ ಪ್ರದಾನ ಸಮಾರಂಭ

ಮೈಸೂರು, ಜ.3(ಬಿಎಲ್‌ಯು)– ಪ್ರಶಸ್ತಿ ವಿಜೇತ ಪೊಲೀಸ್ ಪೇದೆಗಳಿಗೆ ಪೊಲೀಸ್ ಶೀಲ್ಡ್ ಪ್ರದಾನ ಸಮಾರಂಭ ನಾಳೆ (ಜನವರಿ 4) ಮೈಸೂರಿನಲ್ಲಿ ನಡೆಯಲಿದೆ.

ಮೈಸೂರು ರೌಂಡ್ ಟೇಬಲ್ 21 ಮತ್ತು ಮೈಸೂರು ಲೇಡಿಸ್ ಸರ್ಕಲ್ 9, ಈ ಕಾರ್ಯಕ್ರಮ ಆಯೋಜಿಸಿದ್ದು, ನಾಳೆ ಸಂಜೆ 5.30 ಗಂಟೆಗೆ ನಗರದ ನಿತ್ಯೋತ್ಸವ ಕನ್ವೆಷನ್ ಸೆಂಟರ್‌ನಲ್ಲಿ ನಡೆಯಲಿದೆ.

ಮೈಸೂರು ಮತ್ತು ಕೊಡಗು ಲೋಕಸಭಾ ಸದಸ್ಯ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಜಿಲ್ಲಾಧಿಕಾರಿ ಜಿ.ಲಕ್ಷ್ಮಿ ಕಾಂತ ರೆಡ್ಡಿ, ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ವಿಷ್ಣುವರ್ಧನ ಅತಿಥಿಗಳಾಗಿರುವರು.

ರೌಂಡ್ ಟೇಬಲ್ ಇಂಡಿಯಾದ ಏರಿಯಾ 13 ರ ವಲಯ ಅಧ್ಯಕ್ಷ ಟಿಆರ್ ಕುಮಾರಪಾಲ್ ಜೈನ್, ಸಿಆರ್ ಕೋಮಲ್ ಕಟಾರಿಯಾ, ಟಿಆರ್ ಸೂರಜ್ ಕೃಷ್ಣಂ, ಸಿಆರ್ ನಾಗಶ್ರೀ ಕೆಎಸ್ ಕೂಡ ಅತಿಥಿಗಳಾಗಿ ಉಪಸ್ಥಿತರಿರುವರು.

ಪ್ರಶಸ್ತಿ ಸಂತಸಕ್ಕಿಂತ ಜವಾಬ್ದಾರಿ, ಗೌರವ ಹೆಚ್ಚಿಸುತ್ತದೆ

ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ ಅಭಿಪ್ರಾಯ

ಮೈಸೂರು, ಜ.3(ಜಿಎ)–ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಸುಭದ್ರವಾಗಿ ಉಳಿಸುವ ನಿಟ್ಟಿನಲ್ಲಿ ಪತ್ರಕರ್ತರು ಕೆಲಸ ಮಾಡುತ್ತಿದ್ದಾರೆ ಎಂದು ಹೋಟೆಲ್ ಮಾಲೀಕು ಸಂಘದ ಅಧ್ಯಕ್ಷ ಸಿ.ನಾರಾಯಣ ಗೌಡ ತಿಳಿಸಿದರು.

ಮೈಸೂರಿನ ಕೃಷ್ಣಮೂರ್ತಿಪುರಂ ನಲ್ಲಿರುವ ಹೋಟೆಲ್ ಮಾಲೀಕರ ಸಂಘದ ಸಭಾಂಗಣದಲ್ಲಿ ಮೈಸೂರು ಕಲ್ಚರಲ್ ಅಸೋಸಿಯೇಷನ್ ವತಿಯಿಂದ ಆಯೋಜಿಸಿದ್ದ ಪತ್ರಕರ್ತರ ಅಭಿನಂದನ ಸಮಾರಂಭದಲ್ಲಿ ಅವರು ಮಾತನಾಡಿ, ಪ್ರಶಸ್ತಿಗಳು ಸಂತಸಕ್ಕಿಂತ ಜವಾಬ್ದಾರಿ ಹೆಚ್ಚಿಸಿ, ಸಮಾಜದಲ್ಲಿ ಗೌರವವನ್ನು ಹೆಚ್ಚಿಸುತ್ತದೆ. ಅಲ್ಲದೇ ವೃತ್ತಿಧರ್ಮ ಗಟ್ಟಿಗೊಳಿಸಲಿದೆ. ಈ ನಡುವೇ ತಮ್ಮ ಮತ್ತು ಹಿರಿಯ ಹಾಗೂ ಕಿರಿಯ ಪತ್ರಕರ್ತರೊಡನೆ ಇರುವ ಒಡನಾಡವನ್ನು ನೆನೆದರು.

ಕನ್ನಡ ಸಾಹಿತ್ಯ ಪರಿಷತ್ತಿನ ಮೈಸೂರು ನಗರ ಘಟಕದ ಅಧ್ಯಕ್ಷ ಕೆ.ಎಸ್.ಶಿವರಾಮ್ ಮಾತನಾಡಿ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪತ್ರಿಕಾರಂಗ ಅತಿ ಮುಖ್ಯ. ಇತ್ತೀಚಿನ ದೃಶ್ಯ ಮಾಧ್ಯಮಗಳು ಅತಿರೇಕತೆ ಪ್ರದರ್ಶಿಸಿದರೆ, ಸಾಮಾಜಿಕ ಜಾಲತಾಣದಲ್ಲಿ ಸುಳ್ಳು ,ಸತ್ಯದ ಗೊಂದಲವಿರುತ್ತದೆ. ಆದರೆ, ಮುದ್ರಣ ಮಾಧ್ಯಮ ತನ್ನ ಸಾಂಪ್ರದಾಯಿಕತೆ ಜತೆಗೆ ಘನತೆ ಉಳಿಸಿಕೊಂಡಿದೆ ಎಂದರು.



ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಹೋಟೆಲ್ ಮಾಲೀಕರ ಸಂಘದ ಸಭಾಂಗಣದಲ್ಲಿ ಮೈಸೂರು ಕಲ್ಚರಲ್ ಅಸೋಸಿಯೇಷನ್ ವತಿಯಿಂದ ಪತ್ರಕರ್ತರನ್ನು ಅಭಿನಂದಿಸಲಾಯಿತು.

ಕಾರ್ಯಕ್ರಮದಲ್ಲಿ ರಾಜ್ಯ ಸರಕಾರದ ಅಭಿವೃದ್ಧಿ ಪತ್ರಿಕೋದ್ಯಮ ಪ್ರಶಸ್ತಿ ಪುರಸ್ಕೃತರಾದ, ವಿಜಯ ಕರ್ನಾಟಕ ಸುದ್ದಿ ಸಂಪಾದಕರಾದ ಚೀ.ಜ.ರಾಜೀವ, ಮೈವಿವಿಯ ಪತ್ರಿಕೋದ್ಯಮದಲ್ಲಿ ಪಿಎಚ್‌ಡಿ ಪಡೆದ ವಿಜಯ ಕರ್ನಾಟಕ ಮುಖ್ಯ ವರದಿಗಾರ ನಾಗರಾಜ ನವಿಮನೆ, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್ ಅವರನ್ನು ಅಭಿನಂದಿಸಲಾಯಿತು. ಈ ವೇಳೆ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್, ಮೈಸೂರು ಕಲ್ಚರಲ್ ಅಸೋಸಿಯೇಷನ್ ಅಧ್ಯಕ್ಷ ಎ.ಪಿ.ನಾಗೇಶ್, ಸಂಚಾಲಕರೂ ಆದ ವಿಜಯ ಕರ್ನಾಟಕ ಪತ್ರಿಕೆಯ ಸ್ಥಾನಿಕ ಸಂಪಾದಕ ಐತಿಚಂಡ ರಮೇಶ್ ಉತ್ತಪ್ಪ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಫೋಟೋಗ್ರಫಿ ಕ್ಲಬ್‌ನಿಂದ ಕ್ರಿಕೆಟ್ ಪಂದ್ಯಾವಳಿ




ಮೈಸೂರು, ಜ.3(ಬಿಎಲ್‌ಯು)– ಮೈಸೂರು ಫೋಟೋಗ್ರಫಿ ಕ್ಲಬ್ ಎರಡು ದಿನಗಳ ಟೆನ್ನಿಸ್ ಬಾಲ್ ಹಾಗೂ ಕ್ರಿಕೆಟ್ ಪಂದ್ಯಾವಳಿ ಆಯೋಜಿಸಿತ್ತು.

ಪ್ರಿನ್ಸ್ ಲ್ಯಾಬ್‌ನ ಸೋಮಸುಂದರ್ ಹಾಗೂ ಮಹದೇವಸ್ವಾಮಿ ಪಂದ್ಯಾವಳಿಯನ್ನು ಉದ್ಘಾಟಿಸಿದರು.

ಮೈಸೂರು ಜಿಲ್ಲೆಯ ವೃತ್ತಿಪರ ಛಾಯಾಗ್ರಾಹಕರು ಸೇರಿದಂತೆ ಹತ್ತು ತಂಡಗಳು ಪಂದ್ಯಾವಳಿಯಲ್ಲಿ ಭಾಗವಹಿಸಿದ್ದವು. ಮೊದಲ ದಿನ ಹತ್ತು ತಂಡಗಳಿಂದ 20 ಪಂದ್ಯ ಹಾಗೂ ಎರಡನೇ ದಿನ ಆರು ಪಂದ್ಯಗಳು ನಡೆಯಿತು.

ರಾಯಲ್ ಚಾಲೆಂಜರ್ಸ್ ಹಾಗೂ ಅಪ್ಪು ಕ್ರಿಕೆಟರ್ಸ್ ತಂಡಗಳ ಸದಸ್ಯರು ಫೈನಲ್‌ನಲ್ಲಿ ಆಟವಾಡಿದವರು. ಇದರಲ್ಲಿ ಹುಲ್ಲಹಳ್ಳಿ ಮನುಕುಮಾರ್ ನಾಯಕತ್ವದ ರಾಯಲ್ ಚಾಲೆಂಜರ್ಸ್ ತಂಡ ಗೆಲುವು ಸಾಧಿಸಿತು. ವಿಜೇತ ತಂಡಗಳಿಗೆ ಎಂಡಿಪಿವಿಎ ಅಧ್ಯಕ್ಷ ದಡದಹಳ್ಳಿ ಮಹೇಶ್ ಹಾಗೂ ಮಾಜಿ ಅಧ್ಯಕ್ಷ ಮುಕುಂದ್ ಸಿಂಗ್ ಪ್ರಶಸ್ತಿ ಪ್ರದಾನ ಮಾಡಿದರು.

ಅಮರಶಿಲ್ಪಿ ಜಕಣಾಚಾರ್ಯ ಸಂಸ್ಮರಣ ದಿನ



ಮೈಸೂರಿನ ಉದ್ಯಮ ಕಚೇರಿಯಲ್ಲಿ ಶುಕ್ರವಾರ ಮೈಸೂರು ಜಿಲ್ಲಾ ವಿಶ್ವಕರ್ಮ ಯುವ ಜಾಗೃತಿ ವೇದಿಕೆ ವತಿಯಿಂದ ಅಮರಶಿಲ್ಪಿ ಜಕಣಾಚಾರ್ಯ ಅವರ ಸಂಸ್ಮರಣ ದಿನ ಕಾರ್ಯಕ್ರಮ ಆಯೋಜಿಸಲಾಗಿತ್ತು


ಧರ್ಮ ಸಾಮಾಜಿಕ ಸ್ವಾಸ್ಥ್ಯ ಕಾಪಾಡುವ ಮಾಧ್ಯಮ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ. ಪದ್ಮಾ ಶೇಖರ್ ಅಭಿಮತ

ಮೈಸೂರು, ಜ.3(ಎಂಟಿವೈ)– ಕರ್ತವ್ಯದ ಮತ್ತೊಂದು ಅರ್ಥವೇ ಧರ್ಮವಾಗಿದ್ದು, ಇದು ಸಾಮಾಜಿಕ ನೀತಿಯನ್ನು ಎತ್ತಿ ಹಿಡಿಯುತ್ತಾ ಬಂದಿದೆ ಎಂದು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ.ಪದ್ಮಾ ಶೇಖರ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ಜೈನಶಾಸ್ತ್ರ ಮತ್ತು ಪಾಕೃತ ಅಧ್ಯಯನ ವಿಭಾಗದಲ್ಲಿ ಶುಕ್ರವಾರ ನಡೆದ ಜೈನಧರ್ಮದ ತಾತ್ವಿಕ ಅನುಸಂಧಾನ ವಿಷಯದ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡಿದ ಅವರು, ಧರ್ಮವು ಆರಂಭದಿಂದಲೂ ಸಾಮಾಜಿಕ ನೀತಿಯಾಗಿತ್ತು ಎನ್ನುವುದು ಪ್ರಾಚೀನ ಗ್ರಂಥಗಳಿಂದ ದೃಢಪಟ್ಟಿದೆ. ಹಲವು ಪ್ರಾಚೀನ ಗ್ರಂಥಗಳಲ್ಲಿ ಪಿತೃ ಧರ್ಮ, ಶಿಷ್ಯಧರ್ಮ, ಮುನಿ ಧರ್ಮ, ರಾಜ್ಯ ಧರ್ಮ, ಪ್ರಜಾ ಧರ್ಮ ಸೇರಿದಂತೆ ಅನೇಕ ಧರ್ಮಗಳು ಉಲ್ಲೇಖವಾಗಿವೆ. ಈ ಧರ್ಮ ಎಂಬ ಪದ ಕೇವಲ ಒಂದು ಧರ್ಮಕ್ಕೆ ಸೀಮಿತವಾಗಿರದೆ, ಒಂದು ಸಮಾಜದ ಅಥವಾ ಸಾಮಾಜಿಕ ಸ್ವಾಸ್ಥ್ಯ ಕಾಪಾಡಿಕೊಳ್ಳುವ ಮಾಧ್ಯಮವಾಗಿತ್ತು ಎಂದು ತಿಳಿಸಿದರು.

ಧರ್ಮಕ್ಕೂ ಮತ ಧರ್ಮಕ್ಕೂ ಸಾಕಷ್ಟು ವ್ಯತ್ಯಾಸ ಕಾಣಬಹುದು. ದಾರ್ಶನಿಕವಾದಂತಹ ಚಿಂತನಾ ಲಹರಿಗಳು ಭಾರತದ ತಾತ್ವಿಕತೆಯಲ್ಲಿ ಹುಟ್ಟಿಕೊಂಡವು. ಈ ಚಿಂತನಾ ಲಹರಿಗಳನ್ನು ಒಟ್ಟಾರೆಯಾಗಿ ನೋಡಿದಾಗ ಪ್ರಧಾನವಾಗಿ ಕಾಣುವುದೇ ವೈದಿಕ ಚಿಂತನೆ ಹಾಗೂ ಜೈನ ಮತ್ತು ಬೌದ್ಧ ಚಿಂತನೆಗಳು. ವೈದಿಕ ಧರ್ಮ ಮಾನವನ ಬದುಕನ್ನು ದೈವ ನಿರ್ಣಯಕ್ಕೆ ಒಪ್ಪಿಸುತ್ತದೆ. ಆದರೆ ಶ್ರಮಣ ಪರಂಪರೆಯಿಂದ ಬಂದಂತಹ ಜೈನ ಧರ್ಮ ವೈದಿಕರು ಕಲ್ಪಿಸಿಕೊಟ್ಟಂತಹ ಪರಿಕಲ್ಪನೆಯಲ್ಲಿ ಬಂದಂತಹ ದೈವತ್ವವನ್ನು ನಿರಾಕರಿಸುತ್ತದೆ. ಹೀಗಾಗಿ ಧರ್ಮ ಸಿದ್ಧಾಂತವನ್ನು ತನ್ನ ತಾತ್ವಿಕತೆಯ ಹಿನ್ನೆಲೆಯಲ್ಲಿ ಬೆಳೆಸಿಕೊಳ್ಳುತ್ತದೆ ಎಂದರು.



ಮೈಸೂರು ವಿವಿ ಜೈನಶಾಸ್ತ್ರ ಮತ್ತು ಪಾಕೃತ ಅಧ್ಯಯನ ವಿಭಾಗದಲ್ಲಿ ಶುಕ್ರವಾರ ನಡೆದ ಜೈನಧರ್ಮದ ತಾತ್ವಿಕ ಅನುಸಂಧಾನ ವಿಷಯದ ವಿಚಾರ ಸಂಕಿರಣವನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ.ಪದ್ಮಾ ಶೇಖರ್ ಉದ್ಘಾಟಿಸಿದರು

ಇತ್ತೀಚಿನ ದಿನಗಳಲ್ಲಿ ಕೋಮುವಾದದ ಬಗ್ಗೆ ಆಗುತ್ತಿರುವ ಗಲಭೆಗಳನ್ನು ಕಣ್ಣಾರೆ ನೋಡುತ್ತಿದ್ದೇವೆ. ಇಂತಹ ಪ್ರಕ್ಷುಬ್ಧ ಹಾಗೂ ಅತಂತ್ರ ಸ್ಥಿತಿಯಲ್ಲಿ ಜೈನ ಧರ್ಮದ ತತ್ವಗಳು ಎಷ್ಟರ ಮಟ್ಟಿಗೆ ಮನುಕುಲದ ನೆರವಿಗೆ ಬರುತ್ತದೆ ಎಂಬುದನ್ನು ತಿಳಿದುಕೊಳ್ಳಬೇಕಾಗಿದೆ ಎಂದರು. ಕಾರ್ಯಕ್ರಮದಲ್ಲಿ ಮಾಳವೀಯ ಮಿಷನ್ ಶಿಕ್ಷಕರ ತರಬೇತಿ ಕೇಂದ್ರದ ನಿರ್ದೇಶಕಿ ಪ್ರೊ.ಸುತ್ತೂರು ಎಸ್.ಮಾಲಿನಿ, ಜೈನಶಾಸ್ತ್ರ ಮತ್ತು ಪಾಕೃತ ಅಧ್ಯಯನ ವಿಭಾಗದ ಅಧ್ಯಕ್ಷೆ ಪ್ರೊ.ಎಸ್.ಡಿ.ಶಶಿಕಲಾ ಇದ್ದರು.

ರಿಯಲ್ ಎಸ್ಟೇಟ್ ಉದ್ಯಮಿಗಳು ಬಡ ದಲಿತ ರೈತರ ಒಕ್ಕಲೆಬ್ಬಿಸಲು ಯತ್ನ

ಅಖಿಲ ಭಾರತ ಕೃಷಿ ಮತ್ತು ಗ್ರಾಮೀಣ ಕಾರ್ಮಿಕರ ಸಂಘದ ಗಂಭೀರ ಆರೋಪ

ಮೈಸೂರು, ಜ.3(ಜಿಎ)–ನಕಲಿ ದಾಖಲೆಗಳನ್ನು ಸೃಷ್ಟಿಸಿ, ಅನೇಕ ದಶಕಗಳಿಂದ ಕೃಷಿ ಮಾಡುತ್ತಾ ಜೀವನ ಸಾಗಿಸುತ್ತಿರುವ ಬಡ ದಲಿತ ರೈತರನ್ನು ಒಕ್ಕಲೆಬ್ಬಿಸಲು ರಿಯಲ್ ಎಸ್ಟೇಟ್ ವ್ಯಕ್ತಿಗಳು ಮುಂದಾಗಿದ್ದಾರೆ ಎಂದು ಅಖಿಲ ಭಾರತ ಕೃಷಿ ಮತ್ತು ಗ್ರಾಮೀಣ ಕಾರ್ಮಿಕರ ಸಂಘದ ಜಿಲ್ಲಾಧ್ಯಕ್ಷ ಚೌಡಳ್ಳಿ ಜವರಯ್ಯ ಆರೋಪಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ಜಿಲ್ಲೆಯ ಸರಗೂರು ತಾಲೂಕು ಕಂದಲಿಕೆ ಹೋಬಳಿ ಬಿದರಹಳ್ಳಿ ಗ್ರಾಮದ ಸರ್ವೆ ನಂ.83ರ ಗೋಮಾಳ ಭೂಮಿಯನ್ನು ಕಂದಾಯ ಇಲಾಖೆಯವರ ಕುಮ್ಮಕ್ಕಿನಿಂದ ರಿಯಲ್ ಎಸ್ಟೇಟ್‌ನವರು ನಕಲಿ ದಾಖಲೆಗಳನ್ನು ಸೃಷ್ಟಿಸಿಕೊಂಡು 40 ವರ್ಷಗಳಿಂದ ಈ ಭೂಮಿಯಲ್ಲಿ ಕೃಷಿ ಮಾಡುತ್ತಾ ಜೀವನ ಸಾಗಿಸುತ್ತಿರುವ ಬಡ ದಲಿತ ರೈತರನ್ನು ಬೆದರಿಸುತ್ತಿದ್ದಾರೆ ಎಂದರು.

131.17 ಎಕರೆ ಗೋಮಾಳದ ಪೈಕಿ ಬಡ ದಲಿತ ಕುಟುಂಬದವರು ತಲಾ 1 ಎಕರೆ, 2 ಎಕರೆಯಂತೆ ಸುಮಾರು 20 ಎಕರೆ ಪ್ರದೇಶದಲ್ಲಿ ಕಾಡು ಕಡಿದು ಉಳುಮೆ ಮಾಡುತ್ತಾ ಸಾಗುವಳಿಗೆ ಅರ್ಜಿ ಸಲ್ಲಿಸಿದ್ದರೂ ಈವರೆಗೆ ಭೂ ಮಂಜೂರಾತಿಯಾಗಿಲ್ಲ. ಈ ಭೂಮಿಯನ್ನು ಕಬಳಿಸಿ ಮಾರಾಟ ಮಾಡುವ ದುರುದ್ದೇಶದಿಂದ ವ್ಯಕ್ತಿಯೊಬ್ಬರು ನಕಲಿ ದಾಖಲೆಗಳನ್ನು ಸೃಷ್ಟಿಸಿಕೊಂಡು ಕಂದಾಯ ಮತ್ತು ಪೊಲೀಸ್ ಅಧಿಕಾರಿಗಳ ಕುಮ್ಮಕ್ಕಿನಿಂದ ವ್ಯವಸಾಯ ಮಾಡುತ್ತಿರುವ ಭೂಮಿಯಲ್ಲಿ ಸಿಸಿಟಿವಿಗಳನ್ನು ಅಳವಡಿಸಿ, ತಂತಿಬೇಲಿ ನಿರ್ಮಿಸಿ, ರೈತರ ವಿರುದ್ಧ ಸುಳ್ಳು ಕೇಸುಗಳನ್ನು ದಾಖಲಿಸಿ ಕಿರುಕುಳ ನೀಡುತ್ತಿದ್ದಾರೆ. ಜಿಲ್ಲಾಧಿಕಾರಿಗಳು ಈ ಬಗ್ಗೆ ಗಮನಹರಿಸಿ ಕ್ರಿಮಿನಲ್ ಮೊಕದ್ದಮೆ ದಾಖಲಿಸಿ, ಇವರ ಜತೆ ಶಾಮೀಲಾಗಿರುವ ಸ್ಥಳೀಯ ಕಂದಾಯ ಅಧಿಕಾರಿಗಳ ಅವರ ಮೇಲೆ ಕ್ರಮ ಕೈಗೊಂಡು ರೈತರಿಗೆ ನ್ಯಾಯ ದೊರಕಿಸಿಕೊಡಬೇಕೆಂದು ಮನವಿ ಮಾಡಿದರು.

ಗಿರಿಜನ ಸುರಕ್ಷಾ ವೇದಿಕೆ ರಾಜ್ಯಾಧ್ಯಕ್ಷ ಡಾ.ಗಣೇಶ್, ಸರಗೂರು ಕೃಷ್ಣ, ಸಂತ್ರಸ್ತ ರೈತರಾದ ಕೂಸಯ್ಯ, ರಾಜಣ್ಣ ಪತ್ರಿಕಾಗೋಷ್ಠಿಯಲ್ಲಿ ಹಾಜರಿದ್ದರು.

ಜನಸಾಮಾನ್ಯರು ಕನ್ನಡದ ಪ್ರಾಚೀನ ಕಾವ್ಯ ಅರ್ಥ ಮಾಡಿಕೊಳ್ಳುವ

ಸಾಹಿತ್ಯ ಪರಂಪರೆ ಕೊಟ್ಟವರು ವಿದ್ವಾಂಸ ಡಾ.ಎಲ್.ಬಸವರಾಜು

- ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ಯೋಜನಾ ನಿರ್ದೇಶಕ ಡಾ.ನೀಲಗಿರಿ ತಳವಾರ
- ಷಡಕ್ಷರ ಕವಿಯ ಶಬರ ಶಂಕರವಿಳಾಸಂ ವ್ಯಾಖ್ಯಾನ ಕೃತಿ, ರಾಮಧಾನ್ಯ ನಾಟಕ ಕೃತಿ ಬಿಡುಗಡೆ

ಮೈಸೂರು, ಜ.3(ಪಿಎಂ)– ಕನ್ನಡದ ಪ್ರಾಚೀನ ಕಾವ್ಯವನ್ನು ಸಾಮಾನ್ಯರು ಓದಿ ಅರ್ಥ ಮಾಡಿಕೊಳ್ಳುವ ಸಾಹಿತ್ಯ ಪರಂಪರೆಯನ್ನು ವಿದ್ವಾಂಸ ಡಾ.ಎಲ್.ಬಸವರಾಜು ಹಾಕಿಕೊಟ್ಟರು ಎಂದು ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ಯೋಜನಾ ನಿರ್ದೇಶಕ ಡಾ.ನೀಲಗಿರಿ ತಳವಾರ ಸ್ಮರಿಸಿದರು.

ಮೈಸೂರಿನ ಮಾನಸ ಗಂಗೋತ್ರಿಯ ಬಿಎಂಶ್ರೀ ಸಭಾಂಗಣದಲ್ಲಿ ಮೈಸೂರು ವಿವಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ಜಂಟಿ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಡಾ.ಎನ್.ಎಂ.ಗಿರಿಜಾಪತಿ ಅವರ ಷಡಕ್ಷರ ಕವಿಯ ಶಬರ ಶಂಕರವಿಳಾಸಂ ವ್ಯಾಖ್ಯಾನ ಕೃತಿ ಹಾಗೂ ರಾಮಧಾನ್ಯ ನಾಟಕ ಕೃತಿ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಷಡಕ್ಷರ ಕವಿ ಮಠದ ಸನ್ಯಾಸಿಯಾಗಿದ್ದವರು. ಅವರು ಮೂರು ಶ್ರೇಷ್ಠ ಕೃತಿಗಳನ್ನು ಕನ್ನಡಕ್ಕೆ ಕೊಟ್ಟಿದ್ದು, ಮೂರು ಕಬ್ಬಿಣದ ಕಡಲೆಯೇ. ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಪಂಪನ ಕಾವ್ಯ ಪ್ರವೇಶ ಕಠಿಣ ಅನ್ನಿಸಬಹುದು. ಆದರೆ ಸರಳ ಮಾಡಿಕೊಡುವ ಪ್ರಯತ್ನಗಳು ನಡೆದಿವೆ. ಪಂಪನ ಸಾಹಿತ್ಯ ವಿದ್ವಾಂಸರಿಗೆ ಸೀಮಿತವಾಗದೇ ಸಾಮಾನ್ಯರಿಗೂ ಅದು ದಕ್ಕಬೇಕೆಂಬ ನಿಟ್ಟಿನಲ್ಲಿ ಡಾ.ಎಲ್.ಬಸವರಾಜು ಯಶಸ್ವಿ ಪ್ರಯತ್ನ ನಡೆಸಿದರು ಎಂದು ಹೇಳಿದರು.



ಮೈಸೂರಿನ ಮಾನಸ ಗಂಗೋತ್ರಿಯ ಬಿಎಂಶ್ರೀ ಸಭಾಂಗಣದಲ್ಲಿ ಕೃತಿಗಳನ್ನು ಬಿಡುಗಡೆ ಮಾಡಲಾಯಿತು.

ಪಾರಂಪರಿಕ ವಿದ್ವಾಂಸರ ದೊಡ್ಡ ವಿರೋಧದ ನಡುವೆಯೇ ಬಸವರಾಜು ಅವರು 'ಸರಳ ಪಂಪ ಭಾರತ', 'ಸರಳ ಆದಿಪುರಾಣ' ಹೊರತಂದರು. ಬಿಎ ಕನ್ನಡ ಓದುವ ವಿದ್ಯಾರ್ಥಿ ಕೂಡ ಓದಲು ಸುಲಭ ಮಾರ್ಗ ಮಾಡಿಕೊಟ್ಟರು. ಮೂಲದ ಸೊಗಸು ಸೋರಿ ಹೋಗದ ರೀತಿಯಲ್ಲಿ ಕೊಟ್ಟಿದ್ದು ಅವರ ವಿಶೇಷ. ಅವರ ಈ ಪರಂಪರೆಯನ್ನು ಹಲವು ಲೇಖಕರು ಇಂದಿಗೂ ಮುಂದುವರೆಸಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ ಸಹ ಪ್ರಾಚೀನ ಕನ್ನಡ ಕಾವ್ಯಗಳ ಗದ್ಯಾನುವಾದ ಹೊರತಂದಿದೆ ಎಂದರು.

ಪಾಂಡಿತ್ಯ ಸೊರಗುತ್ತಿದೆ ಎಂಬ ಕೂಗು ಇಂದು ಕೇಳಿಬರುತ್ತಿದ್ದು, ಇದು ಸಂಪೂರ್ಣ ಸತ್ಯವೂ ಅಲ್ಲ, ಸುಳ್ಳೂ ಅಲ್ಲ. ಶೈಕ್ಷಣಿಕವಾಗಿ ಕನ್ನಡ ಕಷ್ಟ ಎನ್ನುವ ಅಪ್ರಿಯ ಮಾತುಗಳು ಸಹ ಕೇಳಿಬರುತ್ತಿವೆ. ಕನ್ನಡ ಅನ್ನದ ದಾರಿಯಲ್ಲವೆಂದು ಕನ್ನಡ ಓದುವವರ ಆಸಕ್ತಿ ಕಡಿಮೆ ಮಾಡುವ ಪ್ರಯತ್ನ ಕೂಡ ನಡೆಯುತ್ತಿದೆ. ಸ್ವತಃ ಕನ್ನಡಿಗರಿಗೇ ಕನ್ನಡ ಕಷ್ಟವಾದರೆ ಅನ್ಯ ಭಾಷಿಗರಿಗೆ ಸುಲಭವೇ ಎಂದು ಪ್ರಶ್ನಿಸಿದರು.

ಶೈಕ್ಷಣಿಕವಾಗಿ ಕನ್ನಡ ಓದುವುದು ಕಷ್ಟ ಎನ್ನುವುದು ಬಾಲಿಶ ಹೇಳಿಕೆ. ಬಿ.ಎಲ್.ರೈಸ್ ಸೇರಿದಂತೆ ಅನೇಕ ವಿದೇಶಿ ವಿದ್ವಾಂಸರೇ ಕನ್ನಡ ಅಧ್ಯಯನ ಮಾಡಿದ್ದಾರೆ ಎಂದರೆ ನಮಗೆ ಹೇಗೆ ತಾನೆ ಕಷ್ಟವಾದೀತು. ಕನ್ನಡ ಕಷ್ಟ ಎನ್ನುವ ಬೀಸು ಹೇಳಿಕೆಗಳು ಕನ್ನಡಕ್ಕೆ ಅಪಾಯಕಾರಿ. ಹೀಗೆ ಕನ್ನಡ ಉಪೇಕ್ಷಿಸುವ ಸನ್ನಿವೇಶದ ಅಂಚಿನಲ್ಲಿದ್ದೇವೆ. ಇದು ಆತಂಕಕಾರಿ ಎಂದು ಬೇಸರ ವ್ಯಕ್ತಪಡಿಸಿದರು. ಹುಣಸೂರು ಡಿ.ದೇವರಾಜ ಅರಸು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಧ್ಯಾಪಕ ಡಾ.ಬಿ.ವಿ.ವಸಂತ ಕುಮಾರ್, ರಂಗಕರ್ಮಿ ಪ್ರೊ.ಹೆಚ್.ಎಸ್.ಉಮೇಶ್, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕಿ ಡಾ.ಎನ್.ಕೆ.ಲೋಲಾಕ್ಷಿ ಮತ್ತಿತರರು ಹಾಜರಿದ್ದರು.

ಚುಂಚನಕಟ್ಟೆ ಶ್ರೀ ರಾಮದೇವರ ಜಾತ್ರಾ ಮಹೋತ್ಸವ



ಮೈಸೂರು,ಜ.3– ಜ.5 ರಿಂದ 20ರವರೆಗೆ ಚುಂಚನಕಟ್ಟೆ ಶ್ರೀರಾಮ ದೇವಾಲಯದಲ್ಲಿ ಈ ವರ್ಷದ ಜಾತ್ರಾ ಮಹೋತ್ಸವ ನಡೆಯಲಿದೆ. ಜ.15 ರಂದು ಬ್ರಹ್ಮರಥೋತ್ಸವ ಹಾಗೂ ಜ.17 ರಂದು ತೆಪ್ಪೋತ್ಸವ ನಡೆಯುವುದು ಎಂದು ಸಾಲಿಗ್ರಾಮ ತಾಲೂಕಿನ ತಹಶೀಲ್ದಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

16ನೇ ವರ್ಷದ ನಿಮ್ಮ ನೆನಪು



ಶ್ರೀಮತಿ **ಪುಟ್ಟಲಿಂಗಮ್ಮ**
(ಗಡಗ್ಗಲೆ ಬೋರೇಗೌಡರ ಧರ್ಮಪತ್ನಿ)
ಗಡಗ್ಗಲೆ ಬೋರೇಗೌಡರ ಕುಟುಂಬವರ್ಗದವರು, ಕೆ.ಜಿ.ಕೊಪ್ಪಲು, ಮೈಸೂರು

ಸೈಟು ಮಾರಾಟಕ್ಕಿದೆ
30x50 N/F
ಸರ್ಕಾರಿ ನೌಕರರ ಬಡಾವಣೆ
ಇಲವಾಲ
ಸಂಪರ್ಕಿಸಿ: 7338445412

Newly Constructed House For Sale
20x30 Two Storey house. 2 BHK on each floor with interiors.
Sathagalli B Zone, Opposite VTU College.
Price: 80 lakhs
(Slightly negotiable)
Call: 82966 58879

HELMETS WHOLESALE DEALERS
TYRE HOUSE ESTED 1988
AUTHORISED DEALERS FOR: VEGA,STUDDS,STEEL BIRD,AXOR,SMK.
FOR BULK ORDER
M/s.**TYRE HOUSE** #618, Chamaraja Double Road, Mysuru-570024
Contact : 7411559362

ಹೊಸ ವರ್ಷ ಹಾಗೂ ಸಂಕ್ರಾಂತಿ ಹಬ್ಬದ ಪ್ರಯುಕ್ತ
ಭಾರತದ ಬೃಹತ್ ಅಂತಾರಾಷ್ಟ್ರೀಯ ಬ್ರಾಂಡೆಡ್ ರೆಡಿಮೇಡ್ & ಫುಟ್‌ವೇರ್ ಸೇಲ್
ಇಂದಿನಿಂದ ಮಾರಾಟ ಭಾರಿ ರಿಯಾಯಿತಿ ದರದಲ್ಲಿ
ಮೈಸೂರಿನ ಬಂದಂತಮ್ಮ ಕಾಳಮ್ಮ ಸಮುದಾಯ ಭವನದಲ್ಲಿ ಮಾತ್ರ
ಪುರುಷರ, ಮಹಿಳೆಯರ, ಮಕ್ಕಳ ಬ್ರಾಂಡೆಡ್ ಶೂಸ್, ಫಾರ್ಮಲ್ ಶೂಸ್, ಜಾಗಿಂಗ್ ಶೂಸ್, ಫ್ಲಿಪ್ ಫ್ಲಾಪ್, ಸ್ಯಾಂಡಲ್ಸ್, ಸ್ಲಿಪರ್ಸ್ ಮತ್ತು ಪಾದರಕ್ಷೆಗಳು
ಅತಿ ಕಡಿಮೆ ಬೆಲೆಯಲ್ಲಿ ಶೇ. 30% ರಿಂದ 80% ರವರೆಗೆ ರಿಯಾಯಿತಿ


ರಿಂದ **30% OFF** ರವರೆಗೆ **80% OFF**

adidas NIKE puma CONVERSE lotto CATERPILLAR dressberry Roadster Reebok Sprandi HRX UNDER ARMOUR UNITED COLORS OF BENETTON anouk aurelia

ಪುರುಷರ, ಮಹಿಳೆಯರ ಮತ್ತು ಮಕ್ಕಳ ಬ್ರಾಂಡೆಡ್ ರೆಡಿಮೇಡ್ ಗಾರ್ಮೆಂಟ್ಸ್ & ಆಕ್ಸೆಸರೀಸ್ : ಫಾರ್ಮಲ್ ಪ್ಯಾಂಟ್ಸ್, ಜೀನ್ಸ್ ಪ್ಯಾಂಟ್ಸ್, ಫಾರ್ಮಲ್ & ಕ್ಯಾಷುಯಲ್ ಶರ್ಟ್ಸ್, ಲೋವರ್, ಶಾರ್ಟ್ಸ್, ಜಾಕೆಟ್ಸ್, ಸ್ವೆಟ್ ಶರ್ಟ್ಸ್, ಸ್ವೆಟರ್ಸ್, ಫುಲೋವರ್ (ವುಡೀಸ್), ಮಹಿಳೆಯರ ಮತ್ತು ಮಕ್ಕಳ ಕುರ್ತೀಸ್, ಲೆಗಿನ್ಸ್ & ಟಾಪ್ಸ್, ಜೀನ್ಸ್ ಪ್ಯಾಂಟ್, ಪ್ಲಾಜೋ ಮತ್ತು ಎಳೆಯ ಕಂದಮ್ಮಗಳ ಉಡುಪುಗಳು ಮತ್ತು ಮಹಿಳೆಯರ ಒಳಉಡುಪುಗಳು ಭಾರಿ ರಿಯಾಯಿತಿ ದರದಲ್ಲಿ ಮಾರಾಟ
MRP 600/- to 6000/- worth product **Now Just Rs. 150/- to 1200/-**
ಸ್ಥಳ : ಬಂದಂತಮ್ಮ ಕಾಳಮ್ಮ ಸಮುದಾಯ ಭವನ
ಅಪೊಲೊ ಆಸ್ಪತ್ರೆ ಸಿಗ್ನಲ್ (ಹತ್ತಿರ), ನ್ಯೂಕಾಂತರಾಜ ಅರಸ್ ರಸ್ತೆ, ಮೈಸೂರು
Free Parking Time : 10-00 am to 9-00 pm

ಇಂಪೋರ್ಟೆಡ್ ಮತ್ತು ಇಂಡಿಯನ್ ಕ್ರಾಕರಿ ವಸ್ತುಗಳ ಬೃಹತ್ ಮಾರಾಟ
ಮೈಕ್ರೋವೇವ್‌ಗೆ ಸಂಬಂಧಿಸಿದ ಗ್ಲಾಸ್ ಮತ್ತು ಪ್ಲಾಸ್ಟಿಕ್ ಐಟಂಗಳು, ಥೈಲ್ಯಾಂಡ್, ಫ್ರಾನ್ಸ್, ಜರ್ಮನಿಯ ಗ್ಲಾಸ್‌ವೇರ್, ಫ್ಯಾನ್ಸಿ ಪ್ಲಾಸ್ಟಿಕ್ ಐಟಂಗಳು, ಅಪ್ಪಟ ಸ್ಟೈನ್‌ಲೆಸ್ ಸ್ಟೀಲ್ ವಸ್ತುಗಳು ದೊರೆಯುತ್ತದೆ
ಕಡೆಯ 7 ದಿನಗಳು ಮಾತ್ರ
Luminarc MILTON CORELLE
50000 ಕ್ಕೂ ಮೇಲ್ಪಟ್ಟು ಗೃಹಬಳಕೆಯ ವಸ್ತುಗಳು ಒಂದೇ ಸೂರಿನಡಿಯಲ್ಲಿ ದೊರೆಯುತ್ತವೆ
upto **50% off**
1 ಕೆಜಿ Rs. 350/-
MILTON ಮಿಲ್ಟನ್
100% FOOD GRADE PURE MELAMINE
ಸ್ಥಳ : ಇನ್‌ಸ್ಟ್ಯೂಷನ್ ಆಫ್ ಇಂಜಿನಿಯರ್ಸ್ (ಆಡಿಟೋರಿಯಂ ಹಾಲ್) ಜೆ.ಎಲ್.ಬಿ. ರಸ್ತೆ, ಮೈಸೂರು

ಮೊದಲ ವರ್ಷದ ಸವಿನೆನಪು



ಶ್ರೀ ಜಯರಾಮ್ ರವರು

ಮಾಜಿ ಗ್ರಾಮ ಪಂಚಾಯಿತಿ ಸದಸ್ಯರು
ಜಿಲ್ಲಾ ಒಕ್ಕಲಿಗರ ಸಂಘದ ನಿರ್ದೇಶಕರು ಹಾಗೂ
ತಾಲೂಕು ಒಕ್ಕಲಿಗರ ಸಂಘದ ಸಹ ಕಾರ್ಯದರ್ಶಿ, ದಾಸನಕೊಪ್ಪಲು

ನಮ್ಮ ಬಾಳಿಗೆ ಬೆಳಕಾಗಿದ್ದ ನೀವು ನಮ್ಮನ್ನಗಲಿ ಇಂದಿಗೆ 1 ವರ್ಷ ಉರುಳಿದರು ಪ್ರತಿ ದಿನ, ಪ್ರತಿ ಕ್ಷಣ ನಿಮ್ಮ ನೆನಪಿನಲಿ ಜೀವ ಸವೆಸುತ್ತಿದ್ದೇವೆ. ನಿಮ್ಮ ಆತ್ಮಕ್ಕೆ ಸದಾ ಶಾಂತಿ ಕೋರುವ

ತಾಯಿ ಶ್ರೀಮತಿ ಮಹದೇವಮ್ಮ, ಪತ್ನಿ ಶ್ರೀಮತಿ ಜಯಲಕ್ಷ್ಮಿ, ಮಕ್ಕಳು, ಸಹೋದರರು, ಸಹೋದರಿಯರು, ಗ್ರಾಮಸ್ಥರು ಮತ್ತು ಬಂಧುಮಿತ್ರರು.

